ಅಧ್ಯಕ್ಷರು : ಅದೆಲ್ಲ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕಿತ್ತು. ಈಗ ಗಮನ ಸೆಳೆಯುವ ಸೂಚನೆ ಕೂಡ ಆಯಿತು. ಅದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ. ತಾವು ನಿನ್ನೆ ಮಾತನಾಡುತ್ತಿದ್ದೀರಲ್ಲ? ಈಗ ಶುರು ಮಾಡಿ.

(ಪರ್ಯಾಲೋಚನಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ)

ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2000

+ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಮಸೂದೆಯನ್ನು ಮಾನ್ಯ ಬೃಹತ್ ನೀರಾವರಿ ಸಚಿವರು ಮಂಡಿಸಿದ್ದಾರೆ. ಇದರ ಮೂಲ ಉದ್ದೇಶ ಈ ನೀರಾವರಿ ಬಳಕೆಯನ್ನು ನೀರಾವರಿ ಬಳಕೆದಾರರ ಸಂಘಗಳ ಮೂಲಕ ಮಾಡಬೇಕು. ಈಗ ಇದ್ದಂಥ, ನೀರಾವರಿ ಬಳಕೆ ಸರಿಯಾಗಿ ಆಗುತ್ತಿಲ್ಲ ಎನ್ನುವ ದೃಷ್ಟಿಯಿಂದ ಅದು ಒಂದು ಸಹಕಾರಿ ಕಾಯಿದೆ ಅಡಿಯಲ್ಲಿ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ಕಾಯಿದೆಗೆ ಸಮಗ್ರವಾದ ತಿದ್ದುಪಡಿ ಮತ್ತು ಕೆಲವು ಹೊಸ ವಿಧಿಗಳನ್ನು ಕೂಡ ಸೇರಿಸಿ ಇಲ್ಲಿ ತಂದಿದ್ದಾರೆ. ಬಹುಶಃ ಇದು ಹೊಸದೇನೂ ಅಲ್ಲ. ಈಗಾಗಲೇ ನೀರಾವರಿ ಸಹಕಾರ ಸಂಘಗಳು ರಾಜ್ಯದಲ್ಲಿ ಇದ್ದವು. ಆದರೆ ಅವುಗಳು ಸರಿಯಾಗಿ ನಡೆಯುತ್ತಿಲ್ಲ. ಬಹುಶಃ ಅಲ್ಲಿ ರಾಜಕೀಯ ಬಂದು ಏನೋ ಆಗಿ ಅವು ನಿಂತುಹೋಗಿವೆ. ಇಲ್ಲಿ ಮೊದಲನೆಯದಾಗಿ ಮೂರು ಹಂತದ ಒಂದು ವ್ಯವಸ್ಥೆಯನ್ನು ಇದರಲ್ಲಿ ಮಾನ್ಯ ಸಚಿವರು ಮಾಡಿದ್ದಾರೆ. ಮೊದಲನೆಯದಾಗಿ ನೀರು ಬಳಕೆದಾರರ ಶೃಂಗ ಮಟ್ಟದ ಒಕ್ಕೂಟ. ನೀರು ಬಳಕೆದಾರರ ವಿತರಣೆ ಮಟ್ಟದ ಒಕ್ಕೂಟ, ನೀರು ಬಳಕೆದಾರರ ಸಂಘಗಳು, ಹೀಗೆ ಮೂರು ಹಂತಗಳನ್ನು ಮಾಡಿದ್ದಾರೆ. ಬಹುಶಃ ಈ ಮೂರು ಹಂತವು 59ನೇ ಸಹಕಾರಿ ಕಾಯಿದೆಯಡಿ ತಾವು ರಿಜಿಸ್ಟ್ರೇಶನ್ ಮಾಡಿ ಅದನ್ನು ತರುತ್ತಿದ್ದೀರಿ. ಇಲ್ಲಿ ಒಂದನ್ನು ತಾವು ಹೇಳಬೇಕು. ಒಂದು ಬೃಹತ್ ನೀರಾವರಿ ಯೋಜನೆ ಇರುತ್ತದೆ, ಅಲ್ಲಿ ಗ್ರಾಮವೈಸ್ ಅದನ್ನೇನಾದರೂ ಮಾಡುತ್ತೀರೋ ಅಥವಾ ಕಾಲುವೆಗಳು ಏನು ಹೋಗುತ್ತವೆ ಈ ರೀತಿಯಾಗಿ ಒಂದೊಂದು ಸಂಘ ಎಂದು ಮಾಡುತ್ತೀರ ಹೇಗೆ ಎಂದು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ ಸುಮ್ಮನೆ ಊರಲ್ಲಿ ಎರಡು-ಮೂರು ತಂದು ನೀವು ಹೇಳಿದ್ದೀರೋ ಇಲ್ಲವೋ, ಮಂತ್ರಿಗಳಿಗೆ ಫೋನ್ ಮಾಡಿ ತಮಗೆ ಹೇಳಿದ್ದು ಮಾಡಿಸಿಕೊಂಡರು ಅಂತ ಅನ್ನಿಸಿಕೊಳ್ಳುವುದು, ಇದೆಲ್ಲ ನಡೆದಿದೆ. ಅದನ್ನು ಹೇಗೆ ಮಾಡುತ್ತೀರಿ ಎನ್ನುವುದನ್ನು ಕೂಡ ಹೇಳಬೇಕು. ಇಲ್ಲದಿದ್ದರೆ ಒಂದು ಬೃಹತ್ ನೀರಾವರಿ ಯೋಜನೆ ಇದೆ, ಅಲ್ಲಿ ಒಂದು ಸಂಘ ಅಂತ ಮಾಡುತ್ತೀರೋ ಅಥವಾ ಎಲ್ಲೆಲ್ಲಿ ಕಾಲುವೆಗಳು ಹೋಗುತ್ತದೆ ಅಥವಾ ಆ ಗ್ರಾಮಮಟ್ಟದಲ್ಲಿ ನೀರಾವರಿ ಸಭೆಗಳನ್ನು ಮಾಡುತ್ತೇವೆ ಎನ್ನುವುದನ್ನು ಕೂಡ ಕ್ಲಿಯರ್ ಆಗಿ ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಎಸ್.ಎಸ್. ಪಾಟೀಲರು ಏನು ಹೇಳಿದ್ದಾರೆ, ನಾನು ಈಗಾಗಲೇ ಕೆಲವು ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೆ. 12 ನೂರರಿಂದ 15 ನೂರು ಎಕರೆ ನೀರಾವರಿ ಭೂಮಿ ಏನು ಬರುತ್ತದೆ, ಅದರ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರಯೋಜನ ಪಡೆಯುವವರು ಸೇರಿ ಒಂದು ಸಂಘಟನೆ ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಇದರಲ್ಲಿ ನಿಜವಾಗಿ ತಾವು ಹಾಕಿದ ಉದ್ದೇಶ ಒಳ್ಳೆಯದಿದೆ. ಆದರೆ ಇದರಲ್ಲಿ ತಾವು ಇದು ಸಹಕಾರಿ ಕಾಯಿದೆಯಡಿ ರಿಜಿಸ್ಟ್ರೇಶನ್ ಆಗುತ್ತದೆ ಎನ್ನುವುದನ್ನು ಕೂಡ ಒಬ್ಬ ಹಿರಿಯ ಸಹಕಾರಿಯಾಗಿ ಇದರಲ್ಲಿ ತಪ್ಪಿಸಿದ್ದೀರಿ. ಬಹುಶಃ ನಿಮ್ಮ ಶೃಂಗ ಒಕ್ಕೂಟ ನೋಡಿ. '.............. ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು, ಇವರು ಅಧ್ಯಕ್ಷರಾಗಿರತಕ್ಕದ್ದು'. ಅಂದರೆ ಶಾಶ್ವತ ಅಧ್ಯಕ್ಷರು. ಇಲ್ಲಿ ಸಹಕಾರ ಕಾಯಿದೆ ಹೋಯಿತು. ಸಹಕಾರ ಕಾಯಿದೆಯಲ್ಲಿ ರಿಜಿಸ್ಟ್ರೇಶನ್ ಆದಾಗ ಅದಕ್ಕೆ ಅವಕಾಶ ಇಲ್ಲ. ಶಾಶ್ವತವಾಗಿ ಇರುವುದಕ್ಕೆ ನಮಗೆ ಅವಕಾಶ ಇಲ್ಲ. ಈಗ ಇಲ್ಲಿ ಪ್ಯಾರಲೆಲ್ ಆಗಿ ಮತ್ತೊಂದು ಕಾಯಿದೆಯನ್ನು ತರುತ್ತಿದ್ದೀರಿ. ಸಹಕಾರ ಸಂಘ ರಿಜಿಸ್ಟ್ರೇಶನ್ ಆದ ಬಳಿಕ ನೀವು ಇದನ್ನು ಬಿಟ್ಟುಕೊಟ್ಟು ನಿಮ್ಮದೇ ಆದ ಇದರೊಳಗೆ ಒಂದು ಕಾಯಿದೆ ತಂದು ಶಾಶ್ವತವಾದ ಅಧ್ಯಕ್ಷರು ನೀರಾವರಿ ಸಚಿವರು ಆಗುತ್ತಾರೆ. ಇದು ಸರಿಯೇನು? ದಯವಿಟ್ಟು ಇದನ್ನು ತೆಗೆಯಿರಿ. ಸಹಕಾರಿ ಕಾಯಿದೆಯಡಿ ರಿಜಿಸ್ಟ್ರೇಶನ್ ಆಗುವ ಮೂಲಕ ಅಲ್ಲಿ ಕೂಡ ಚುನಾಯಿತ ಅಧ್ಯಕ್ಷರು ಬರಲಿ. ಈಗ ಮೂರು ಹಂತ ಮಾಡಿದ್ದೀರಿ. ಪ್ರಾಥಮಿಕ ಸಂಘದಿಂದ ಮಧ್ಯಮಾವಧಿ ಸಂಘದವರೆಗೆ ಬರಲಿ. ಶೃಂಗ ಒಕ್ಕೂಟ ಅದು ಕೋ-ಆಪರೇಟಿವ್ ರಿಜಿಸ್ಟ್ರೇಶನ್ ಆದಮೇಲೆ ಅಲ್ಲಿಂದ ಚುನಾಯಿತ ಪ್ರತಿನಿಧಿಗಳು ಆರಿಸಿ ಬರುವಂಥ ವ್ಯವಸ್ಥೆಯನ್ನು ಮಾಡಬೇಕೇ ವಿನಹ ಇದರಲ್ಲಿ ಸಹಕಾರ ತತ್ವಕ್ಕೆ ವಿರುದ್ಧವಾಗಿ ಮಾಡುತ್ತಿದ್ದೀರಿ. ಬಹುಶಃ ಇಲ್ಲಿ ನಾನು ದಿವಂಗತ ಕೆ.ಹೆಚ್. ಪಾಟೀಲರನ್ನು ನೆನೆಸಿಕೊಳ್ಳಬೇಕಾಗುತ್ತದೆ. ಅವರು ಏನೇ ಮಾಡಿದರೂ ಕೂಡ ಸಹಕಾರ ತತ್ವದ ಮೇಲೆ ಎಲ್ಲ ರಿಜಿಸ್ಟ್ರೇಶನ್ ಮಾಡಿದರು, ಅದನ್ನು ಸಹಕಾರ ತತ್ವದ ಮೇಲೆ ನಡೆಸುವಂಥ ವ್ಯವಸ್ಥೆ ಮಾಡಿದರು. ದುರ್ದೈವದಿಂದ ಅವರ ಮಗನಾದ ನೀವು ಈಗ ಅರ್ಬನ್ ಬ್ಯಾಂಕ್ ಫೆಡರೇಶನ್‌ನ ಅಧ್ಯಕ್ಷರಿದ್ದೀರೋ ಏನೋ ಗೊತ್ತಿಲ್ಲ. ಆದರೆ ಇದನ್ನು ಸ್ವತಂತ್ರವಾಗಿ ನಡೆಸತಕ್ಕಂಥ ವ್ಯವಸ್ಥೆ ಮಾಡುವುದಕ್ಕೆ ನೀವು ಹೊರಟಿಲ್ಲ. ಇಲ್ಲಿ ಕೂಡ ಶಾಶ್ವತವಾದ ಅಧ್ಯಕ್ಷರು, ರಾಜಮಹಾರಾಜರು ಹೋದಮೇಲೆ ಸಹಕಾರ ತತ್ವದಲ್ಲಿ ಇಲ್ಲಿ ಬರುತ್ತಾರೆ. ಇದು ಹೋಗಬೇಕು. ದಯವಿಟ್ಟು ಅದನ್ನು ಬದಲಾವಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲಿ ಸಹಕಾರ ಸಂಘದ ಮಾದರಿ ಬೈಲಾವನ್ನು ತಾವು ಕಳಿಸಿದ್ದೀರಿ. ಈ ಬೈಲಾದಲ್ಲಿ ಕೂಡ ತಾವು ಹೇಳುತ್ತೀರಿ -

"ಎ-ವರ್ಗದ ನೀರಾವರಿ ರೈತರು ಸಂಘದ ಕಾರ್ಯಕ್ಷೇತ್ರದಲ್ಲಿ ಬರುವ ಮತ್ತು ಸಂಘದ ನೀರಾವರಿ ಯೋಜನೆಗಳಿಗೆ ಮಾಡುವುದಕ್ಕಾಗಿ ನೀರು ಪಡೆಯಲು ಸಮ್ಮತಿಸಿದ ಮತ್ತು ಸಹಕಾರ ಕಾಯಿದೆ ಮತ್ತು ನಿಯಮಗಳನುಸಾರ ನಿರ್ದಿಷ್ಟ ಅರ್ಹತೆಗಳನ್ನು ಹೊಂದಿದ ಯಾವನ್ನೊಬ್ಬ ಹೊಲದ ಮಾಲೀಕ, ವ್ಯಕ್ತಿ ಎ-ವರ್ಗದ ಸದಸ್ಯನಾಗಿರಬಹುದು"

ಇದು ಬಹಳ ಚೆನ್ನಾಗಿದೆ. ಮುಂದೆ ಹೇಳುತ್ತೀರಿ.

"ಸಂಘದ ಸದಸ್ಯರನ್ನಾಗಿ ಯಾವುದೇ ಒಬ್ಬ ವ್ಯಕ್ತಿಯನ್ನು ಸೇರಿಸಿಕೊಳ್ಳುವ ಅಧಿಕಾರವು ಸಂಘದ ಆಡಳಿತ ಮಂಡಳಿಗೆ ಇರತಕ್ಕದ್ದು"

ಇದು ಏಕೆ ಬೇಕಿತ್ತು? ದಯವಿಟ್ಟು ಇದನ್ನು ತಾವು ತೆಗೆಯಬೇಕು. ಇಲ್ಲದಿದ್ದರೆ ಅಲ್ಲಿ ರಾಜಕೀಯ ಶುರುವಾಗುತ್ತದೆ. ತಮಗೆ ಬೇಕಾದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ ಮತ್ತು ಬೇಡವಾದವರನ್ನು

ಬಿಡುತ್ತಾರೆ. ತಾವು ನೇರವಾಗಿ ಇದರಲ್ಲಿ ಹೇಳಬೇಕು, ಯಾರು 12 ರಿಂದ 15 ನೂರು ಎಕರೆಯೊಳಗೆ ಸಾಗುವಳಿ ಮಾಡುತ್ತಾರೆ ಅಲ್ಲಿ ಬರತಕ್ಕಂಥ ಎಲ್ಲರೂ ಮೆಂಬರ್ಸ್ ಆಗತಕ್ಕಂಥ ಅವಕಾಶ ಇರಬೇಕು. ನೀವು ಆಡಳಿತ ಮಂಡಳಿಗೆ ಅಧಿಕಾರ ಕೊಟ್ಟರೆಂದರೆ ರಾಜಕೀಯ ಶುರುವಾಗುತ್ತದೆ. ಆಗ ಅವರು ತಮಗೆ ಬೇಡವಾದವರನ್ನು ಮೆಂಬರ್ಸ್ ಮಾಡಿಕೊಳ್ಳುವುದಿಲ್ಲ. ಆಮೇಲೆ ಕೋರ್ಟಿಗೆ ಅಡ್ಡಾಡಬೇಕಾಗುತ್ತದೆ. ಆದ್ದರಿಂದ ಇದರ ಅವಶ್ಯಕತೆ ಇರಲಿಲ್ಲವೆಂದು ನನ್ನ ಭಾವನೆ. ಅದರ ಮೇಲೆ ಹೇಳುತ್ತೀರಿ -

"......ಆದರೆ ಸರ್ಕಾರವು ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ" ಇದು ಸರಿ ಸರ್ಕಾರವೇ ಮಾಡಬೇಕೆಂದರೆ ಹೇಗೆ? ಆದರೂ ಕೂಡ ಕೊಡಬೇಕಾಗುತ್ತದೆ. ಇರಲಿ.

"ಸರ್ಕಾರದ ಶೇರು ಹಣ ಪಾವತಿಯಾದ ದಿನಾಂಕದಂದು ಸದಸ್ಯತ್ವಕ್ಕೆ ಪ್ರವೇಶ ನೀಡಿದೆಯೆಂದು ಭಾವಿಸಲಾಗುವುದು"

ಇದೇ ಮಾತನ್ನು ಏಕೆ ಕೆಳಗೆ ಹೇಳಬಾರದು ಅಲ್ಲಿ ಪ್ರಾವಿಜನ್ ಇದೆ. ಯಾರು ಆ ಏರಿಯಾದಲ್ಲಿ ಬರುತ್ತಾರೋ, ಹಾಗೆ ಬರತಕ್ಕವರೆಲ್ಲರೂ ಕೂಡ ಅಲ್ಲಿ ಮೆಂಬರ್ಸ್ ಆಗಬಹುದು ಎಂದು ಕೂಡ ಕ್ಲಿಯರ್ ಆಗಿ ಮೇಲೆ ಹೇಳಿದ್ದೀರಿ. ಹಾಗಿರುವಾಗ ಕೆಳಗೆ ಏಕೆ ಹಾಕಿದ್ದೀರಿ? ಹೀಗೆ ಮಾಡಿದಾಗ ಅಧಿಕಾರ ಬಂತು. ತಮಗೆ ಬೇಕಾದವರನ್ನು ಮೆಂಬರ್ ಆಗಿ ಮಾಡಿಕೊಳ್ಳುತ್ತಾರೆ, ಬೇಡವಾದವರನ್ನು ಬಿಟ್ಟುಬಿಡುತ್ತಾರೆ. ಇದು ಆಗತಕ್ಕಂಥ ಒಂದು ಪರಿಸ್ಥಿತಿ ಇರುತ್ತದೆ. ಇಲ್ಲಿ ತಾವು ಆಕ್ಟ್‌ನಲ್ಲಿ ಹೇಳಿದ್ದೀರಿ, ಆದರೆ ಬೈಲಾನಲ್ಲಿ ಬಿಟ್ಟಿದ್ದೀರಿ. ಇದನ್ನು ಹಾಕುವುದಕ್ಕೆ ತಾವು ದಯವಿಟ್ಟು ಹೇಳಬೇಕು. ಅದನ್ನು ಕೂಡ ತಾವು ಸೇರಿಸಬೇಕು. ಇದನ್ನು ನನಗನ್ನಿಸುತ್ತದೆ ಏನೆಂದರೆ, ಇಷ್ಟೊಂದು ನಿಮ್ಮ ಕಾಯಿದೆಯಲ್ಲಿ ಹೇಳುವುದು ಬೇಕಾಗಿರಲಿಲ್ಲ. ಪ್ರಾರಲೆಲ್ ಆಗಿ ಎಲ್ಲ ಹೇಳಿಬಿಟ್ಟಿದ್ದೀರಿ. ಇದನ್ನು ನೇರವಾಗಿ ಹೇಳಬೇಕಿತ್ತು. ಸ್ವಲ್ಪವೇ ಸಾಕಾಗಿತ್ತು. ಕಾಯಿದೆ ಪ್ರಕಾರ 59ರ ಅಡಿಯಲ್ಲಿ ರಿಜಿಸ್ಟ್ರೇಶನ್ ಆಗಬೇಕು ಅಂತ ಒಂದು ಹೇಳಿ ಅವರಿಗೆ ನಾವು ವಹಿಸಿಕೊಡುತ್ತೇವೆ ಎನ್ನುವುದನ್ನು ಕಾಯಿದೆಯಲ್ಲಿ ಸೇರಿಸಿಕೊಂಡಿದ್ದರೆ ಸಾಕಾಗಿತ್ತು. ನೀವು ಸಹಕಾರ ಕಾಯಿದೆಯಲ್ಲಿ ಹೇಳಿರತಕ್ಕಂಥ ವಿಷಯಗಳನ್ನು ಎಲ್ಲ ಇಲ್ಲಿ ಹೇಳಿಬಿಟ್ಟಿದ್ದೀರಿ. ಪುನಃ ಮತ್ತೊಂದು ಸಹಕಾರ ಕಾಯಿದೆ ಇರುವಾಗ ಅದರ ಅಡಿಯಲ್ಲಿ ರಿಜಿಸ್ಟ್ರೇಶನ್ ಆಗುವಾಗ, ಬೈಲಾದಲ್ಲಿ ಅದನ್ನೆಲ್ಲ ನೀವು ಹೇಳಬಹುದು. ಆದರೆ ಈ ಕಾಯಿದೆಯಲ್ಲಿ ಇಷ್ಟೊಂದು ಹೇಳಬೇಕಾದ ಅವಶ್ಯಕತೆ ಇರಲಿಲ್ಲವೆಂದು ನನ್ನ ವಾದ. ಆ ಕಾರಣದಿಂದ ಈ ಒಕ್ಕೂಟದಲ್ಲಿ ಶಾಶ್ವತ ಅಧ್ಯಕ್ಷರನ್ನಾಗಿ ಏನು ಮಾಡಿದ್ದೀರಿ, ಇಲ್ಲಿ ನೋಡಿ -

"ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಅಧ್ಯಕ್ಷರು ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು ಸಹ ಅಧ್ಯಕ್ಷರು" ಎಂದಿದೆ.

ಇದು ಯಾವ ಸಹಕಾರಿ ತತ್ವ? ಇದು ಯಾವ ಪ್ರಜಾಪ್ರಭುತ್ವ? ಇದು ಸಹಕಾರ ತತ್ವಕ್ಕೆ ಒಂದು ಅಪಚಾರ. ಅನಂತರ "ಸರ್ಕಾರದ ನೀರಾವರಿ ಇಲಾಖೆಯ ಕಾರ್ಯದರ್ಶಿಯವರು ಇದಕ್ಕೆ ಮೆಂಬರ್" ಆಗಿರುತ್ತಾರೆ.

"ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ನೀರಾವರಿ ವ್ಯವಸ್ಥಾಪನೆ ಸಹಭಾಗಿತ್ವದ ಕ್ಷೇತ್ರದಲ್ಲಿ ಪರಿಣಿತನಾದ ಒಬ್ಬ ವ್ಯಕ್ತಿ" ಇದನ್ನು ಹಾಕುವುದೇ ಬೇಕಾಗಿಲ್ಲ, ಆದರೂ ನೀವು ಇದನ್ನು ಹಾಕಿಯೇ ಬಿಟ್ಟಿದ್ದೀರಿ. ಇದು ರೂಲ್ 53ರಲ್ಲಿದೆ, 59 ರಲ್ಲಿದೆ. ಬೇಕಾದಷ್ಟು ಇದೆ, ಅದರಲ್ಲಿ ಯಾವನ್ನಾದರೂ ಹಾಕಿಕೊಳ್ಳಬಹುದು, ಆದರೆ, ಅವರಲ್ಲಿ ಇವರೊಬ್ಬರು ಸೇರುತ್ತಾರೆ. ನೀವು ಅದರೊಳಗೇ ಇರತಕ್ಕ ಪರಿಣಿತರನ್ನು ಹಾಕಿಕೊಳ್ಳಬಹುದಲ್ಲ. ಯಾರನ್ನು ಹಾಕಬೇಕೆಂದು ಆ ಆಕ್ಟನಲ್ಲಿದೆ. ಆಮೇಲೆ "ಎಲ್ಲಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಿಗಳ ಅಧ್ಯಕ್ಷರು" ಅವರನ್ನೂ ಕಡ್ಡಾಯ ಮಾಡಿದ್ದೀರಿ. ಅವರು ಬರಲಿ, ಅಧ್ಯಕ್ಷರಾಗುತ್ತಾರೆ. ನನ್ನ ಕೇಳಿದರೆ ಅವರು ಕಡ್ಡಾಯವಾಗಿ ಬರುವುದು ತಪ್ಪು. ಯಾರಾದರೂ ಕೂಡ ಕಡ್ಡಾಯವಾಗಿ ಬರಬಾರದು. ಅವರ ಪೈಕಿಯೇ ಒಬ್ಬರನ್ನು ಚುನಾವಣೆ ಮಾಡಿ ಬೇಕಾದರೆ ತೆಗೆದುಕೊಂಡು ಬನ್ನಿ. ಚುನಾಯಿತ ಪ್ರತಿನಿಧಿಗಳು ಇಲ್ಲಿರುವಾಗ, ಸಹಕಾರಿ ಕಾಯಿದೆಗೆ ವಿರುದ್ಧವಾಗಿ ಶಾಶ್ವತವಾದ ವ್ಯವಸ್ಥೆಯನ್ನು ಮಾಡತಕ್ಕಂಥಾದ್ದು ತಪ್ಪು. ಆಮೇಲೆ "ನೀರು ಬಳಕೆದಾರರ ಶೃಂಗ ಮಟ್ಟದ ಒಕ್ಕೂಟದ ಉಪ ವಿಧಿಗಳಿಗೆ ಅನುಸಾರವಾಗಿ ಚುನಾಯಿತರಾದ ರಾಜ್ಯದಲ್ಲಿನ ವಿವಿಧ ಯೋಜನೆಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು" ಆಮೇಲೆ ನೀರು ಬಳಕೆದಾರರ ಶೃಂಗಮಟ್ಟದ ಒಕ್ಕೂಟದ ಸದಸ್ಯರುಗಳ ಪೈಕಿಯಿಂದ ಉಪಾಧ್ಯಕ್ಷರನ್ನು ಚುನಾಯಿಸತಕ್ಕದ್ದು - ಉಪಾಧ್ಯಕ್ಷರಾಗಿ ಬರುವವರು ಚುನಾಯಿತರಾಗಿ ಬರಬೇಕು. ಚುನಾಯಿತ ಪ್ರತಿನಿಧಿಗಳು, ಕೆಳಗಿನಿಂದ ಬರತಕ್ಕವರು ಅಲ್ಲಿ ಅಧ್ಯಕ್ಷರಾಗಿ, ಉಪಾಧ್ಯಕ್ಷರಿಗೆ ಚುನಾವಣೆ ಮಾಡಬೇಕು. ಅದು ಯಾವುದೇ ಅಧಿಕಾರ ಇಲ್ಲದ ಒಂದು ಜಾಗ. ಅಧ್ಯಕ್ಷರು ಮತ್ತು ಕೋಶಾಧ್ಯಕ್ಷರುಗಳು ಅಲ್ಲಿ ಶಾಶ್ವತವಾಗಿ ಸದಸ್ಯರಾಗಿ ಬಿಡುತ್ತಾರೆ. ಇದೂ ಕೂಡ ಕೋರ್ಟಿಗೆ ಹೋದರೆ ಸಹಕಾರಿ ಕಾಯಿದೆಗೆ ವಿರುದ್ಧವಾಗುತ್ತದೆ. ಯಾರಾದರೂ ಕೋರ್ಟಿಗೆ ಹೋದರೆ, ಇದು ಖಂಡಿತವಾಗಿಯೂ ನಿಲ್ಲುವುದಿಲ್ಲ. ಇದು ತಪ್ಪಾಗುತ್ತದೆ. ನೀವೊಬ್ಬರು ಹಿರಿಯ ಸಹಕಾರಿಗಳಾಗಿ ಇದು ಸರಿಯೇ ಎಂಬುದನ್ನು ಚಿಂತನೆ ಮಾಡಬೇಕಾಗುತ್ತದೆ. ಆ ಕಾರಣದಿಂದ ಕೂಡ ದಯವಿಟ್ಟು ಇದನ್ನು ಬದಲಾವಣೆ ಮಾಡಬೇಕು. ತಾವು ಇದನ್ನು ಮಾಡುತ್ತಾ ಇರುವುದು ಬಹಳ ಸಂತೋಷ. ಆದರೆ, ದುರ್ದೈವದಿಂದ ಸಹಕಾರಿ ಸಂಘಗಳು ಅದರಲ್ಲಿ ರಾಜಕೀಯ ಬಂದೇ ನಿಂತಿರುವುದು. ಇವತ್ತೇನಾಗಿದೆ, ನೀವು ಮಾಡುವ ತಿದ್ದುಪಡಿಯಿಂದ, ಅವರನ್ನೇ ತರುತ್ತಿದ್ದರೆ ದಯವಿಟ್ಟು ಇದನ್ನು ಮಾಡುವುದಕ್ಕೆ ಹೋಗಬೇಡಿ. ರೈತರು ಮತ್ತಷ್ಟು ತೊಂದರೆಗೆ ಒಳಗಾಗುತ್ತಾರೆ. ಇಂಥ ಬಳಕೆದಾರರ ಸಹಕಾರ ಸಂಘಗಳನ್ನು ಮಾಡುವುದರಿಂದ ಇನ್ನಷ್ಟು ತೊಂದರೆಗೆ ಒಳಗಾಗುತ್ತಾರೆ. ನೀರಿನ ಬಳಕೆ ಸಮರ್ಪಕವಾಗುವುದಿಲ್ಲ. ಪ್ರತಿ ಹಳ್ಳಿ, ಹಳ್ಳಿಗಳಲ್ಲಿ ನೀರಿನ ತೊಂದರೆ ಇದೆ. ಇದೊಂದು ಸಂಘ ಮಾಡಿದರೆ ಮತ್ತೆ ಅದರಿಂದ ಬೇರೆ ತೊಂದರೆಗಳು ಆಗುತ್ತದೆ. ಆ ಕಾರಣದಿಂದ ಇವುಗಳನ್ನು ಸ್ವತಂತ್ರವಾಗಿ ನಿರ್ವಹಣೆ ಮಾಡತಕ್ಕಂಥ ಯಾವುದೇ ಸರ್ಕಾರದ ಹಸ್ತಕ್ಷೇಪ ಇಲ್ಲದಂತಹ ಸಂಘಗಳನ್ನು ಮಾಡಿ ಸಂಪೂರ್ಣವಾಗಿ ರೈತರಿಗೆ ಅಧಿಕಾರ ಕೊಡುವಂಥಾದ್ದನ್ನು ಮಾಡಿ ಆ ರೀತಿಯಾಗಿ ದಯವಿಟ್ಟು ಇವುಗಳನ್ನು ರಿಜಿಸ್ಟ್ರೇಶನ್ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದೀರಿ. ಬಹಳ ಸಂತೋಷ. ಆದರೆ, ನೀರು ಕೊಡುವಂಥ ಪ್ರಮಾಣ ಹೇಗೆ ಕೊಡುತ್ತೀರಿ? ಇದರಲ್ಲಿ ನೀರಿನ ಪ್ರಮಾಣವನ್ನು ಸಂಗ್ರಹಣ ಮಾಡಿಕೊಳ್ಳುವುದು ಎಂದು ಹೇಳಿದ್ದೀರಿ. ಆದರೆ, ಯಾವ

ರೀತಿಯಾಗಿ ಸಂಗ್ರಹಣ ಮಾಡಿಕೊಳ್ಳಬೇಕು? ಆ ನೀರು ಸಂಗ್ರಹಣ ಮಾಡಿಕೊಳ್ಳುವುದಕ್ಕೆ ಮತ್ತೊಂದು ಏನಾದರೂ ಅವರಿಗೆ ಕಟ್ಟಿಕೊಡುತ್ತೀರಾ? ನೀವು ಯಾವ ರೀತಿಯಾಗಿ ನೀರು ಕೊಡುತ್ತೀರಿ? ಆ ನೀರಿನ ಪ್ರಮಾಣ ಯಾವ ರೀತಿ ಹಂಚಿಕೊಳ್ಳಬೇಕು? ಇದನ್ನೆಲ್ಲಾ ಈ ಕಾಯಿದೆಯಲ್ಲಿ ಹೇಳಬೇಕಾಗುತ್ತದೆ. ನೀರನ್ನು ಯಾವ ರೀತಿಯಾಗಿ ಆ ಸಂಘಗಳಿಗೆ ಕೊಡಬೇಕು? ಅವರು ಯಾವ ರೀತಿಯಾಗಿ ಹಂಚಿಕೊಳ್ಳಬೇಕು? ಆಮೇಲೆ, ಅದಕ್ಕೆ ಎಷ್ಟು ಪ್ರಮಾಣದಲ್ಲಿ ಹಣ ನಿಗಧಿ ಮಾಡಬೇಕು? ಉದಾಹರಣೆಗೆ, ಹುಕ್ಕೇರಿ ಕೋ-ಆಪರೇಟಿವ್ ಎಲೆಕ್ಟ್ರಿಕಲ್ ಸೊಸೈಟಿ ಇದೆ. ನಿಜವಾಗಿಯೂ ಅದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ, ಇದನ್ನು ಆ ರೈತರಿಗೆ ಕೊಟ್ಟರೆ, ತಾವು ಏನು ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದಾರಲ್ಲ, ನಿಶ್ಚಿತವಾಗಿ ಆ ದೃಷ್ಟಿಯಿಂದ ಬಹಳ ಒಳ್ಳೆಯದಾಗುತ್ತದೆ. ಆದ್ದರಿಂದ ನೀವು ಈಗ ತಂದಿರುವುದನ್ನೂ ನಾನು ಸ್ವಾಗತ ಮಾಡುತ್ತೇನೆ. ಆದರೆ, ಇದರಲ್ಲಿರತಕ್ಕ ಕೆಲವು ತಿದ್ದುಪಡಿಗಳು, ಅದು ಸಂಪೂರ್ಣವಾಗಿ ಸಹಕಾರಿ ತತ್ವದ ಮೇಲೆ ನಡೆಯಬೇಕು. ಸಂಪೂರ್ಣವಾಗಿ ಸ್ವಾಯತ್ತತೆ ಇರಬೇಕು. ಆ ರೀತಿಯಾಗಿ ಮಾಡದಿದ್ದರೆ ಇದನ್ನು ಹೊಡೆಸಿರಿ. ಇದರಲ್ಲಿ ರಾಜಕೀಯ ಪ್ರವೇಶವಾಗುತ್ತದೆ. ಒಂದೊಂದು ಊರಿನಲ್ಲಿ ಎರಡೆರಡು ರಿಜಿಸ್ಟ್ರೇಷನ್ ಮಾಡಿಕೊಂಡು ಬಂದಿದ್ದಾರೆ. ಆಮೇಲೆ ಉಳಿದ ಸದಸ್ಯರನ್ನು ಮಾಡಿಕೊಳ್ಳಲಿಲ್ಲ. ಕನಿಷ್ಟ ನಾನೇನು ಹೇಳುತ್ತೇನೆ ಎಂದರೆ, ಎರಡೂ ಸೊಸೈಟಿ ಸದಸ್ಯರನ್ನು ಕೂಡಿಸಿ ಚುನಾವಣೆ ಮಾಡಿಕೊಡಿ. ನೀವಿನ್ನೂ ಅವರಿಗೆ ನಿರ್ದಿಷ್ಟವಾಗಿ ಏರಿಯಾವನ್ನೇ ಮಾಡಿಕೊಟ್ಟಿಲ್ಲ. ಈಗಾಗಲೇ ರಿಜಿಸ್ಟ್ರೇಶನ್ ಆಗಿಬಿಟ್ಟವು. ಯಾವ ಏರಿಯಾದವರು ಎಲ್ಲಿ ಬರುತ್ತಾರೆಂದು ನೀವು ಹೇಳುತ್ತೀರಿ? ನೀವಿನ್ನೂ ಅವರಿಗೆ ಹಂಚಿಕೊಟ್ಟಿಲ್ಲ. ನೀವು ಇಷ್ಟು ಜನ ಇರಬೇಕು, ನಿಮಗೆ ಇಷ್ಟು ಏರಿಯಾ ಬರುತ್ತೆ ಎಂಬುದನ್ನು ಎಲ್ಲಿಯೂ ಹೇಳಿಲ್ಲ. ಒಂದೊಂದು ಊರಿಗೆ ಎರಡೆರಡು, ಮೂರು ಮೂರು ರಿಜಿಸ್ಟ್ರೇಷನ್ ಬಂದವು.

ಶ್ರೀ ಪ್ರಕಾಶ್ ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, ಒಂದೊಂದು ಊರಿಗೆ ಎರಡೆರಡು ರಿಜಿಸ್ಟ್ರೇಷನ್ ಎಲ್ಲಿಯೂ ಆಗಿಲ್ಲ. ಅವರು ಸಂಪೂರ್ಣವಾಗಿ ಅಭ್ಯಾಸ ಮಾಡಿಕೊಂಡು ಬಂದು ಮಾತನಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ : ನಾನು ನೇರವಾಗಿ ಹೇಳುತ್ತೇನೆ, ಎರಡೆರಡು ಆಗಿಲ್ಲ. ಎರಡೆರಡು ಬಂದಿದ್ದವು, ಒಂದು ಕಾಂಗ್ರೆಸ್‌ಗೆ ಬೇಕಾಗಿದ್ದನ್ನು ಮಾಡಿದ್ದಾರೆ. ನಾನು ನೇರವಾಗಿ ಆಪಾದನೆ ಮಾಡುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ : ಯಾವ ಊರಿನಲ್ಲಿ ಮಾಡಿದ್ದಾರೆಂಬುದನ್ನು ಸದಸ್ಯರು ಖಚಿತವಾಗಿ ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಒಂದೇ ಮಾಡಿದ್ದಾರೆ, ನಾನು ಇಲ್ಲ ಎಂದು ಹೇಳಿಲ್ಲಿಲ್ಲ. ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಇದರಲ್ಲಿ ಏರಿಯಾ ಬಗ್ಗೆ ಹೇಳಿಲ್ಲ.

ಶ್ರೀ ಎಸ್.ಜಿ. ನಂಜಯ್ಯನ ಮಠ್ : ಎರಡೆರಡು ಎಲ್ಲಿಯೂ ಮಾಡಿಲ್ಲ. ಎಲ್ಲೆಲ್ಲಿ ನೀರಾವರಿ ಭೂಮಿಗಳು ಹೆಚ್ಚಾಗಿರುತ್ತವೆ, ಅಲ್ಲಿ ಮಾಡಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಅವರು ಹಿರಿಯ ಸಹಕಾರಿಗಳು, ಅವರಿಗೆ ಆ ಜ್ಞಾನ ಇದೆಯೆಂದು ನಾನು ಹೇಳುತ್ತಿದ್ದೇನೆ. ಇಲ್ಲದೇ ಹೋಗಿದ್ದರೆ, ನಾನು ಇದನ್ನೆಲ್ಲಾ ಹೇಳುತ್ತಿರಲಿಲ್ಲ.

ಶ್ರೀ ಎಸ್.ಜಿ. ನಂಜಯ್ಯನ ಮಠ್ : ಕೃಷ್ಣಾ ಮೇಲ್ದಂಡೆಯ ಭಾಗದಲ್ಲಿ ಆಗಿದ್ದಾವೆಯೇ, ಮಲಪ್ರಭಾ ಮೇಲ್ದಂಡೆಯಲ್ಲಿ ಆಗಿದ್ದಾವೆಯೇ ಎಂಬುದನ್ನು ಅವರು ಹೇಳಲಿ. ಎಲ್ಲಿ ಎರಡು ಸೊಸೈಟಿಗಳಾಗಿವೆ ಎಂಬುದನ್ನು ನಿಶ್ಚಿತವಾಗಿ ಹೇಳಿದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ನಿಶ್ಚಿತವಾಗಿ ಇದರ ಉದ್ದೇಶ ಸಫಲವಾಗಬೇಕು. ಆದಾಗಬೇಕೆಂದರೆ, ಈ ಸಂಘಗಳನ್ನು ಸ್ವತಂತ್ರವಾಗಿ ಬಿಡುತ್ತಿದ್ದರೆ, ಅದನ್ನು ಮಾಡಿ. ಇಲ್ಲದೇ ಹೋದರೆ ಇನ್ನಷ್ಟು ತೊಂದರೆಗಳು ಬರುತ್ತವೆ. ನೀವು ತರತಕ್ಕ ತಿದ್ದುಪಡಿಯನ್ನು ನೋಡಿದರೆ, ಈ ಸಂಘಗಳನ್ನು ಮಾಡಿ ರೈತರನ್ನು ಹಾಳು ಮಾಡುತ್ತೀರಿ. ಇದರಿಂದ ರೈತರು ಮತ್ತಷ್ಟು ತೊಂದರೆಯಲ್ಲಿ ಬರುತ್ತಾರೆ. ಆ ಕಾರಣದಿಂದ ನಾನು ಹೇಳುತ್ತೇನೆ. ಅವರು ನೇರವಾಗಿ ಸೌಹಾರ್ದ ಆಕ್ಟನ್ನು ಜಾರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಮುಂದೆ ಇನ್ನೊಂದು ಕಾಯಿದೆಯಲ್ಲಿ ಏನೇನು ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ. ಇದು ಸೌಹಾರ್ದ ಆಕ್ಟ್ ಎಂದು ಹೇಳುವುದಕ್ಕೆ ಬರದಹಾಗೆ ಮಾಡಿಕೊಳ್ಳಿ. ಇದು ಸೌಹಾರ್ದ ಕಾಯಿದೆಯಡಿಯಲ್ಲಿ ಬರಬೇಕು. ತಾವು ಅರ್ಬನ್ ಬ್ಯಾಂಕ್ ಫೆಡರೇಷನ್ ಅಧ್ಯಕ್ಷರು ಎಂಬ ದೃಷ್ಟಿಯಿಂದ ಹೇಳುತ್ತೇನೆ. ಏಕೆಂದರೆ, ಅರ್ಬನ್ ಬ್ಯಾಂಕ್ ಫೆಡರೇಷನ್‌ನ್ನಿನವರು ಮಾನ್ಯ ಡಿ.ಕೆ. ಶಿವಕುಮಾರ್ ಕಾರ್ಯಕ್ರಮಕ್ಕೆ ಬರುವುದಿಲ್ಲವೆಂದು ಬಾಯ್‌ಕಾಟ್ ಮಾಡಿ ಬಂದಿಲ್ಲ.

ಅಧ್ಯಕ್ಷರು : ಇಲ್ಲಿ ಅದೆಲ್ಲಾ ಬೇಡ, ಇಲ್ಲಿರತಕ್ಕ ವಿಷಯದ ಬಗ್ಗೆ ಮಾತ್ರ ಮಾತನಾಡಿ. ನೀರಾವರಿ ಸಹಕಾರ ಸಂಘಗಳ ಬಗ್ಗೆ ಮಾತನಾಡಿ. ಅವರು ಬಾಯ್‌ಕಾಟ್ ಮಾಡಿದ್ದಾರೋ ಇಲ್ಲವೋ ಅದು ಬೇರೆ ವಿಷಯ.

ಶ್ರೀ ಎಸ್.ಎಸ್. ಪಾಟೀಲ್ : ಜನರಿಗೆ ಏನು ಅನ್ಯಾಯವಾಗುತ್ತದೆ ಎಂಬುದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಅವರು ಹಿರಿಯ ಸಹಕಾರಿಗಳು, ನಮಗೆ ಮಾರ್ಗದರ್ಶನ ಮಾಡುತ್ತಾರೆಂದು ಹೇಳಿ, ನಾನು ಬರೆದುಕೊಳ್ಳುವುದಕ್ಕೆ ಶುರು ಮಾಡಿದೆ. ಇವರು ರಾಜಕೀಯ ಮಾತನಾಡುವುದಾದರೆ, ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನೀವು ಸಹಕಾರಿಗಳಾಗಿ ಈ ಬಿಲ್ಲಿನ ಮೇಲೆ ಏನು ಮಾತನಾಡಬೇಕೋ ಅದನ್ನು ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ನಿಮ್ಮ ಸರ್ಕಾರದಲ್ಲಿ ಸಹಕಾರಿ ಇಲಾಖೆ ಎಷ್ಟು ಅಸಹಕಾರದಿಂದ ನಡೆಯುತ್ತಿದೆ ಎಂಬುದಕ್ಕೆ ಒಂದು ಉದಾಹರಣೆ ಹೇಳಿದರು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸಚಿವರು ಹೇಳಿದ ಮಾತನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ನಾನು ಸಹಕಾರಿಯಾಗೇ ಮಾತನಾಡುತ್ತಿದ್ದೇನೆ. ಸಹಕಾರಿ ಸಂಘಗಳು ಸ್ವತಂತ್ರವಾಗಿ ಹೇಗೆ ನಡೆಯಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದು ನೇರವಾಗಿ ಸಹಕಾರಿ ಸಂಘಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸದಸ್ಯರು ಇಲ್ಲಿ ರಾಜಕೀಯವನ್ನು ಬೆರೆಸಿದ್ದಕ್ಕೆ ಇಲ್ಲಿ ಗಲಭೆಯಾಯಿತು. ಸೌಹಾರ್ದ ಕಾನೂನು ಸ್ವಾಗತ ಮಾಡುತ್ತೇವೆಂದು ತಾವು ಹೇಳಿದಿರಿ.

ಶ್ರೀ ಎಸ್.ಎಸ್. ಪಾಟೀಲ್ : ನಾನು ನಡೆದುದನ್ನು ಹೇಳುತ್ತಾ ಇದ್ದೇನೆ. ಎಲ್ಲಿದೆ ರಾಜಕೀಯ ? ಇದರಲ್ಲಿ ಮುಂದೆ ಪೂರ್ಣ ರಾಜಕೀಯವೇ ಬರುತ್ತದೆ, ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ನಾನು ಈ ನೀರಾವರಿ ಬಿಟ್ಟು ಮಾತನಾಡಿಯೇ ಇಲ್ಲ. ಅವರಿಗೆ ರಾಜಕೀಯ ಎನ್ನಿಸುತ್ತಿರಬಹುದು.

2.00 ಪಿ.ಎಂ.

ಮಾನ್ಯ ಅಧ್ಯಕ್ಷರೇ, ತಾವು ಅವರನ್ನು ಕಂಟ್ರೋಲ್ ಮಾಡದಿದ್ದರೆ ನಾನು ಹೇಗೆ ಮಾತನಾಡಲಿ ? ನಾನು ಮಾತನಾಡಿದ ಮೇಲೆ ಬೇಕಾದರೆ ಅವರು ಮಾತನಾಡಲಿ. ಮಂತ್ರಿಗಳ ಪರ ಉತ್ತರ ಅವರೇ ಕೊಡುವುದಾದರೆ ಅವರೆ ಉತ್ತರ ಕೊಡಲಿ.

ಅಧ್ಯಕ್ಷರು : ತಾವು ಈಗ ಬೇಗ ಮುಗಿಸಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಮಾತನಾಡುವುದಿಲ್ಲ, ನಾನು ಹೇಳಬೇಕಾದ್ದನ್ನು ಹೇಳಿದ್ದೇನೆ. ಅವರೊಬ್ಬ ಹಿರಿಯ ಸಹಕಾರಿಗಳು. ಬಹುಶಃ ಅವರು ಈ ಸಹಕಾರ ಸಂಘಗಳನ್ನು ಸೌಹಾರ್ದ ಆಕ್ಟ್ ಕೆಳಗೆ ತರದೆ ಇದ್ದರೆ ನಿಶ್ಚಿತವಾಗಿ ತಾವು ಮಾಡುವಂತಹ ಒಂದು ಒಳ್ಳೆಯ ಉದ್ದೇಶ ಈಡೇರುವುದಿಲ್ಲ ಎನ್ನುವ ಎಚ್ಚರಿಕೆಯ ಮಾತನ್ನು ನಾನು ಹೇಳುತ್ತೇನೆ. ದಯವಿಟ್ಟು ಈ ಸಂಘಗಳನ್ನು ಸೌಹಾರ್ದ ಆಕ್ಟ್ ಕೆಳಗೆ ತರಬೇಕು. ಸಂಪೂರ್ಣವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆಯುವಂತೆ ಮಾಡಿ. ಶಾಶ್ವತವಾಗಿ ನೀರಾವರಿ ಸಚಿವರು ಅಧ್ಯಕ್ಷರು, ರಾಜ್ಯ ಸಚಿವರು ಅದರ ಉಪಾಧ್ಯಕ್ಷರು ಯಾವುದೋ ಒಂದು ಚುನಾವಣೆ ಮಾಡುವುದು, ಸಹಕಾರ ತತ್ವಕ್ಕೆ ವಿರುದ್ಧವಾದಂತಹ ವ್ಯವಸ್ಥೆಯಾಗುತ್ತದೆ. ಹೌದೋ ಅಲ್ಲವೋ ಎನ್ನುವುದನ್ನು ತಾವೇ ಹೇಳಿ. ಪ್ರಾಮಾಣಿಕವಾಗಿ, ಆ ಕಾರಣದಿಂದ ನಾನು ಹೇಳುತ್ತಿದ್ದೇನೆ, ಈ 59ರ ನಿಯಮದ ಅಡಿಯಲ್ಲಿ ತಾವು ಏನು ಮಾಡುತ್ತಿದ್ದೀರಿ, ಅದು ಆ ಒಂದು ಕಾಯ್ದೆಯಲ್ಲಿ ಬರತಕ್ಕಂಥಾ ವ್ಯವಸ್ಥೆಯನ್ನೆಲ್ಲಾ ತಾವು ಅಳವಡಿಸಿಕೊಳ್ಳಬೇಕು, ಮತ್ತು ಬೈಲಾದಲ್ಲಿ ಕೆಲವನ್ನು ಹಾಕುವುದಕ್ಕೆ ಬರುತ್ತದೆ. ತಾವು ಬೈಲಾ ನೋಡಿ. ತಾವು ಬೈಲಾ ನೋಡಿದಿರೋ ಇಲ್ಲವೋ ಗೊತ್ತಿಲ್ಲ. ಆ ಮೆಂಬರ್ ಮಾಡತಕ್ಕಂಥ ಅಧಿಕಾರ ಅವರಿಗೆ ಇಟ್ಟಿರಿ, ಅದು ಬಹಳ

ತಪ್ಪಾಗುತ್ತದೆ. ಆಮೇಲೆ 59ರ ನಿಯಮದ ಅಡಿಯಲ್ಲಿ ಏನು ರಿಜಿಸ್ಟ್ರೇಶನ್ ಆಗುತ್ತದೆಂದು ಹೇಳಿದ್ದಾರೆ, ಅಧ್ಯಕ್ಷರೇ, ಆದರೆ ಸೆಕ್ಷನ್ 39ರ ಕೆಳಗೆ ಮೊದಲನೆ ಬಾಡಿಗೂ ಸಹ ಚುನಾವಣೆ ಮಾಡಬೇಕು. ಮೊದಲನೆ ಬಾಡಿಗೂ ಸಹ ನಾಮಿನೇಶನ್ ಮಾಡುವುದನ್ನು ನಾನು ತೆಗೆದಿದ್ದೇನೆ. ನಾನೇ ಅದನ್ನು ಮಾಡಿಸಿದ್ದು. ಮೊದಲನೇ ಬಾಡಿ ಬಂದ ಕೂಡಲೇ ನಾಮಿನೇಶನ್ ಮಾಡುತ್ತಿದ್ದರು, ಅದನ್ನು ನಾನು ತೆಗೆದಿದ್ದೇನೆ. ಮೊದಲನೇ ಬಾಡಿಗೂ ಸಹ ಚುನಾವಣೆ ಮಾಡಬೇಕೆಂದು ಮಾಡಿದ್ದೇನೆ. ಅದು ಇವತ್ತು ಹೇಗೆ ನಡೆದಿದೆ ಎನ್ನುವುದು ತಮಗೆ ಗೊತ್ತು. ಅದೇ ರೀತಿಯಲ್ಲಿ ತಾವು ಇದನ್ನು ಕೂಡ ನಡೆಸಬೇಕು. ಮತ್ತು ಏರಿಯಾ ಗುರುತು ಮಾಡಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕೆಲವು ವಿಚಾರಗಳಲ್ಲಿ ಮಾನ್ಯ ಎಸ್.ಎಸ್. ಪಾಟೀಲರಿಗೆ ಮಾಹಿತಿ ಇರಬೇಕು, ಮಾಹಿತಿ ಇಲ್ಲದೇ ಇರುವುದಿಲ್ಲ. ಆದರೂ ಅವರು ಸದನದ ದಾರಿ ತಪ್ಪಿಸುವಂತಹ ಕೆಲವು ವಿಷಯಗಳನ್ನು ಹೇಳುತ್ತಾರೆ. ನಾವು ಏರಿಯಾವನ್ನು ಗುರುತಿಸಿಲ್ಲ ಅಂತ ತಾವು ಹೇಳಿದಿರಿ. ಅದು ಸರಿಯಾದಂತಹ ಮಾಹಿತಿ ಅಲ್ಲ. ಮಲಪ್ರಭಾ, ಘಟಪ್ರಭಾ, ಬಹುತೇಕ ತುಂಗಭದ್ರಾ ಭಾಗ, ಹಾಗೂ ಕಾವೇರಿ ಈ ಎಲ್ಲಾ ಯೋಜನೆಗಳಲ್ಲಿ ಏರಿಯಾವನ್ನು ಸಂಪೂರ್ಣವಾಗಿ ನಾವು ಏರ್-ಮಾರ್ಕ್ ಮಾಡಿದ್ದೇವೆ. ಯಾವುದು 12 ನೂರು ಎಕರೆಗಳಿಂದ 15 ನೂರು ಎಕರೆಗಳು ಎನ್ನುವುದನ್ನು ನಾವು ಮಾರ್ಕ್ ಮಾಡಿ ಕೃಷ್ಣಾ ಯೋಜನೆಯೊಳಗೆ ಅಚ್ಚುಕಟ್ಟು ಪ್ರದೇಶ ಯಾವುದು ಆಗುತ್ತದೆ ಎನ್ನುವುದು ಪಕ್ಕಾ ಗೊತ್ತಿಲ್ಲ. ಕೆಲವು ಭಾಗ ನಾವು ಮಾಡಿದ್ದೇವೆ. ಇನ್ನು ಕೆಲವು ಭಾಗವನ್ನು ಆ ಕಾಡಾದವರು ಮಾಡಬೇಕಾಗಿದೆ. ಎಲ್ಲೆಲ್ಲಿ ಯಾವ ಯಾವ ಸೊಸೈಟಿ ಎನ್ನುವುದನ್ನು ಒಂದು ನಂಬರ್ ಕೊಟ್ಟುಕೊಂಡು ಎಲ್ಲಾ ಏರಿಯಾವನ್ನು ನಾವು ಬೈಫರ್‌ಕೇಟ್ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅವರು ಮಾಡಿದ್ದೇವೆಂದು ಹೇಳುತ್ತಾರೆ, ಬಹಳ ಸಂತೋಷ. ಅವರು ಇನ್ನೊಮ್ಮೆ ಉತ್ತರ ಕೊಡುವ ಮುನ್ನ ಅವರಿಗೆ ಇಲ್ಲಿ ಏರಿಯಾ ಮಾರ್ಕ್ ಮಾಡಿಲ್ಲ, ಆದರೆ ಸೊಸೈಟಿ ರಿಜಿಸ್ಟ್ರೇಶನ್ ಆಗಿದೆ ಅಂತ ನಾನು ತಂದು ತೋರಿಸುತ್ತೇನೆ. ಅದು ಕೂಡ ತಮ್ಮ ನಜರಿಗೆ ಬಂದಿರಲಿಕ್ಕೆ ಇಲ್ಲ. ಕೆಲವು ಸಲ ಅಸಿಸ್ಟೆಂಟ್ ರಿಜಿಸ್ಟ್ರಾರ್ ಬರುತ್ತಾರೆ, ಆಗ ಮಾಡಿಕೊಂಡಿರುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಏನು ಏರಿಯಾ ಬೈಫರ್‌ಕೇಟ್ ಮಾಡಿದ್ದೇವೆ ಅದರ ಪ್ರತಿ ನಮ್ಮಲ್ಲಿ ಒಂದು ದೊಡ್ಡ ವಾಲ್ಯೂಂ ಇರುತ್ತದೆ. ಆಮೇಲೆ ಆ ಏರಿಯಾಗಳು ಯಾವುವು ಎನ್ನುವುದು ಇರುತ್ತದೆ. ತಾವು ನನ್ನ ಕಛೇರಿಗೆ ಬಂದರೆ ಆ ಕಾಗದಗಳನ್ನು ನಾನು ತಮ್ಮ ಕೈಗೆ ಕೊಡುತ್ತೇನೆ. ಇಲ್ಲಾ ನಿಮ್ಮ ಕಡೆ ಕಳುಹಿಸಿಕೊಡಿ ಅಂದರೂ ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಬೇಕಾಗಿಲ್ಲ, ನಾನೇ ಬಂದು ನೋಡುತ್ತೇನೆ. ನಿಮ್ಮ ಮನಸ್ಸಿನಲ್ಲಿ ಏನು ಇದೆ ಆ ರೀತಿ ನಡೆದುಕೊಂಡರೆ ಸಾಕು. ಮಾನ್ಯ ಅಧ್ಯಕ್ಷರೇ, ಸಹಕಾರಿಗಳಿಗೆ ರಾಜಕೀಯ ಇಲ್ಲ. ಸಹಕಾರಿ ಕ್ಷೇತ್ರದಲ್ಲಿ ನಾವು ಹೋಗಿ ಕುಳಿತುಕೊಂಡು ರಾಜಕೀಯ ಮಾಡಿ ಅವು ಹಾಳಾಗಿವೆ. ಅದರಲ್ಲಿ ನಾನು ಇರಬಹುದು, ಇಲ್ಲ ಅಂತ ನಾನು ಹೇಳುವುದಿಲ್ಲ. ಅಲ್ಲಿ ರಾಜಕೀಯ ಬರಬಾರದು ಎನ್ನುವ

ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತು ಹೇಳುತ್ತೇನೆ. ಅವರೇನೋ ನೀರಾವರಿ ಏರಿಯಾ ಮಾಡಿದ್ದೇವೆಂದು ಹೇಳುತ್ತಾರೆ, ಏರಿಯಾ ಓವರ್-ಲ್ಯಾಪ್ ಆಗಿದ್ದರೆ ಖಂಡಿತವಾಗಿ ಅದನ್ನು ತಡೆಹಿಡಿಯಬೇಕು. ರಿಜಿಸ್ಟ್ರೇಶನ್ ಆಗಿದ್ದರೂ ಸಹ ಅದನ್ನು ರದ್ದು ಮಾಡಬೇಕು. ಪುನಃ ಆ ಏರಿಯಾದಲ್ಲಿ ಬರತಕ್ಕಂಥಾ ಎಲ್ಲಾ ಜನರನ್ನು ಮೆಂಬರ್ ಮಾಡಿಕೊಂಡು ಎಲ್ಲರೂ ಮೆಂಬರ್ಸ್ ಆಗಬೇಕು, ಏಕೆಂದರೆ ಎಲ್ಲರಿಗೂ ನಾವು ನೀರು ಕೊಡಬೇಕಾಗುತ್ತದೆ. ಅವರು ಮೆಂಬರ್ ಆಗಿಲ್ಲವೆಂದರೆ ಹೇಗೆ? ಅವರಾಗಿಯೇ ನನಗೆ ಮೆಂಬರ್‌ಶಿಫ್ ಬೇಡ ಅಂದರೆ ಬಿಡಲಿ. ಯಾರು ಮೆಂಬರ್ ಆಗಬೇಕೆಂದು ಮುಂದೆ ಬರುತ್ತಾರೋ ಅವರೆಲ್ಲರನ್ನು ಕೂಡಿಸಿ ಮಾಡಿ. ಅಲ್ಲಿ ಆ ಪಕ್ಷ ಈ ಪಕ್ಷ ಅಂತ ನೋಡುವುದಕ್ಕೆ ಹೋಗಬೇಡಿ. ನೋಡಿದರೆ ಕೆಟ್ಟಿತು ಅಲ್ಲಿ. ನಾಳೆ ಶುರು ಅದು. ಈಗಾಗಲೇ ಶುರು ಆಗಿದೆ. ಒಂದು 300 ಜನರನ್ನು ಸೇರಿಸಿ ಒಂದು ಸೊಸೈಟಿ ಮಾಡಿದ್ದಾರೆ ಅಲ್ಲಿಯೇ ಇನ್ನೊಂದು ಮಾಡಿದ್ದರಿಂದ ಅವರು ಕೋರ್ಟಿಗೆ ಹೋಗಿದ್ದಾರೆ. ಅವರೆಲ್ಲರನ್ನು ಮೆಂಬರ್ಸ್ ಮಾಡಿಕೊಂಡು ಚುನಾವಣೆ ಮಾಡಿದರೆ ಯಾರಾದರೂ ಚುನಾಯಿತರಾಗಿ ಬರಲಿ. ಆ ವ್ಯವಸ್ಥೆ ಮಾಡಿದರೆ ಖಂಡಿತವಾಗಿ ಇದು ನಡೆಯುತ್ತದೆ. ಇನ್ನೂ ಅನೇಕ ವಿಷಯಗಳು ಇವೆ, ಆ ವ್ಯವಸ್ಥೆ ಮಾಡಿದರೆ ಖಂಡಿತವಾಗಿ ಇದು ನಡೆಯುತ್ತದೆ. ಇನ್ನೂ ಅನೇಕ ವಿಷಯಗಳು ಇವೆ, ಸಹಕಾರಿ ಕಾಯ್ದೆ ಬಂದಾಗ ನಾನು ಹೇಳುತ್ತೇನೆ. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ 740 ಕೋಟಿ ರೂಪಾಯಿಗಳು ಮುಳುಗುತ್ತದೆ. ಕೇಂದ್ರ ಸರ್ಕಾರ ಕೊಡತಕ್ಕಂಥ 740 ಕೋಟಿ ಇವೆಲ್ಲ ನೀವು ಫ್ರೀ ಆಗಿ ಬಿಡದೇ ಇದ್ದರೆ, ನಾನು ಅದಕ್ಕೆ ಹೇಳುತ್ತೇನೆ, ಏನು ಹಾನಿ ಆಗುತ್ತದೆ ಅಂತ. ಇಲ್ಲಿ ಅದಕ್ಕೆ ಹೇಳಿದ್ದಾರೆ. ಕೇಂದ್ರ ಸರ್ಕಾರದ ಸಹಕಾರ ಸಾಲದಲ್ಲಿ ಜಮಾ ಖರ್ಚು 740 ಕೋಟಿ ರೂಪಾಯಿಗಳ ಯೋಜನೆ ಇನ್ನೂ ಅಲ್ಲಿಯೇ ನಿಂತಿದೆ. ಇವೆಲ್ಲವನ್ನು ನೀವು ತಂದು ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಇಟ್ಟರಿ ಅಂದರೆ ಕೇಂದ್ರ ಸರ್ಕಾರ ಗ್ಯಾಪ್ ಫಿಲ್ಲಿಂಗ್ ಅಂತ ಆ 740 ಕೋಟಿ ರೂಪಾಯಿಗಳನ್ನು ನಿಮಗೆ ಕೊಡುವುದಿಲ್ಲ. ಅವರು ಬ್ರಹ್ಮಪ್ರಕಾಶ್ ವರದಿಯನ್ನು ಒಪ್ಪಬೇಕೆಂದು ಕಂಡೀಷನ್ ಹಾಕಿದ್ದಾರೆ. ಕೇಂದ್ರ ಸರ್ಕಾರದವರು ಏನಾದರೂ ಇಷ್ಟು ದುಡ್ಡು ಕೊಡಬೇಕಾದರೆ ತಾವು ಉತ್ತರ ಕೊಡುವ ಮುನ್ನ ಮೊನ್ನೆ ನೋಡಿದ್ದೇನೆ, ಆ ಎನ್.ಡಿ.ಡಿ.ಬಿ.ಯವರು 12 ಪರ್ಸೆಂಟ್ ಬಡ್ಡಿ ಕೊಡುತ್ತಾರೆ, ಅವರನ್ನು ಕೇಳಿ ಮಾಡಲೇನು? ನಾನು ರಾಜ್ಯದ ಹಿತದೃಷ್ಟಿಯಿಂದ ಇವೆಲ್ಲವನ್ನು ತಮಗೆ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದ ಮಂತ್ರಿಗಳು ಹೇಳಿದ್ದಾರೆ, ನಾವು ಇದನ್ನು ಮಾಡಿದರೆ ಅವರು ಮಾಡುವುದಿಲ್ಲ ಅಂತ. ನಾಳೆ ಅವರು ಏನು ಮಾಡುತ್ತಾರೆಂದರೆ ಎಲ್ಲವನ್ನು ನಿಲ್ಲಿಸುತ್ತಾರೆ. ಕೇಂದ್ರ ಸರ್ಕಾರವನ್ನು ಬಿಟ್ಟು ನಾವು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಬ್ಬ ಹಿರಿಯ ಸಹಕಾರಿ ಈ ಸಹಕಾರಿ ಸಂಘಗಳನ್ನು ಸ್ವತಂತ್ರವಾಗಿ ಬಿಡಬೇಕೆಂದು ಹೋರಾಟ ಮಾಡಿದಂತಹ ದಿವಂಗತ ಕೆ.ಎಚ್. ಪಾಟೀಲರ ಮಗ ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ತಾವು ದಯವಿಟ್ಟು ಸಂಪೂರ್ಣವಾಗಿ ಈ ಸಹಕಾರಿ ಸಂಘಗಳನ್ನು ಸ್ವತಂತ್ರವಾಗಿ ಬಿಡಬೇಕು ಮತ್ತು ನಿಮ್ಮ ಹೆಸರು ಶಾಶ್ವತವಾಗಿ ಉಳಿಯಬೇಕು. ಈ ಒಂದು ವ್ಯವಸ್ಥೆ ಈಗಾಗಲೇ ಫೇಲ್ ಆಗಿದೆ. ರಾಜ್ಯದಲ್ಲಿ ಸಹಕಾರ ಸಂಘಗಳು ಇದ್ದವು, ಇಲ್ಲ ಅಂತ ಅಲ್ಲ. ಎಲ್ಲ ಬಂದ್ ಆಗಿವೆ. ಎಲ್ಲೂ ಒಂದೂ ನಡೆದಿಲ್ಲ. ಇದೇ ರಾಜಕೀಯದಿಂದ ಹಾಳಾಗಿ ಹೋಗಿವೆ. ತಮ್ಮ ಅವಧಿಯಲ್ಲಿ ಒಂದು ಒಳ್ಳೆಯ ಬಿಲ್

ತರುವುದಕ್ಕೆ ಹೊರಟಿದ್ದೀರಿ, ತಾವು ಈ ಎಲ್ಲಾ ಮಾರ್ಪಾಟುಗಳೊಂದಿಗೆ ಮಾಡಿದರೆ ಖಂಡಿತವಾಗಿ ನಾನು ಈ ಬಿಲ್‌ನ್ನು ಸ್ವಾಗತಿಸುತ್ತೇನೆ. ಈ ಕಾಯ್ದೆಯಿಂದ ರೈತರಿಗೆ ಒಳ್ಳೆಯದು ಮಾಡುವಂತಹ ವ್ಯವಸ್ಥೆ ಇದೆ. ರೈತರ ಕೈಯಲ್ಲಿಯೇ ಎಲ್ಲಾ ಅಧಿಕಾರ ಕೊಟ್ಟು ರೈತರೇ ಆ ನೀರನ್ನು ಬಳಕೆ ಮಾಡಿ, ಕರ ವಸೂಲಿ ಮಾಡಿ ಅದರ ಅಭಿವೃದ್ಧಿ ಇದೆಲ್ಲಾ ಜನರ ಕೈಗೆ ಬರತಕ್ಕಂಥ ಒಂದು ವ್ಯವಸ್ಥೆಯನ್ನು ಮಾನ್ಯ ಬೃಹತ್ ನೀರಾವರಿ ಸಚಿವರು ಮಾಡುತ್ತಿದ್ದಾರೆ, ಸಂಪೂರ್ಣವಾಗಿ ಸಹಕಾರಿ ತತ್ವ ಮುರಿದು ಹೋಗಿದೆ. ನಾವು ಯಾರೋ ಒಬ್ಬರನ್ನು ಶಾಶ್ವತ ಅಧ್ಯಕ್ಷರನ್ನಾಗಿ ಮಾಡಿದರೆ ಅದು ಸಹಕಾರಿ ತತ್ವಕ್ಕೆ ವಿರೋಧ. ಅದನ್ನು ಮಾಡಲಿಕ್ಕೆ ಬರುವುದಿಲ್ಲ. ಇದು ಕೋರ್ಟಿಗೆ ಹೋದರೆ ಸ್ಟೇ ಆಗುತ್ತದೆ. ಆ ಕಾರಣದಿಂದ ಎಲ್ಲಾ ವ್ಯವಸ್ಥೆಯನ್ನು ತೆಗೆದುಕೊಂಡು ಒಳ್ಳೆಯ ಒಂದು ಸಹಕಾರಿ ತತ್ವದ ಮೇಲೆ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಈ ಸಂಘಗಳನ್ನು ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆಯು 3-30 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ಮುಂದೂಡಿದೆ)

(ಸಭೆಯು 3-40 ಗಂಟೆಗೆ ಪುನಃ ಸಮಾವೇಶಗೊಂಡಿತು. ವಿಧಾನಸಭೆಯ ಉಪಾಧ್ಯಕ್ಷರಾದ ಶ್ರೀ ಮನೋಹರ್ ತಹಶೀಲ್ದಾರ್‌ರವರು ಪೀಠವನ್ನು ಅಲಂಕರಿಸಿದರು)

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ತಂದಿರುವ ಈ ನೀರು ಬಳಕೆದಾರರ ಸಹಕಾರ ಸಂಘಗಳು ಮತ್ತು ಅದರ ಸಂಬಂಧಪಟ್ಟ ವಿಷಯ ಏನು ಇದೆ, ಇದು ಬಹಳ ಪ್ರಮುಖವಾಗಿರುವ ವಿಚಾರ. ಇವತ್ತು ನಾವೆಲ್ಲಾ ಗ್ರಾಮಾಂತರ ಪ್ರದೇಶದಿಂದ ರೈತ ಕುಟುಂಬದಿಂದ ಬಂದಿದ್ದೇವೆ. ಒಂದು ಭಾಗದಲ್ಲಿ ನೀರೇ ಇಲ್ಲದೆ ಬೆಳೆ ಒಣಗತಕ್ಕ ದಯನೀಯವಾದ ಪರಿಸ್ಥಿತಿಯಲ್ಲಿ ರೈತಾಪಿ ಬದುಕನ್ನು ಮಾಡತಕ್ಕದ್ದು, ಇನ್ನೊಂದು ಭಾಗದಲ್ಲಿ ಅತಿ ಹೆಚ್ಚು ನೀರು, ನೀರೇ ಹೆಚ್ಚಾಗಿ ನೀರೇ ಒಂದು ಸಮಸ್ಯೆಯಾಗತಕ್ಕ ಸಂದರ್ಭಗಳು, ಇದನ್ನು ಕೂಡ ನಾವು ಕಾಣುತ್ತೇವೆ. ಒಂದೇ ಪ್ರದೇಶದಲ್ಲಿ ದೊಡ್ಡ ದೊಡ್ಡ ಕೆರೆಗಳು ಇದ್ದಾಗ ಕೆರೆಯ ಪಕ್ಕದಲ್ಲಿರುವ ಜಮೀನುದಾರರಿಗೆ ಮತ್ತು ಕೆರೆಯ (tail-end) ಟೈಲೆಂಡಿನಲ್ಲಿರತಕ್ಕ ಬಳಕೆದಾರರಿಗೂ ಕೂಡ ಈ ಒಂದು ವಿಪರ್ಯಾಸದ ಸಂಗತಿಯನ್ನು ನಾವು ಅನುಭವಿಸುತ್ತಲೇ ಬಂದಿದ್ದೇವೆ. ಈ ಹಿನ್ನೆಲೆಯಲ್ಲಿ ಇವತ್ತು ಬೆಳೆ ಮತ್ತು ಬೆಳೆಗೆ ವಾಟರ್ ಮ್ಯಾನೇಜ್‌ಮೆಂಟ್ ಇದು ಬಹಳ ಪ್ರಮುಖವಾಗಿರುವ ವಿಚಾರ. ಇಷ್ಟು ವರ್ಷ ನಾವು ಪರಂಪರಾಗತವಾಗಿ ವ್ಯವಸಾಯವನ್ನು ಮಾಡಿಕೊಂಡು ಬಂದರೂ ಕೂಡ ಇದರ ಬಗ್ಗೆ ಒಂದು ಚಿಂತನೆ ನಡೆಯುತ್ತಿತ್ತೇ ಹೊರತು ಯಾವುದೇ ರೀತಿ ಅದು ಕಾರ್ಯಗತವಾಗಿರಲಿಲ್ಲ. ಪ್ರಥಮಬಾರಿಗೆ ಈ ನಿಟ್ಟಿನಲ್ಲಿ ಒಂದು ಸಣ್ಣ ಹೆಜ್ಜೆಯನ್ನು ಇಡತಕ್ಕ ಕೆಲಸ ನಮ್ಮ ರಾಜ್ಯ ಸರ್ಕಾರದ ಕಡೆಯಿಂದ ಆಗಿದೆ. ಇಂಥ ಒಂದು ಬಿಲ್ ಬರಬೇಕಾಗಿತ್ತು. ಎಂಬ ಅಪೇಕ್ಷೆಯಂತೆ ಇದರಲ್ಲಿ ಅನೇಕ ನ್ಯೂನತೆಗಳಿವೆ ಎನ್ನುವುದು ಬಿಟ್ಟರೆ ಒಟ್ಟಾರೆ ತಾವು ತಂದಿರುವ ಬಿಲ್ಲನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಒಂದು ಒಳ್ಳೆಯ ಧ್ಯೇಯ, ಉದ್ದೇಶವನ್ನು ಇಟ್ಟುಕೊಂಡಿರುವ ಈ ಬಿಲ್ ಏನಿದೆ, ಈ ನಿಯಮಾವಳಿ ಏನಿದೆ, ಇದು ಹುಟ್ಟುವಾಗಲೇ ಬಾಲಾರಿಷ್ಟಕ್ಕೆ ಒಳಪಡಬಾರದು

ಎಂದು ನಮ್ಮೆಲ್ಲರ ಅಪೇಕ್ಷೆ. ರೈತರಾಗಿ ಇವತ್ತು ನಾವು ಪಕ್ಷಾತೀತವಾಗಿ ಯೋಚನೆ ಮಾಡುವಾಗ ರೈತರಿಗೆ ಯೋಗ್ಯವಾಗಿರುವ ನೀರಿನ ಬಳಕೆ ಮೇಲೆ ಜಮೀನಿಗೆ ಎಷ್ಟು ನೀರು ಬೇಕು, ಇಂಥ ಬೆಳೆಗೆ ಎಷ್ಟು ನೀರು ಬೇಕಾಗುತ್ತದೆ, ಇಂಥ ಒಂದು ಗಿಡಕ್ಕೆ ಎಷ್ಟು ನೀರು ಬೇಕಾಗುತ್ತದೆ ಎನ್ನುವುದನ್ನು ನಾವು ವೈಜ್ಞಾನಿಕವಾಗಿ ಯೋಚನೆ ಮಾಡದೆ ಹೋದರೆ ಪರಂಪರಾಗತವಾಗಿ ಮಾಡಿಕೊಂಡು ಬಂದಿರುವ ಇಂಥ ವ್ಯವಸಾಯವನ್ನು ಬಹುಶಃ ನಾವು ಬಹಳವಾಗಿ ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಇವತ್ತು ಆಧುನಿಕ ಪ್ರಪಂಚದಲ್ಲಿ ಬೇರೆ ಬೇರೆ ಮುಂದುವರಿದ ರಾಷ್ಟ್ರಗಳ ಬಗ್ಗೆ ನಾನು ಈಗಾಗಲೇ ಕೇಳಿದ್ದೇನೆ. ಸೆಟಲೈಟ್ ಮೂಲಕ ಹವಾಮಾನ ವೀಕ್ಷಣೆಯನ್ನು ಮಾಡಿ ಅದನ್ನು ಸಂಸ್ಕರಿಸಿ ಮುಂದಿನ ಸಂದರ್ಭದಲ್ಲಿ ಹವಾಮಾನ ಏನಾಗುತ್ತೆ, ಮಳೆ ಹೇಗಾಗುತ್ತೆ, ಚಳಿ ಏನಾಗುತ್ತೆ, ಬೇಸಿಗೆ ಏನಾಗುತ್ತೆ ಎನ್ನುವಂಥದ್ದನ್ನು ಒಂದು ವರದಿಯನ್ನು ಕೊಡುವುದು. ವ್ಯವಸಾಯ ಇಲಾಖೆ ಆ ವರದಿಯ ಆಧಾರದ ಮೇಲೆ ಯಾವ ಬೆಳೆಯನ್ನು ಇಟ್ಟರೆ ಲಾಭದಾಯಕವಾಗುತ್ತದೆ ಎನ್ನುವುದನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುತ್ತಿದ್ದಾರೆ. ಭಾರತದಂಥ ದೇಶದಲ್ಲಿ ಸುಮಾರು ನೂರಕ್ಕೆ ಎಂಭತ್ತು ಭಾಗ ರೈತಾಪಿ ಬದುಕಿನಿಂದಲೇ ವಾಸ ಮಾಡುತ್ತಿರುವ ಗ್ರಾಮಾಂತರ ಪ್ರದೇಶದ ಜನರು ನಾವು ಈ ರೀತಿ ವೈಜ್ಞಾನಿಕ ಯುಗಕ್ಕೆ ಕಾಲಿಡದೇ ಹೋದರೆ ಈ ಒಂದು ವ್ಯವಸಾಯದ ಬದುಕು ಅಸಹನೀಯವಾಗುತ್ತದೆ. ಈ ನಿಟ್ಟಿನಲ್ಲಿ ನಾನು ಹೇಳುವುದಿಷ್ಟೆ. ಇವತ್ತು ಈ ನೀರಿನ ಬಳಕೆದಾರರ ಸಂಘಗಳು ಮತ್ತು ಈ ನಿಯಮವನ್ನು ಈಗಾಗಲೇ ತಾವು ಜೂನ್ 14ರಿಂದಲೇ ಜಾರಿಗೆ ಕೊಟ್ಟಿದ್ದೀರಿ. ಈ ಬಿಲ್ ಇವತ್ತು ಬಂದರೂ ಕೂಡ ಜೂನ್ 14 ರಿಂದಲೇ ಅದರ ಆರಂಭವಾಗಿದೆ. ಈಗಾಗಲೇ ಹಳ್ಳಿಯಲ್ಲಿ ಇದರ ಚುರುಕು, ಇದರ ಬಿಸಿ ಏನು ಎನ್ನುವುದು ನಮ್ಮೆಲ್ಲರಿಗೂ ತಗುಲಿದೆ. ಮೊದಲನೆಯದಾಗಿ ಅಧಿಕಾರಿಗಳು ಇದರ ಬಗ್ಗೆ ಬಹಳ ಸೀರಿಯಸ್ ಆಗಿ ಏನು ಗಮನಿಸಲಿಲ್ಲ. ಏನೋ ಒಟ್ಟಾರೆ ಮೇಲಿನವರ ಒಂದು ಒತ್ತಡಕ್ಕೆ ಒಳಪಟ್ಟು ಹಾಗೂ ಹೀಗೂ ಮಾಡಿದ್ದಾರೆ. ಕಾಲುವೆಗಳ ಬಗ್ಗೆ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ನೀರಾವರಿ ಪ್ರದೇಶದಿಂದ ಬಂದಿರತಕ್ಕವನಲ್ಲ ನಾನು. ಇವತ್ತು ಕೆರೆಕಟ್ಟೆಗಳ ಪ್ರದೇಶದಿಂದ ಬಂದಿರುವವನು. ಇಂತಿಷ್ಟು ಕೆರೆಗಳಿಗೆ ಇಂತಿಷ್ಟು ಗ್ರಾಮಗಳನ್ನು ಒಳಪಡಿಸಿ ಒಂದು ಸಹಕಾರ ಸಂಘವನ್ನು ಮಾಡಬೇಕೆಂದು ಹೇಳಿ ನೀವು ಈಗಾಗಲೇ ಆದೇಶವನ್ನು ಕೊಟ್ಟಿದ್ದೀರಿ. ಅದರಂತೆ ಅಧಿಕಾರಿಗಳು ಬಂದಿದ್ದಾರೆ, ಕಛೇರಿಯಲ್ಲೇ ಕುಳಿತು ವಿಚಾರ ಮಾಡಿದ್ದಾರೆ. ಯಾವ ಕೆರೆ ಎಲ್ಲಿದೆ ಎಂದು ಹೇಳಿ ನಕಾಶೆಯಲ್ಲೇ ನೋಡಿದ್ದಾರೆ. ಆ ಕೆರೆಯಲ್ಲಿ ಎಷ್ಟು ನೀರಿದೆ, ಆ ಕೆರೆ ಒತ್ತುವರಿಯಾಗಿ ಇನ್ನೆಷ್ಟು ಉಳಿದುಕೊಂಡಿದೆ? ಅದು ಇದೆಯೋ ಇಲ್ಲವೋ? ನಕಾಶೆಯಲ್ಲಿ ಮಾತ್ರ ಕೆರೆ ಕಾಣುತ್ತದೆ. ಆದರೆ ವಾಸ್ತವಿಕವಾಗಿ ಅಲ್ಲಿಗೆ ಹೋದಾಗ ಅಲ್ಲಿ ಕೆರೆ ಇಲ್ಲ. ಇವತ್ತು ಅದು ಒತ್ತುವರಿಯಾಗಿದೆ. ಎಲ್ಲವೂ ಕೂಡ ಆಗಿದೆ. ಆದರೆ ಇವೆಲ್ಲವನ್ನೂ ಕೂಡ ಸೇರಿಸಿ ಸಮಗ್ರವಾಗಿ ಒಂದು ಸಹಕಾರ ಸಂಘ ಇದರ ವ್ಯಾಪ್ತಿಯೊಳಗೆ ಬರಬೇಕು ಎನ್ನುವುದನ್ನು ಯೋಚನೆ ಮಾಡಿದ್ದೇವೆ. ಅವರಿಗೆ ಈ ಆದೇಶವನ್ನು ಕೊಟ್ಟಾಗ ನಮ್ಮ ನೀರಾವರಿ ಇಲಾಖೆಯ ಅಧಿಕಾರಿಗಳು, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಕೆಲವು ಅಧಿಕಾರಿಗಳು ಬಂದು ಅಲ್ಲಲ್ಲಿ ಒಂದು ಗ್ರಾಮಸಭೆಗಳನ್ನು ನಡೆಸುವಂಥ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಎಲ್ಲೋ ಹತ್ತತ್ತು ಪಾಂಪ್ಲೆಟ್‌ಗಳನ್ನು ನನ್ನಂಥ ರಾಜಕಾರಣಿಯ ಹತ್ತಿರ ಕೊಟ್ಟು ಆ ಊರಿನಲ್ಲಿ ಎಲ್ಲರಿಗೂ ಹೇಳಿ ಎಂದು ಹೇಳಿದ್ದಾರೆ. ಬೇಕಾದಂಥವರು

ಅವರು ತಮ್ಮ ಜೇಬಿನಲ್ಲೇ ಇಟ್ಟುಕೊಂಡರು ಇದನ್ನು ಹೇಳುವುದಕ್ಕೆ ಒಂದು ಉಪಾಯವನ್ನು ಮಾಡಬೇಕು, ಏಕೆಂದರೆ ನನ್ನ ಕೈಯಲ್ಲಿ ಈ ಸೊಸೈಟಿ ಬರಬೇಕು. ಸಹಕಾರ ಸಂಘಗಳು ಬರಬೇಕು ಎಂದು ಮಾಡಿದರು. ಏಕೆಂದರೆ ಸ್ವಲ್ಪ ಬುದ್ಧಿವಂತರಾದವರ ಕೈಯಲ್ಲಿ ಇದು ಸೇರಿಬಿಟ್ಟಿತು. ನಮ್ಮ ಊರುಗಳಲ್ಲಿ, ನಮ್ಮ ತಾಲ್ಲೂಕುಗಳಲ್ಲಿ ಇದು ಆಗಿದೆ. ಇದರ ಬಗ್ಗೆ ಸಾಕಷ್ಟು ಪ್ರಚಾರವಾಗಿದೆ. ವಿಶ್ವಬ್ಯಾಂಕ್‌ನಿಂದ ಹಣವನ್ನು ತೆಗೆದುಕೊಳ್ಳುತ್ತೇವೆ, ಕೆರೆಯ ದುರಸ್ತಿ ಹಾಗೂ ಅಭಿವೃದ್ಧಿಪಡಿಸುವ ಎಲ್ಲಾ ಹಣವನ್ನು ತೆಗೆದು ನಿಮ್ಮ ಕೈಗೆ ಕೊಡುತ್ತೇವೆ ಎನ್ನುವ ಪ್ರಚಾರದ ಪರಿಣಾಮ ಆ ಹಳ್ಳಿಯಲ್ಲಿರುವ ಬುದ್ಧಿವಂತರಿಗೆ ಈಗಾಗಲೇ ಗೊತ್ತಾಗಿದೆ. ಅವರೇನು ಮಾಡಿದರು ಎಂದರೆ ಆ ಪಾಂಪ್ಲೆಟ್‌ಗಳನ್ನು ಜೇಬಿನಲ್ಲಿಟ್ಟುಕೊಂಡರು. ತಮಗೆ ಬೇಕಾದವರನ್ನು ಹತ್ತು ಜನರನ್ನು ಸೇರಿಸಿದರು. ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅವರ ಮನೆಯಲ್ಲಿ ಕುಳ್ಳಿರಿಸಿಕೊಂಡು ಮುಖ್ಯಪ್ರವರ್ತಕರು, ಪ್ರವರ್ತಕರ್‍ಯಾರು ಎಂದು ಹೇಳಿ ಬರೆಸಿಬಿಟ್ಟರು. ಇದರ ಪರಿಣಾಮವೇನಾಯಿತು ಎಂದರೆ ಅವರ ಕೈಯಲ್ಲಿ ರಸೀದಿ ಪುಸ್ತಕ ಸದಸ್ಯತ್ವ ಸಂಗ್ರಹದ ಪುಸ್ತಕ ಸಿಕ್ಕಿತು. ಅವರಿಗೆ ಬೇಕಾದ ವೆಂಕ, ನಾಣಿ, ಸೀನ ಎಂದು ಹೇಳಿ 25-50 ಜನರ ಒಂದು ಪಟ್ಟಿಯನ್ನು ಮಾಡಿ ಹಣ ತೆಗೆದುಕೊಂಡು ರಿಜಿಸ್ಟ್ರೇಷನ್‌ಗಳನ್ನು ಮಾಡಿದ್ದಾರೆ. ಮೊದಲನೆಯದಾಗಿ ನಾನು ಹೇಳುವುದು ಅಚ್ಚುಕಟ್ಟು ಲಿಸ್ಟ್ ಬಗ್ಗೆ. ನನ್ನ ಊರಿನಲ್ಲಿ ಒಂದು ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಬಂದಾಗ ವ್ಯಾಪಕವಾಗಿ ಎಲ್ಲಾ ಅಚ್ಚುಕಟ್ಟುದಾರರನ್ನು ಕರೆಯಿರಿ ಎಂದು ಹೇಳಿದೆ. ನಾನೇನೇ ಮಾಡಿದರೂ ನಮ್ಮ ಮಲೆನಾಡಿನಲ್ಲಿ ನೂರು ಜನರು ಸೇರಿದರೆ ಅದು ಬಹಳ ದೊಡ್ಡ ಸಭೆ. ಆದರೆ ನಾನೇ ವೈಯಕ್ತಿಕವಾಗಿ ನಿಂತು ನೂರು ಜನರನ್ನು ಸೇರಿಸಿದೆ. ಅವರನ್ನೆಲ್ಲಾ ಸೇರಿಸಿ ಪ್ರವರ್ತಕರನ್ನೆಲ್ಲಾ ಮಾಡಿ ಸಂಘ ರಚನೆ ಮಾಡಿ ಕೊಟ್ಟರೆ ಒಂದು ತಿಂಗಳ ನಂತರ ಮುಖ್ಯ ಪ್ರವರ್ತಕರು ನನ್ನ ಹತ್ತಿರ ಬರುತ್ತಾರೆ, ಅಚ್ಚುಕಟ್ಟು ಲಿಸ್ಟೇ ಕೊಡುತ್ತಿಲ್ಲ, ಯಾರ ಹತ್ತಿರ ತೆಗೆದುಕೊಳ್ಳಬೇಕೆಂದು ಗೊತ್ತಿಲ್ಲ, ಕೆರೆಯ ಕೆಳಭಾಗದಲ್ಲಿ ಅಚ್ಚುಕಟ್ಟುದಾರರು ನೀವು ಸಹಕಾರ ಸಂಘಗಳ ಸದಸ್ಯರನ್ನು ನೊಂದಣಿ ಮಾಡುವಾಗ ಅಚ್ಚುಕಟ್ಟುದಾರರನ್ನು ಮಾತ್ರ ಮಾಡಬೇಕೆಂದು ನಿಯಮವಿದೆ. ಅದನ್ನು ಭಾಷಣದಲ್ಲಿ ಕೂಡ ಅಧಿಕಾರಿಗಳು ಬಂದವರು ಹೇಳಿದರು. ಅಚ್ಚುಕಟ್ಟು ಲಿಸ್ಟನ್ನು ಯಾರು ಕೊಡುವುದು? ರೆವಿನ್ಯೂ ಅಧಿಕಾರಿಗಳ ಹತ್ತಿರ ಹೋದರೆ ನಮ್ಮ ಹತ್ತಿರ ಇಲ್ಲ, ನೋಡೋಣ ಮಾಡೋಣ ಎಂದು ಹೇಳುತ್ತಾರೆ. ತಾಲ್ಲೂಕು ಆಫೀಸಿನ ದಂಧೆ ವ್ಯವಹಾರ ಹೇಗೆ ನಡೆಯುತ್ತದೆ ಎಂದು ನಿಮಗೆ ಗೊತ್ತಿದೆ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ನಮ್ಮಲ್ಲಿ ಇದೆ. ಅದರಲ್ಲಿ ಅಚ್ಚುಕಟ್ಟು ಲಿಸ್ಟ್ ಇಲ್ಲವೇ ಇಲ್ಲ. ಯಾವ ರೈತ ಬರುತ್ತಾನೆ, ಯಾವ ಯಾವ ಸರ್ವೆ ನಂಬರುಗಳು ಅಧಿಕೃತವಾಗಿ ಬರುತ್ತವೆ ಎನ್ನುವುದು ಎಲ್ಲಿಯೂ ಇಲ್ಲ. ಹೀಗಾಗಿ ನಾನೇ ಇದರ ಬಗ್ಗೆ ಗಮನಹರಿಸಿದ ನಂತರ, ಸುಮಾರು 15 ದಿನಗಳ ನಂತರ ನಾನು ಕೊಡಿಸಿದ ಹಾಗಾಯಿತು. ಅಚ್ಚುಕಟ್ಟು ಲಿಸ್ಟನ್ನು ಕೊಡಿ ಎಂದು ಹೇಳಿ ಸರ್ಕಸ್ ಮಾಡಿ ಕೊಡಿಸಿದೆ. ಆದರೆ ನನ್ನ ತಾಲ್ಲೂಕಿನಲ್ಲಿ ಬೇರೆ ಬೇರೆ ಸಂಘಗಳಲ್ಲಿ ಏನಾಗಿದೆ ಎಂದರೆ ಒಟ್ಟಾರೆ ಮೇಲೆ ಯಾರು ದಾರಿಬದಿ ಕುಳಿತಿದ್ದರೋ ಅವರಷ್ಟು ಜನರನ್ನು, ಕೆಲವು ಕಡೆ ಬುದ್ಧಿವಂತರು ಅವರವರ ಸಂಬಂಧಪಟ್ಟವರನ್ನು ಸೇರಿಸಿಕೊಂಡಿದ್ದಾರೆ. ಇನ್ನು ಕೆಲವರು ನಮ್ಮೂರಿನಲ್ಲಿ ಸಂಜೆಯ ಹೊತ್ತಿಗೆ ಬೀಡಿ ಸೇದಿಕೊಂಡು, ಕೊಟ್ಟೆ ಕುಡಿದುಕೊಂಡು ರಸ್ತೆ ಬದಿ ಅಂಗಡಿ ಕಟ್ಟೆಮೇಲೆ, ಹೋಟೆಲ್ ಕಟ್ಟೆಯ ಮೇಲೆ ಪ್ರಪಂಚದ ಇತಿಹಾಸವೆಲ್ಲಾ

ಮಾತಾಡಿಕೊಂಡು ಕುಳಿತಿರುತ್ತಾರೆ. ಅವರಲ್ಲಿ ಎಂಟು-ಹತ್ತು ಜನರನ್ನು ಬನ್ನಿ ಎಂದು ಹೇಳಿ ಕರೆದುಕೊಂಡು ಹೋಗಿ ನೀವೆ ಮುಖ್ಯ ಪ್ರವರ್ತಕರು ಎಂದು ಹೇಳಿ ಮಾಡಿದ್ದಾರೆ. ಅವು ಇನ್ನೂ ಕೂಡ ರಿಜಿಸ್ಟ್ರೇಷನ್‌ಗೆ ಬರಲಿಲ್ಲ. ಅವು ಇನ್ನೂ ಕೂಡ ಸದಸ್ಯತ್ವದ ಸಂಗ್ರಹ ಮಾಡಲಿಕ್ಕಾಗಲಿಲ್ಲ. ಅವರ ಕೈಗೆ ಇನ್ನೂ ಕೂಡ ಅಚ್ಚುಕಟ್ಟು ಲಿಸ್ಟ್ ಸಿಕ್ಕಿಲ್ಲ. ಯಾವುದು ಕೆರೆಗಳು, ಕುಂಟೆಗಳು ಎಂದು ಅವರಿಗೆ ಗೊತ್ತಾಗಲಿಲ್ಲ. ಏರಿಯಾ ಎಷ್ಟು ಎಂದು ಇನ್ನೂ ಕೂಡ ಗೊತ್ತಾಗಲಿಲ್ಲ. ಅದು ಇಂಥ ಪರಿಸ್ಥಿತಿಯಲ್ಲಿ ಇದೆ. ಹೀಗಾಗಿ ಇದನ್ನು ಜಾರಿಗೆ ಕೊಡುವ ಮೊದಲೇ ಸಾಕಷ್ಟು ಆಲೋಚನೆಯನ್ನು ಮಾಡಬೇಕಾಗಿತ್ತು. ಇದರ ಬಗ್ಗೆ ಆಲೋಚನೆ ಮಾಡಿದಂತೆ ಕಾಣುವುದಿಲ್ಲ. ಅಥವಾ ನೀವು ಆಲೋಚನೆ ಮಾಡಿದರೂ ಕೂಡ ಕೊನೆಯ ನಮ್ಮ ನೌಕರರು ಯಾರಿದ್ದಾರೆ. ಬಹುಶಃ ಅವರಿಗೆ ಅದರ ತರಬೇತಿಯನ್ನು ಕೊಟ್ಟು ಈ ರೀತಿ ಮಾಡು ಎಂದು ಹೇಳಿಲ್ಲ. ನಾವು ನೋಡಿದ್ದೇವೆ. ನಮ್ಮಲ್ಲಿ ಐದಾರು ಏತ ನೀರಾವರಿ ಇದೆ. ನಾವು ತುಂಗಾನದಿ ದಡದಲ್ಲಿದ್ದೇವೆ. ಒಂದು ಏತ ನೀರಾವರಿ ಪ್ರದೇಶದಲ್ಲಿ ಈ ಹಿಂದೆ ಒಂದು ನೀರಿನ ಬಳಕೆದಾರರ ಸಂಘಗಳನ್ನು ಮಾಡಿದರು. ಆ ಏತ ನೀರಾವರಿ ಆ ಕರೆಂಟ್ ಬಿಲ್ಲನ್ನು ಅವರೇ ಕಟ್ಟಿಕೊಳ್ಳುವುದು, ನೀರನ್ನು ಬಿಡುವವರು ಅವರೇ ಎಂದು ಹೇಳಿ ಯೋಚನೆ ಮಾಡಿ ಸಂಘಗಳನ್ನು ಸ್ಥಾಪನೆ ಮಾಡಿದರು. ಆ ಸಂಘದಲ್ಲಿ ನಿಂತು ಅಲ್ಲೆಲ್ಲ ಒಟ್ಟಾದ ಧುರೀಣರುಗಳೆಲ್ಲಾ ಯೋಚನೆ ಮಾಡಿ ಸೊಸೈಟಿಯನ್ನು ಮಾಡಿ ಅಲ್ಲಿ ನಮಗೆ ಹಣವನ್ನು ಎಷ್ಟು ಕೊಡುತ್ತೀರಿ ಎಂದು ಹೇಳಿ ಸಾಲವನ್ನೆಲ್ಲಾ ತೆಗೆದುಕೊಂಡು ಹೋದರು. ಅದು ಮುಳುಗಡೆಯಾಯಿತು. ಒಂದು ಪೈಸೆಯನ್ನು ಕೂಡ ವಾಪಸ್ ಕಟ್ಟಲಿಲ್ಲ. ಆ ಸೊಸೈಟಿ ಇವತ್ತು ವೈಂಡಪ್ ಆಯಿತು, ಲಿಕ್ವಿಡೇಟ್ ಆಯಿತು, ಇದನ್ನು ಬಹಳ ಸುಲಭದಲ್ಲಿ ಮಾಡತಕ್ಕದ್ದು ಒಂದು ಸಂಘವನ್ನು, ಸಂಸ್ಥೆಯನ್ನು ಹುಟ್ಟಿಸಿ ಸಾಯಿಸತಕ್ಕದ್ದಾಗಲಿ, ಲಿಕ್ವಿಡೇಟ್ ಮಾಡತಕ್ಕದ್ದಾಗಲಿ, ವೈಂಡಪ್ ಮಾಡತಕ್ಕದ್ದಾಗಲಿ ಇದು ಕ್ರಮವಲ್ಲ. ಇದು ಬಹಳ ಜವಾಬ್ದಾರಿಯಿಂದ ಈ ಸಂಘವನ್ನು ಸಂಘಟನೆ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ತಾವು ದಯಮಾಡಿ ತಮ್ಮ ಅಧಿಕಾರಿಗಳಿಗೆ ಇನ್ನೊಮ್ಮೆ ಸೂಚನೆಯನ್ನು ಕೊಡಬೇಕಾದ ಆವಶ್ಯಕತೆ ಇದೆ. ಅವರಿಗೆ ವಿಶೇಷವಾದ ತರಬೇತಿಯನ್ನು ಇದರಲ್ಲಿ ನೀಡಬೇಕಾಗುತ್ತದೆ. ನೀರಾವರಿ ಇಲಾಖೆಯ ಅಧಿಕಾರಿಗಳಿಗೆ, ಕೊನೆಯ ನೌಕರರು ಅಲ್ಲಿ ಯಾರು ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಹೋಗುತ್ತಾರೆ, ಅವರಿಗೆ ಏನು ಮಾಡಬೇಕೆನ್ನುವ ನಿರ್ದಿಷ್ಟವಾಗಿರುವ ಸೂಚನೆಗಳನ್ನು ಕಡ್ಡಾಯವಗಿ ಇಂಥಿಂಥ ನಿಯಮಗಳನ್ನು ಅನುಸರಿಸಬೇಕೆನ್ನುವ ಸೂಚನೆಯನ್ನು ಕೊಡುವುದು ಅವಶ್ಯಕತೆ ಇದೆ. ಅದರಲ್ಲಿ ಯಾರನ್ನು ಬೇಕಾದರೂ ಸದಸ್ಯರಾಗಿ ಮಾಡಿದ್ದಾರೆ, ಕೆರೆಯ ಅಚ್ಚುಕಟ್ಟಿನಲ್ಲಿ, ಕಾಲುವೆ ಅಚ್ಚುಕಟ್ಟಿನಲ್ಲಿ ಬರುವವರು ಇಲ್ಲ. ಬೇರೆ ಬೇರೆ ಯಾರನ್ನೋ ಸಂಘದ ಸದಸ್ಯತ್ವದ ನೋಂದಣಿ ಮಾಡಿದ್ದಾರೆ. ಸಂಘದ ಸದಸ್ಯತ್ವ ಏನಾಗುತ್ತೆ ಎನ್ನುವುದು ಇವತ್ತು ಇಲ್ಲ. ಒಂದು ಸಾರಿ ಸದಸ್ಯರಾದ ನಂತರ ಅವರನ್ನು ಡಿಸ್‌ಕ್ವಾಲಿಫಿಕೇಷನ್ ಮಾಡುವುದಾಗಲಿ, ಅವರನ್ನು ತೆಗೆದುಹಾಕುವುದಾಗಲಿ ಯಾವ ರೀತಿ ಎಂದು ಇಲ್ಲ. ಏಕೆಂದರೆ ಅವರು ಅಚ್ಚುಕಟ್ಟುದಾರರು ಆಗದಿದ್ದರೆ ಯಾವ ರೀತಿ ತೆಗೆದುಹಾಕುತ್ತೀರಿ, ಎನ್ನುವ ಬಗ್ಗೆ ಅದಕ್ಕೂ ಸೂಚನೆಯನ್ನು ಕೊಡಬೇಕಾಗುತ್ತದೆ, ಈಗಾಗಲೇ ಇದರ ಕಾರ್ಯಕ್ರಮಗಳೆನ್ನೆಲ್ಲಾ ಹೇಳಿದ್ದೀರಿ, 62-ಡಿ ಬಗ್ಗೆ ನಮ್ಮ ಎಸ್.ಎಸ್. ಪಾಟೀಲರು ಮಾತನಾಡಿದ್ದಾರೆ, ನಾನು ಚರ್ವಿತ ಚರ್ವಣ ಮಾಡುವುದಿಲ್ಲ. ಒಂದು ಪ್ರಜಾತಂತ್ರದ ವ್ಯವಸ್ಥೆಯ ಚೌಕಟ್ಟಿನಲ್ಲಿ ಇದೆಲ್ಲಾ ಇರಬೇಕಾಗುತ್ತದೆ

ಇವತ್ತು ತಾವು ಅಲ್ಲಿ ಮಂತ್ರಿಗಳಾಗಿರಬಹುದು. ನಾಳೆ ಇನ್ನೊಬ್ಬರು ಬರಬಹುದು, ನಾನು ಶಾಸಕನಿರಬಹುದು, ಇನ್ನೊಬ್ಬನು ಇರಬಹುದು, ಆದರೆ ಒಂದು ಪ್ರಜಾತಂತ್ರದ ವ್ಯವಸ್ಥೆಯ ಅಡಿಗಟ್ಟಿನಲ್ಲಿ ಇರಬೇಕಾಗುತ್ತದೆ. ಇವತ್ತು ಮಿಲ್ಕ್ ಸೊಸೈಟಿಗಳನ್ನು ನೋಡುತ್ತೇವೆ. ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಅದರ ಅಕೌಂಟಿಂಗ್, ಪ್ರಜಾತಂತ್ರದ ಒಂದು ವ್ಯವಸ್ಥೆ, ಚುನಾವಣೆ ಬಗ್ಗೆ, ಬೇರೆ ಯಾರೂ ಕೂಡ ಅಲ್ಲಿ ಮೂಗು ತೂರಿಸುವುದಕ್ಕೆ ಸಾಧ್ಯವೇ ಇಲ್ಲ. ಇನ್ನೇನು ಅನಿವಾರ್ಯವಾಗಿ ಯಾರಾದರೂ ಕಾರ್ಯದರ್ಶಿಗಳು ಅಲ್ಲಿ ದುರುಪಯೋಗ ಮಾಡಿಕೊಳ್ಳಬೇಕೇ ಹೊರತು ಯಾರೋ ರಾಜಕಾರಣಿ ಬಂದು ಮೂಗು ತೂರಿಸುವುದಕ್ಕಾಗುವುದಿಲ್ಲ. ಚುನಾಣವೆಗೆ ಕಾಂಟೆಸ್ಟ್ ಮಾಡಬೇಕೆಂದರೆ ಇಷ್ಟು ದಿವಸ ಹಾಲನ್ನು ಹಾಕಿರಲೇಬೇಕು ಎಂದು ಇದೆ. ನಿರ್ದೇಶಕನಾದವನು ಇಷ್ಟು ದಿವಸ ಹಾಲನ್ನು ಹಾಕಿಲ್ಲವೆಂದರೆ ಅಟೊಮ್ಯಾಟಿಕ್ ಆಗಿ ಡಿಸ್‌ಕ್ವಾಲಿಫೈ ಆಗುತ್ತಾನೆ. ಅಂಥ ಯಾವುದಾದರೂ ನಿಯಮಾವಳಿಗಳನ್ನು ಇದರಲ್ಲಿ ತರಬೇಕಾಗುತ್ತದೆ. ಅವರು ಅಚ್ಚುಕಟ್ಟುದಾರನಾಗಿರಬೇಕು, ಆತ ಅಲ್ಲಿ ಜಮೀನುದಾರನಾಗಿರಬೇಕು, ಈ ರೀತಿಯೆಲ್ಲಾ ತರಬೇಕಾಗುತ್ತದೆ. ಒಂದು ಪ್ರಜಾತಂತ್ರದ ಮೌಲ್ಯಗಳು ಇದರಲ್ಲಿ ಅಡಕವಾಗಿರಬೇಕಾಗುತ್ತದೆ. ಬಹುಶಃ ಇದನ್ನು ನೋಡಿದಾಗ ಈ ಮೌಲ್ಯಗಳು ಅಷ್ಟೊಂದು ಒಳ್ಳೆಯ ರೀತಿಯಲ್ಲಿ ನಮಗಂತೂ ಕಾಣುವುದಿಲ್ಲ. ಇವತ್ತು ಬಹಳ ಒಳ್ಳೆಯ ಕೆಲಸವೆಂದರೆ ನಿಮ್ಮ ತಲೆಗೆ ನಿಮ್ಮದೇ ಕೈ ಎಂದಂತೆ ಆಯಿತು. ನೀವೇನು ಸರ್ಕಾರದ ಕಡೆ ನೋಡುವ ಹಾಗೆ ಇಲ್ಲ. ನಮ್ಮಲ್ಲೆಲ್ಲ ಕೆರೆಗಳು ಇರುವುದು, ಕೆರೆ ರಿಪೇರಿ ಮಾಡುವವರೂ ನೀವೇ. ಕೆರೆಯ ನೀರನ್ನು ಬಳಕೆ ಮಾಡಿಕೊಳ್ಳುವವರೂ ನೀವೇ. ಅದರ ಆದಾಯವನ್ನು ಕಲೆಕ್ಟ್ ಮಾಡಿಕೊಳ್ಳುವವರೂ ನೀವೇ ಇದು ಒಳ್ಳೆಯ ಕ್ರಮ. ಅದು ಏನಾದರೂ ಇರಲಿ ಅದೆಷ್ಟು ದಿವಸಗಳು ಬರುತ್ತೆ? ಆ ಕೆರೆಗೆ ಅದು ಸಾಕಾಗುತ್ತದೆಯೇ? ಯಾರೋ ರಾಜಮಹಾರಾಜರು ಅನೇಕ ಕೆರೆಗಳನ್ನು ಕಟ್ಟಿ ಹೋದರು. ಇವತ್ತು ಅದರ ದುರಸ್ತಿ ಕೂಡ ನೂರಾರು ವರ್ಷಗಳಿಂದ ಮಾಡದೇ ಕೆರೆ ನಾಮಾವಶೇಷವಾಗಿ ಹೋಗಿದೆ. ಈ ಆಕ್ಟ್‌ನಲ್ಲಿ ಸುಸೂತ್ರವಾಗಿ ಈಗ ಕೆರೆಯನ್ನು ಯಾರೋ ಒತ್ತುವರಿ ಮಾಡಿಕೊಂಡಿದ್ದಾರೆ, ಅವರನ್ನು ಬಿಡಿಸುವುದಕ್ಕೆ ಆ ಸಹಕಾರ ಸಂಘಕ್ಕೆ ಏನು ಅಧಿಕಾರವಿದೆ ಎಂದು ನನಗೆ ಇದರಲ್ಲಿ ಗೊತ್ತಾಗಲಿಲ್ಲ. ಬಗರ್‌ಹುಕುಂ ಮಾಡಿರುವವರನ್ನು, ಒತ್ತುವರಿ ಮಾಡಿರುವವರನ್ನು ಅಲ್ಲಿಂದ ಎಬ್ಬಿಸಲೇಬೇಕು, ಅವರಿಗೆ ಯಾವ ರೀತಿ ಈ ಒಂದು ಕಾನೂನಿನಲ್ಲಿ ಬಲವಿದೆ? ಎನ್ನುವುದು ಏನೂ ಇಲ್ಲ. ಒಟ್ಟು ನಾಮಾಕಾವಸ್ಥೆ ಪಟೇಲರಾದರೆ ಏನೂ ಕೂಡ ಪ್ರಯೋಜನವಾಗುವುದಿಲ್ಲ. ಜಗಳ ಬರುವುದನ್ನು ತಡೆದುಕೊಳ್ಳಿ, ನೀವೇ ನಿರ್ವಹಿಸಿಕೊಳ್ಳಿ ಎಂದು ಹೇಳುವುದರ ಜೊತೆಗೆ ಕಾನೂನಿನ ಯೋಗ್ಯವಾಗಿರುವ ಅಸ್ತ್ರವನ್ನು ಆ ಸಂಘಗಳಿಗೆ, ಸಂಘದ ಪದಾಧಿಕಾರಿಗಳಿಗೆ ಕೊಟ್ಟಾಗ ಮಾತ್ರ ಇದು ತನ್ನ ಒಂದು ಅರ್ಥವನ್ನು ಉಳಿಸಿಕೊಳ್ಳುತ್ತದೆ ಮತ್ತು ಹೆಚ್ಚು ಫಲಪ್ರದವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅಂದಾಜು. ಇನ್ನು ಹೆಚ್ಚು ಇದರ ಬಗ್ಗೆ ಯೋಚನೆ ಮಾಡುವ ಅವಶ್ಯಕತೆ ಇದೆ ಎಂದು ಹೇಳಿ ನನಗೆ ಅನಿಸುತ್ತೆ. ಹೆಚ್ಚು ವ್ಯಾಪಕವಾಗಿ, ಹೆಚ್ಚು ಸುಭದ್ರವಾಗಿ ಈ ಕಾರ್ಯನಡೆಯಬೇಕಾಗುತ್ತದೆ. ಎಲ್ಲಾ ಭಾಗದಲ್ಲೂ ಕೂಡ ಇದು ಫಲಪ್ರದವಾಗಿ ಕೆಲಸ ಮಾಡಬೇಕಾದರೆ ಹೆಚ್ಚು ಆಲೋಚನೆ ಮಾಡದೇ ತರಾತುರಿಯಾಗಿ ಆ್ಯಕ್ಟ್ ಮಾಡಿ ಜಾರಿಗೆ ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ಈ ನಿಟ್ಟಿನಲ್ಲಿ ನಮ್ಮ ಜನ-ಜಾಗೃತಿಯನ್ನು ನಿರ್ಮಾಣ

ಮಾಡಬೇಕಾಗುತ್ತದೆ. ರೈತರ ಜಾಗೃತಿಯನ್ನು ನಿರ್ಮಾಣ ಮಾಡಬೇಕಾಗುತ್ತದೆ, ಅಚ್ಚುಕಟ್ಟುದಾರರ ಕಾರ್ಯಾಗಾರಗಳನ್ನು ಅಲ್ಲಲ್ಲಿ ಮಾಡಿ ಅವರಿಗೆ ಇದರ ಯೋಜನೆಗಳನ್ನು ಇದರ ದೂರದೃಷ್ಟಿತ್ವವನ್ನು ಅವರಿಗೆ ಅರ್ಥ ಮಾಡಿಸುವ ಅವಶ್ಯಕತೆ ಇದೆ. ಆಗ ಮಾತ್ರ ಅವರೆಲ್ಲರೂ ಕೂಡ ಸಕ್ರಿಯವಾಗಿ ಅದರಲ್ಲಿ ಪಾಲ್ಗೊಳ್ಳುವ ಹಾಗೆ ಆಗುತ್ತದೆ. ಈ ನಿಟ್ಟಿನಲ್ಲಿ ಅತ್ಯಂತ ವ್ಯವಸ್ಥಿತವಾಗಿರತಕ್ಕ ಕೆಲಸವಾಗಬೇಕು ಎಂದು ಈ ಸಂದರ್ಭದಲ್ಲಿ ಹೇಳಿ, ಏನೇ ಆದರೂ ಒಂದು ಪ್ರಯೋಗವನ್ನು ಇದರಲ್ಲಿ ನಡೆಸಿದ್ದೀರಿ, ಇದರ ಮುಂದಿನ ಸಾಧಕಭಾದಕ, ಕ್ರಿಯೆ ಆರಂಭವಾದಾಗ ಅಷ್ಟೇ ನಮಗೆ ಗೊತ್ತಾಗುತ್ತದೆ. ಇದು ನಿಜವಾಗಿಯೂ ಕೂಡ ಅನುಷ್ಠಾನಕ್ಕೆ ಬಂದ ನಂತರ ಅನೇಕ ನ್ಯೂನತೆಗಳು ಬರುವುದಕ್ಕೆ ಸಾಧ್ಯವಾಗುತ್ತದೆ. ಆಗ ಇನ್ನಷ್ಟು ತಿದ್ದುಪಡಿಗಳನ್ನು ಮಾಡಬಹುದು ಎಂದು ಹೇಳಿ ಎನ್ನುವುದು ನನ್ನ ಅನ್ನಿಸಿಕೆ. ಇಷ್ಟನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಉಪಾಧ್ಯಕ್ಷರೇ, ಬೇಸಾಯ ಮಾಡುವಂಥ ನಮಗೆಲ್ಲ ಇತ್ತೀಚಿನ ದಿವಸಗಳಲ್ಲಿ ಸ್ಪಷ್ಟವಾಗಿ ಅರಿವಾಗುತ್ತಿರುವ ಒಂದು ವಿಷಯವೆಂದರೆ, ಭೂಮಿ ಮೇಲೆ ಬೀಳುವ ಪ್ರತಿಯೊಂದು ಹನಿ ನೀರನ್ನು ಶೇಖರಿಸಿಕೊಳ್ಳುವುದು, ಆ ರೀತಿ ಶೇಖರಿಸಿದ ನೀರನ್ನು ಅತ್ಯಂತ ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳುವುದು. ಇದರ ಜೊತೆಗೆ ಭೂಮಿಯ ಒಂದು ಕಣವೂ ಕೂಡ ನಮ್ಮ ಹೊಲದಿಂದ ಆಚೆಗೆ ಹೋಗದ ಹಾಗೆ ಆ ಮಣ್ಣನ್ನು ರಕ್ಷಣೆ ಮಾಡುವುದು. ಈ ಎರಡು ಕೆಲಸಗಳನ್ನು ಬೇಸಾಯದ ಕ್ಷೇತ್ರದಲ್ಲಿ ತರದಿದ್ದರೆ ಬಹುಶಃ ಉತ್ತಮವಾದ ಫಲಿತಾಂಶವನ್ನು ಕಾಣುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಸ್ಪಷ್ಟವಾದಂಥ ಅರಿವು ನಮಗೆ ಈಗ ಗೋಚರವಾಗುತ್ತಾ ಇದೆ. ನೀರಿನ ಉಪಯುಕ್ತತೆ ಬಗ್ಗೆ ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕಾದುದು ಇವತ್ತು ಕೇವಲ ಅವಶ್ಯಕತೆಯಲ್ಲ ಅದು ತುಂಬಾ ಅನಿವಾರ್ಯ. ಅದಕ್ಕೆ ಕಾರಣವೇನೆಂದರೆ, ಮೊದಲನೆಯದು ಕಡಿಮೆಯಾಗುತ್ತಿರುವ ಮಳೆ, ಎರಡನೆಯದು ಬತ್ತಿ ಹೋಗುತ್ತಿರುವ ಜಲ, ಮೂರನೆಯದು ಹೆಚ್ಚಾಗುತ್ತಿರುವ ಬೇಡಿಕೆ. ಈ ಎಲ್ಲಾ ಕಾರಣಗಳಿಂದಾಗಿ ಬಹುಶಃ ನೀರಿನ ಉಪಯೋಗವನ್ನು ಎಚ್ಚರಿಕೆಯಿಂದ ಮಾಡಬೇಕಾದುದು ಮತ್ತು ಉಪಯೋಗ ಮಾಡುವಂಥವರಿಗೆ ನೀರಿನ ಉಪಯೋಗದ ಬಗ್ಗೆ ಎಚ್ಚರಿಕೆಯನ್ನು ನೀಡಬೇಕಾದುದು ನಾನು ಈಗಾಗಲೇ ಹೇಳಿದಂತೆ ಕೇವಲ ಅವಶ್ಯಕತೆಯಲ್ಲ, ಅದೊಂದು ಅನಿವಾರ್ಯ ಎಂದು ನನ್ನ ಅನ್ನಿಸಿಕೆ. ನಾವು ಸುಮಾರು ಜೀವನವನ್ನೇ ನೀರಿನ ಬೆಳೆಯ ಜೊತೆಯಲ್ಲಿ ಕಳೆದವರು. ನಾವು ಚಿಕ್ಕ ಹುಡುಗರಾಗಿದ್ದಾಗ ಆ ಕೆರೆಯ ನೀರಿಗೆ ನಮ್ಮಲ್ಲಿ ಬೆಲೆಯೇ ಇರಲಿಲ್ಲ. ನಮ್ಮ ಮಂಡ್ಯ ಜಿಲ್ಲೆ ರೈತರು ಯಾವತ್ತೂ ಕೆಳಗಡೆ ಬಗ್ಗಿ ಕಾಲುವೆಯ ತವಡೆ ತೆಗೆದವರೇ ಅಲ್ಲ. ಎಡಗಾಲಲ್ಲಿ ಅಲ್ಲಾಡಿಸಿ ಹೊರಟು ಹೋಗಿಬಿಡುತ್ತಾರೆ. ಅವರಿಗೆ ಬಗ್ಗುವುದಕ್ಕೇ ಆಗುವುದಿಲ್ಲ. ಮಂಡ್ಯದವರೂ ಹಾಗೆ ಆಗಿದ್ದಾರೆ, ತುಮಕೂರಿನವರೂ ಹಾಗೆ ಆಗಿದ್ದಾರೆ. ಆಗಿನ ಪರಿಸ್ಥಿತಿಗೆ ಅದು ಸರಿಯಾಗಿತ್ತು. ಯಥೇಚ್ಛವಾಗಿ ಮಳೆ ಬೀಳುತ್ತಿತ್ತು. ವರ್ಷಕ್ಕೆ ನಾಲ್ಕು ಸಾರಿ ಕನ್ನಂಬಾಡಿ ತುಂಬುತ್ತಿತ್ತು. ಅದರ ನೀರನ್ನು ಹೇಗೆ ಉಪಯೋಗಿಸಿಕೊಂಡರೂ ನಡೆಯುತ್ತಿತ್ತು. ಆದರೆ ಇವತ್ತು ಮಳೆ ಕಡಿಮೆಯಾಗಿದೆ, ಅಂತರ್‌ಜಲ ಬತ್ತಿಹೋಗಿದೆ. ನೀರಿನ ಉಪಯೋಗ ಜಾಸ್ತಿಯಾಗಿದೆ. ಈ ಒಂದು ದೃಷ್ಟಿಯಿಂದ ನಮಗೆ ಲಭ್ಯವಿರುವಂಥ ನೀರು ಅತ್ಯಂತ ಕಡಿಮೆ. ಅದೇನೋ ಮಾನ್ಯ ಭೈರೇಗೌಡರು ಅಂಕಿಅಂಶವನ್ನೆಲ್ಲಾ ಹೇಳುತ್ತಿದ್ದರು, ನಾನು

ಅದನ್ನು ಮರೆತುಬಿಟ್ಟೆ, ನನ್ನ ಪ್ರಕಾರ ಕನ್ನಡ ನಾಡಿನಲ್ಲಿ 55 ಲಕ್ಷ ಎಕರೆಗೆ ನೀರಾವರಿ ಆಗುವಷ್ಟು ನಮ್ಮಲ್ಲಿ ಲಭ್ಯತೆ ಇದೆ. That is the availability of water in Karnataka. The potentiality we have created so far is only to the extent of 23 lakhs Hectares. ಮಾನ್ಯ ನೀರಾವರಿ ಸಚಿವರು ಈ ಬಗ್ಗೆ ಅಂಕಿಅಂಶ ಸ್ವಲ್ಪ ಹೆಚ್ಚುಕಡಿಮೆ ಇದ್ದರೆ ಅದನ್ನು ತಿದ್ದಬೇಕು ಅಷ್ಟೇ 23 ಲಕ್ಷ ಹೆಕ್ಟೇರ್‌ಗೆ ಆಗುವಷ್ಟು ನೀರಿನ ಸಾಮರ್ಥ್ಯದ ಸೃಷ್ಟಿ ಆಗಿದೆ. ಅಂದರೆ ಕೆರೆ ಕಟ್ಟಿದ್ದೇವೆ, ತೂಬು ಹಾಕಿದ್ದೇವೆ. ಕೋಡಿ ಕಟ್ಟಿದ್ದೇವೆ. ಈ 23 ಲಕ್ಷ ಹೆಕ್ಟೇರ್‌ನಲ್ಲಿ ನಾವು ಹೊಲಕ್ಕೆ, ಗದ್ದೆಗೆ ಬಿಟ್ಟುಕೊಂಡಿರುವುದು ಎಷ್ಟು ಎಂದರೆ 12 ಅಥವಾ 13 ಲಕ್ಷ ಹೆಕ್ಟೇರಿಗೆ ಆಗುವಷ್ಟು ನೀರು. ನಿನ್ನೆ ನಾನು ಅದನ್ನೇ ಮಾನ್ಯ ಬೈರೇಗೌಡರಿಗೆ ಹೇಳುತ್ತಿದ್ದೆ. ನಮ್ಮ ಅತ್ಯಂತ ದುಃಖದ ಸಂಗತಿ, ನೋವಿನ ಸಂಗತಿ, ಸಂಕಟದ ಸಂಗತಿ ಯಾವುದು ಎಂದರೆ ಇನ್ನೂ ಸುಮಾರು 12 ಲಕ್ಷ ಹೆಕ್ಟೇರ್‌ಗೆ ಆಗುವಷ್ಟು ನೀರು ಕರೆಯಲ್ಲಿ ಇದ್ದರೂ ಕೂಡ ಅದನ್ನು ಕಾಲುವೆ ಮಾಡಿ ಜಮೀನಿಗೆ ಬಿಟ್ಟುಕೊಳ್ಳುವುದಕ್ಕೆ ಆಗದೇ ಇರುವಂತಹ ಅತ್ಯಂತ ಹೀನಾಯವಾದಂತಹ ಆಡಳಿತವನ್ನು ನಾವೆಲ್ಲರೂ ನಡೆಸಿಕೊಂಡು ಬಂದಿದ್ದೇವೆ. ನಾರಾಯಣಪುರ ಡ್ಯಾಮಿನಲ್ಲಿ ಸುಮಾರು 5-6 ಲಕ್ಷ ಎಕರೆಗೆ ಆಗುವಷ್ಟು ನೀರು ತುಂಬಿದೆ. ಹೇಮಾವತಿಯಲ್ಲಿ 3 ಲಕ್ಷ ಎಕರೆಗೆ ಆಗುವಷ್ಟು ನೀರು ತುಂಬಿದೆ. 9 ಲಕ್ಷ ಮುಗಿದು ಹೋಯಿತು. ಕಬಿನಿಯೊಳಗೆ ಒಂದೂವರೆ ಎಕರೆಗೆ ಆಗುವಷ್ಟು ನೀರು ತುಂಬಿದೆ. 10.5 ಲಕ್ಷ ಆಗಿ ಹೋಯಿತು. ಇನ್ನು ನಮ್ಮ ಛೋಟಾ-ಮೋಟಾ ಎಲ್ಲವನ್ನೂ ಲೆಕ್ಕ ಹಾಕಿದರೆ ಇನ್ನೂ 2-3 ಲಕ್ಷ ಆಗುತ್ತದೆ. ಅಂದರೆ ಇವತ್ತಿನ ಪರಿಸ್ಥಿತಿಯಲ್ಲಿ ಸುಮಾರು 12 ರಿಂದ 13 ಲಕ್ಷ ಹೆಕ್ಟೇರ್‌ಗೆ ಆಗುವಂತಹ ನೀರನ್ನು, ಆ ಪೊಟೆನ್ಸಿಯಾಲಿಟಿ ಕ್ರಿಯೇಟ್ ಆಗಿದ್ದರೂ ಕೂಡ, ಸಂಗ್ರಹಣೆ ಆಗಿದ್ದರೂ ಕೂಡ, ಅದರ ನಿರ್ವಹಣೆ ಆಮೇಲೆ ಅದು ಎರಡನೇ ಹಂತ. ಅದರ ಉಪಯುಕ್ತತೆಯನ್ನೇ ಮಾಡಿಕೊಳ್ಳದಂತಹ ಪರಿಸ್ಥಿತಿ ನಮ್ಮದು ಆಯಿತು. ಅದಕ್ಕಾಗಿ ನಾನು ಹೇಳಿದ್ದು, ಲಭ್ಯ ಇರುವಂತಹ ನೀರನ್ನು ಶೇಖರಣೆ ಮಾಡುವುದು, ಉಪಯೋಗ ಮಾಡುವುದು. ಇವರೆಡೂ ವಿಷಯದಲ್ಲಿಯೂ ಕೂಡ ಈ ಹಂತದಲ್ಲಿ ದೇಶವನ್ನು ಆಳುವಂತಹವರು, ರಾಜ್ಯವನ್ನು ಆಳುವಂತಹವರು ಎಚ್ಚೆತ್ತುಕೊಳ್ಳದೇ ಇದ್ದರೆ ಅದರ ಉಪಯೋಗವನ್ನು ಪಡೆಯುವಂತಹ ಜನಗಳಿಗೂ ಕೂಡ ಒಂದು ಮಿತಿ ಇದೆ. ತಮ್ಮ ಮೂಲಕ, ಈ ಸದನದ ಮೂಲಕ ನಾನು ಈ ಅಭಿಪ್ರಾಯವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಬೇಸಾಯ ಮಾಡುವಂತಹವರ ಒಂದು ಸಂಯಮಕ್ಕೂ ಕೂಡ ಒಂದು ಮಿತಿ ಇದೆ. ಕಟ್ಟೆಯಲ್ಲಿರುವಂತಹ ಕೆರೆಯ ನೀರನ್ನು ಕಾಲುವೆ ಮಾಡಿಕೊಡುವುದಕ್ಕೆ ಆಗದೇ ಇರುವಂತಹ ಯಾವುದೇ ಆಡಳಿತವನ್ನು ಈ ರಾಜ್ಯದ ಅಥವಾ ಈ ದೇಶದ, ಅಥವಾ ಈ ವಿಶ್ವದ ರೈತರ ತಾಳಲಾರ ಸಹಿಸಲಾರ. ಆದಕ್ಕಾಗಿ ಈ ನಿರ್ವಹಣೆಯ ಜೊತೆಗೆ ಸಂಗ್ರಹಣೆ ಆಗಿರುವಂತಹ ನೀರನ್ನು ಭೂಮಿಗೆ ಬಿಡಿಸಿಕೊಡುವಂತಹ ಪ್ರಯತ್ನವನ್ನು ಕೂಡ ನಾವು ಮಾಡಬೇಕಾಗುತ್ತದೆ. ಇದು ಶೇಖರಣೆ ವಿಷಯ. ಅದು ಈ ವಿಚಾರಕ್ಕೆ ಸಂಬಂಧಪಟ್ಟಿದ್ದು ಅಲ್ಲ. ದಯಮಾಡಿ ನಾನು ತಮ್ಮಲ್ಲಿ ಕ್ಷಮೆ ಕೇಳುತ್ತಿದ್ದೇನೆ, ಅದು ಶೇಖರಣೆಗೆ ಸಂಬಂಧಪಟ್ಟಿದ್ದು. ಇಷ್ಟೊಂದು ಕಷ್ಟಪಟ್ಟು ಶೇಖರಣೆ ಮಾಡಿದಂತಹ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅಷ್ಟೇ ನಾವು ಸೀಮಿತವಾಗಿರುವುದು. ಈ ಒಂದು ಆಕ್ಟ್, ನಾನು ಈಗಾಗಲೇ ಹೇಳಿರುವ ಹಾಗೆ ನಮಗೆ ಲಭ ಇರುವಂತಹ ನೀರನ್ನು ಅತ್ಯಂತ ವೈಜ್ಞಾನಿಕವಾಗಿ, ಅತ್ಯಂತ ಬುದ್ಧಿವಂತಿಕೆಯಿಂದ, ಅತ್ಯಂತ ಎಚ್ಚರವಾಗಿ

ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವುದರಲ್ಲಿ ನಮಗೆ ಅನೇಕ ಮಾರ್ಗಗಳು ಇದೆ. ಆ ಒಂದು ದಿಸೆಯಲ್ಲಿ ಈ ಒಂದು ಕಾನೂನು, ಈ ಒಂದು ಕಾನೂನು ಏನು ನಮ್ಮ ಸದನದ ಮುಂದೆ ಬಂದಿದೆಯೋ ಸಹಕಾರ ಸಂಘಗಳ ಮೂಲಕ ನೀರನ್ನು ವಿತರಣೆ ಮಾಡುವ ಒಂದು ಪದ್ಧತಿಯನ್ನು ತಂದು ನಮ್ಮ ಜನರಲ್ಲಿ ನೀರಿನ ನಿರ್ವಹಣೆಯ ವಿಷಯವನ್ನು ಒಳ್ಳೆಯದಾಗಿ ಮಾಡಲಿಕ್ಕೆ ಪ್ರಯತ್ನವನ್ನು ಸರ್ಕಾರ ಮಾಡಿದೆ. ನಮ್ಮ ಮಾನ್ಯ ಅರಗ ಜ್ಞಾನೇಂದ್ರ ಅವರು ಹೇಳಿದ ಪದವನ್ನೇ ನಾನೂ ಉಪಯೋಗಿಸಬೇಕಾಗುತ್ತದೆ. ನಮ್ಮ ಮಟ್ಟಿಗೆ ಇದೊಂದು ಪ್ರಯೋಗ. ಏನಾದರೂ ನಾವು ಮಾಡಲೇ ಬೇಕಾಗುತ್ತದೆ. ಈ ಮೂರು ಕಾರಣಕ್ಕಾಗಿ, ಲಭ್ಯ ಇರುವ ನೀರು ಬಹಳ ಕಡಿಮೆ ಇರುವುದರಿಂದ, ಎಚ್ಚರಿವಾಗಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ದಾರಿಗಳನ್ನು ನಾವು ಕಂಡುಕೊಳ್ಳಲೇ ಬೇಕಾಗುತ್ತದೆ. ಅದು ಅನಿವಾರ್ಯ. ಆದರೆ ಯಾವ್ಯಾವ ದಾರಿ, ಮಾರ್ಗಗಳನ್ನು ಇದೆ? ಅದನ್ನೇ ನಾನು ಮಾನ್ಯ ಬೈರೇಗೌಡರಿಗೆ ಕೇಳುತ್ತಿದ್ದುದು. ಸ್ವಾಮಿ ಆ ದಾರಿಗಳು ಯಾವ್ಯಾವುದು ಹೇಳಿ ಎಂದು ಕೇಳುತ್ತಿದ್ದೆ. ನಿಮ್ಮ ಇಸ್ರೇಲ್ ವಿಚಾರ ನಾವೆಲ್ಲ ಎಲ್ಲಾದರೂ ಕುಳಿತುಕೊಂಡು ಮಾತನಾಡೋಣ. ಇರುವಂತಹ ನೀರನ್ನು, ಲಭ್ಯ ಇರುವಂತಹ ನೀರನ್ನು how best we can utilise, what are the ways and means? ಅದನ್ನು ಹೇಳಿ ಎಂದರೆ ಅವರು ಕೊನೆಯವರೆಗೆ ಹೇಳದೇ ಹೋದರು. ಅವರು ಹೇಳುತ್ತಾರೆಂದು ನಾನು ಕಾದೆ, ಅವರು ಹೇಳದೇ ಹೋದರು. ನನ್ನ ಒಂದು ಕೋರಿಕೆ ಇಷ್ಟೇ. ನಮಗೆ ಲಭ್ಯ ಇರುವಂತಹ ನೀರನ್ನು ಸಹಕಾರ ಸಂಘಗಳ ಮೂಲಕ ಮತ್ತು ನಮ್ಮ ಈ ಒಂದು ವಿಧೇಯಕದಲ್ಲಿ ಒಂದು ಅಂಶವನ್ನು ತಂದಿದ್ದಾರೆ. "ನೀರನ್ನು ಯೋಗ್ಯ ರೀತಿಯಲ್ಲಿ ಮತ್ತು ಮಿತವ್ಯಯಕಾರಿಯಾಗಿ ಬಳಸುವ ಬಗ್ಗೆ ಭೂ ಹಿಡುವಳಿದಾರರಿಗೆ ಶಿಕ್ಷಣ ನೀಡುವುದು, ತರಬೇತಿಗೊಳಿಸುವುದು, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು" These are the ways and means which we have to adopt for the better utilisation of available water and the formation of the society is one. ಈ ರಾಷ್ಟ್ರದಲ್ಲಿ ಶ್ರೀ ಎಸ್.ಕೆ. ಡೇ ಅವರ ಕಾಲದಲ್ಲಿ ಇವತ್ತಿನವರೆಗೆ ಸಹಕಾರ ಆಂದೋಲನ ನಡೆದು ಬಂದಂತಹ ದಾರಿಯನ್ನು ಯಥವತ್ತಾಗಿ ನಾವು ಗಮನಿಸಿದ್ದೇವೆ, ಅನುಭವಿಸಿದ್ದೇವೆ, ನೋಡಿದ್ದೇವೆ, ಚರ್ಚೆ ಮಾಡಿದ್ದೇವೆ, ಚಿಂತನೆ ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುವಂತಹ ಮಂತ್ರಿಗಳಿಗೆ, ಈ ಚರಿತ್ರೆಯ ಅರಿವು ಇಟ್ಟುಕೊಂಡು ಈ ಸಂಘ ಸಂಸ್ಥೆಗಳನ್ನು ರಚಿಸಿ ಎಂದು ಅಷ್ಟು ಮಾತ್ರ ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಹಕಾರ ಆಂದೋಲನ, ಸಹಕಾರ ಮೂವ್‌ಮೆಂಟ್ ಅಥವಾ ಅದರ ಒಳಿತು-ಕೆಡಕುಗಳ, ಬಗ್ಗೆ ನಮಗೆ ಆಗಿರುವಂತಹ ಅನುಭವದ ಹಿನ್ನೆಲೆಯಲ್ಲಿ ಈ ಸಹಕಾರಗಳನ್ನು ಸಂಘಟನೆ ಮಾಡಿ ಆ ಸಹಕಾರ ಸಂಘಗಳ ಮೂಲಕ ಆ ನೀರಿನ ವಿತರಣೆಯ ಕೆಲಸವನ್ನು ಮಾಡಿಸಲಿಕ್ಕೆ ಅವರು ಪ್ರಯತ್ನ ಮಾಡಲಿ ಎಂದು ನಾನು ಹಾರೈಸುತ್ತೇನೆ. ಬಹುಶಃ ನೀರಿನ ನಿರ್ವಹಣೆಯ ಬಗ್ಗೆ ಅದರ ಲಭ್ಯತೆ ಬಗ್ಗೆ ಮತ್ತೊಂದು ಮಾತನ್ನು ಹೇಳುತ್ತೇನೆ. ಮೊನ್ನೆ ನಾನು ನನ್ನ ಕ್ಷೇತ್ರದ ಗ್ರಾಮಸ್ಥರನ್ನು ಕೂರಿಸಿಕೊಂಡು ಮಾರ್ಕಂಡೇಯ ಡ್ಯಾಮ್ ಒಡೆದು ಹೋದ ವಿಚಾರದ ಬಗ್ಗೆ ಎಲ್ಲರಿಗೂ ಹೇಳುತ್ತಿದ್ದೆ. ನೀರಿನ ಅವಶ್ಯಕತೆ, ಲಭ್ಯತೆ ಮತ್ತು ಉಪಯುಕ್ತತೆ ಬಗ್ಗೆ ಮಾತನಾಡುತ್ತಾ ಹೇಳುತ್ತಿದ್ದೆ. ತಮಗೂ ಅನುಭವ ಆಗಿದೆಯೋ ಇಲ್ಲವೋ ಗೊತ್ತಿಲ್ಲ.

ಎಮ್ಮೆ ಕಟ್ಟಿ, ಕರೆದು ಮೈ ತಿಕ್ಕಿ, ನೀರು ಕುಡಿಸಿ, ಹುಲು ಹಾಕಿ, ಗೊಂತಿಗೆ ಕಟ್ಟಿ ಹಾಕಿ ಹಾಲು ಕರೆದುಕೊಂಡು ಹೋದರೆ ಎಂಟು ರೂಪಾಯಿಗಳಿಗೆ ಒಂದು ಲೀಟರ್. ಏರ್ ಪೋರ್ಟ್‌ನಲ್ಲಿ ಒಂದು ಲೀಟರ್‌ನ ಬೆಲೆ 38 ರೂಪಾಯಿಗಳು. Now you should realise what is our position regarding availability of water. ಯಾವುದೇ ಏರ್‌ಪೋರ್ಟಿಗೆ ಹೋದರೆ ನೀರಿನ ಬೆಲೆ ಒಂದು ಲೀಟರ್‌ಗೆ 38 ರೂಪಾಯಿಗಳು. ನೀವು ಯಾವ ಬೂತ್‌ಗೆ ಹೋದರೂ ಹಾಲಿನ ಬೆಲೆ ಲೀಟರ್‌ಗೆ 8 ರೂಪಾಯಿಗಳು. ಈ ಒಂದು ಪರಿಸ್ಥಿತಿಯನ್ನು ತಲುಪಿದ ಮೇಲಾದರೂ ಆಳುವಂತಹವರು, ನೀರನ್ನು ಉಪಯೋಗಿಸಿಕೊಳ್ಳುವಂತಹವರು, ನೀರಿನ ಉಪಯುಕ್ತತೆ ಬಗ್ಗೆ, ಅದರ ನಿರ್ವಹಣೆಯ ಬಗ್ಗೆ ಎಚ್ಚರವನ್ನು ವಹಿಸದೇ ಇದ್ದರೆ ಅದಕ್ಕಿಂತ ದೊಡ್ಡ ಪಾಪದ ಕೆಲಸ ಇನ್ನು ಯಾವುದೂ ಇಲ್ಲ. ಅದಕ್ಕಾಗಿ ನಾನು ಹೇಳುತ್ತಿರುವುದು, ಈ ಹಂತದಲ್ಲಿಯಾದರೂ ಸರ್ಕಾರ ಮತ್ತು ಮಂತ್ರಿಗಳು ನೀರನ್ನು ಎಚ್ಚರಿಕೆಯಿಂದ ನಿರ್ವಹಣೆ ಮಾಡಲಿಕ್ಕೆ, ಉಪಯೋಗಿಸಿಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆ ದಿಸೆಯಲ್ಲಿ ಅವರು ಯಶಸ್ವಿ ಆಗಲಿ ಎಂದು ನಾನು ಹಾರೈಸುತ್ತೇನೆ. ನಾನು ಮತ್ತೊಂದು ಮಾತನ್ನು ಈ ವಿಷಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳನ್ನು ಅಭಿನಂದಿಸುವುದಕ್ಕೆ ಇದಕ್ಕಿಂತ ಬಹಳ ಮುಖ್ಯವಾದಂತಹ ಮತ್ತೊಂದು ಕಾರಣ ಇದೆ. ಆ ಕಾರಣ ಯಾವುದು ಅಂದರೆ ಯಾವುದೇ ಮಂತ್ರಿಗಳು ತಮ್ಮ ಕೈಯಲ್ಲಿರುವಂತಹ ಅಧಿಕಾರವನ್ನು ಬೇರೆಯವರ ಕೈಗೆ ಕೊಡುವಂತಹ ದೊಡ್ಡತನ ಮಾಡುವುದು ನನ್ನನ್ನೂ ಸೇರಿಸಿದ ಹಾಗೆ ಬಹಳ ವಿರಳ. ಇಷ್ಟರವರೆಗೆ ಈ ಕೆಲಸವನ್ನು ನೀರಾವರಿ ಇಲಾಖೆ ಮಾಡುತ್ತಿತ್ತು. ಯಾರ ಕೆಲಸವನ್ನು ನೀರಾವರಿ ಇಲಾಖೆ ತತ್ವಶಃ ನೌಕರಶಾಹಿಯಿಂದ ನಡೆಯುತ್ತಿತ್ತೋ, ಆ ಕೆಲಸವನ್ನು ಇವತ್ತು ಜನಸಾಮಾನ್ಯರ ಕಡೆಗೆ ಕೊಡುತ್ತಿದೆ. ಅಧಿಕಾರವನ್ನು ಹಸ್ತಾಂತರ ಮಾಡುತ್ತಿದೆ. ನೌಕರಶಾಹಿಯಿಂದ ಜನಸಾಮಾನ್ಯರ ಕಡೆಗೆ ಅಧಿಕಾರವನ್ನು ಕೊಡುತ್ತಿರುವಂತಹ ಒಂದು ಕ್ರಾಂತಿಕಾರಕವಾದಂತಹ ಬದಲಾವಣೆ ಇದರ ಮುಖಾಂತರ ನಡೆಯುತ್ತಿದೆ. ಅದೇ ಬಹಳ ಮುಖ್ಯವಾದುದು. ಸೊಸೈಟಿಯಾದರೂ ಮಾಡಬಹುದು, ಕಂಪನಿಯನ್ನಾದರೂ ಮಾಡಬಹುದು. ಅಥವಾ ಇನ್ನೊಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೈಯಲ್ಲಿ ಕೊಡಬಹುದು ಅಥವಾ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೈಯಲ್ಲಿ ಕೊಡಬಹುದು. ಅದು ಅಷ್ಟೊಂದು ಪ್ರಾಮುಖ್ಯವಲ್ಲ. ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವ ಮುಖಾಂತರ ಸರ್ಕಾರದ ಸನ್ಮಾನ್ಯ ಸಚಿವರು ನೀರನ್ನು ನಿರ್ವಹಣೆ ಮಾಡುವಂತಹ, ನೀರನ್ನು ಹಂಚುವಂತಹ ಮತ್ತು ಇದಕ್ಕೆ ಸಂಬಂಧಪಟ್ಟಂತಹ ಕೆಲಸ ಕಾರ್ಯಗಳನ್ನು ಮಾಡುವಂತಹ ಅಧಿಕಾರವನ್ನು ಜನಸಾಮಾನ್ಯರಿಗೆ ವರ್ಗಾವಣೆ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಜನರಿಗಾಗಿಯೇ ಎಲ್ಲವೂ ಇದೆ ಎಂದು ಹೇಳುವಂತಹ ನೀತಿಯನ್ನು ನಾವು ಒಪ್ಪಿಕೊಂಡ ಮೇಲೆ ನೀರನ್ನು ನಿರ್ವಹಣೆ ಮಾಡುವಂತಹ ಕೆಲಸವನ್ನೂ ಕೂಡ ಜನಗಳಿಗೆ ಕೊಡುವುದರಲ್ಲಿ ಯಾವ ತಪ್ಪೂ ಇಲ್ಲ. ಅದರಲ್ಲಿ ಆಶ್ಚರ್ಯವೂ ಇಲ್ಲ. ಅದು ಮಾಡಲೇ ಬೇಕಾದಂತಹ ಕೆಲಸ ಅದನ್ನು ಮಾಡಿದ್ದಾರೆ. ಮತ್ತೆ ಈ ಹಂತದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ನಾವು ಜನಗಳ ಕೈಯಲ್ಲಿ ಅಧಿಕಾರವನ್ನು ಕೊಟ್ಟರೂ ಕೂಡ ಕೆಟ್ಟಿದ್ದೇವೆ. ಆ ಒಂದು ಹಿನ್ನೆಲೆಯಲ್ಲಿ they are transferring power. ಜನಗಳಿಗೆ ಅಧಿಕಾರವನ್ನು ಕೊಟ್ಟು, ಕೆಟ್ಟಂತಹ ಅನೇಕ ಸಂದರ್ಭಗಳನ್ನು, ಘಟನೆಗಳನ್ನು ನಾವು ಗಮನದಲ್ಲಿಟ್ಟು

ಕೊಂಡಿರುವುದರಿಂದ ಆ ಕೊಟ್ಟಂತಹ ಅಧಿಕಾರ ಸರಿಯಾಗಿ ಉಪಯೋಗ ಆಗುವ ರೀತಿಯಲ್ಲಿ ನಾವು ಮಾಡಿದಂತಹ ಕಾನೂನುಗಳನ್ನು ಕಾರ್ಯರೂಪಕ್ಕೆ ತರುವಂತಹ ಎಚ್ಚರವನ್ನು ಕೊಡುವ ಜವಾಬ್ದಾರಿಯನ್ನು ಆಳುವಂತಹ ಯಾವುದೇ ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. Again I want to stress. ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ಎಲ್ಲರೂ ಹೇಳಿರುವಂತಹ ವಿಷಯವನ್ನೇ ಮತ್ತೆ ನನಗೆ ಹೇಳಲು ಇಷ್ಟ ಇಲ್ಲ. ಮೊದಲನೆಯದಾಗಿ ನಾನು ಹೇಳಿದ ಹಾಗೆ ಭೂಮಿಯ ಮೇಲೆ ಬೀಳುವಂತಹ ತೊಟ್ಟು, ಹನಿ ನೀರನ್ನು ಶೇಖರಿಸಿಕೊಳ್ಳಬೇಕಾದುದು, ಭೂಮಿಯ ಮೇಲೆ ಇರುವಂತಹ ಪ್ರತಿ ಒಂದು ಹನಿ, ಕಣ, ಮಣ್ಣು ಕೂಡ ಕದಲದಂತೆ ನೋಡಿಕೊಳ್ಳಬೇಕಾದುದು ಬೇಸಾಯ ಪ್ರಧಾನವಾದಂತಹ ಇಸ್ರೇಲ್ ಇರಲಿ, ಭಾರದ ದೇಶ ಇರಲಿ, ಸಿಲೋನ್ ಇರಲಿ, ಜಪಾನ್ ಇರಲಿ ಇವರೆಡು ಕೆಲಸಗಳ ಬೇಸಾಯ ಪ್ರಧಾನವಾದಂತಹ ರಾಷ್ಟ್ರದಲ್ಲಿ ಮಾಡಲೇಬೇಕು. ನಮ್ಮ ರಾಷ್ಟ್ರದಲ್ಲಿ ನಾನು ಈಗಾಗಲೇ ಹೇಳಿದಂತಹ ಕಾರಣಕ್ಕಾಗಿ ಮಳೆ ಕಡಿಮೆ ಆಗುತ್ತಿರುವುದರಿಂದ ಅಂತರ್ಜಲ ಬತ್ತುತ್ತಾ ಇರುವುದರಿಂದ ನಮಗೆ ನೀರಿನ ಬೇಡಿಕೆ ಜಾಸ್ತಿ ಆಗುತ್ತಿರುವುದರಿಂದ ಇರುವಂತಹ ನೀರನ್ನು, ಲಭ್ಯ ಇರುವಂತಹ ನೀರನ್ನು ಅತ್ಯಂತ ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳಲಿಕ್ಕೆ ದಾರಿ ಮಾರ್ಗವನ್ನು ಕಂಡುಕೊಳ್ಳಬೇಕಾದುದು ಅದು ಕೇವಲ ಅವಶ್ಯಕತೆ ಅಲ್ಲ, ಅನಿವಾರ್ಯವೂ ಹೌದು.

4.10 ಪಿ.ಎಂ.

ಆ ಒಂದು ಅನಿವಾರ್ಯತೆಯ ಕೂಸಾಗಿ ಬಹುಶಃ ಇಂತಹ ಒಂದು ಕಾನೂನನ್ನು ಮಂತ್ರಿಗಳು ತಂದು ಆ ಮೂಲಕ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೆಂದು ಹೇಳುವುದನ್ನೂ ಸಂಪೂರ್ಣವಾಗಿ ಒಪ್ಪುವುದಕ್ಕೆ ನಾನು ಸಿದ್ಧನಿಲ್ಲ. ಅದರಲ್ಲೂ ಜನಸಾಮಾನ್ಯರ ಸಾಮಾಜಿಕ ವರ್ತನೆಗಳಿಗೆ ಸಂಬಂಧಿಸಿದಂತೆ ಅದು ವೇಶ್ಯಾವಾಟಿಕೆ ಇರಬಹುದು, ವಿಧವಾ ವಿವಾಹ ಇರಬಹುದು, ಸಾಮೂಹಿಕ ನೀರಾವರಿ ಇರಬಹುದು, ಇವೆಲ್ಲವನ್ನೂ ನಾವು ನೋಡಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಇಂತಹ ಒಂದು ಸಂದರ್ಭ ಬರುವುದರಿಂದ 'ಕಾನೂನನ್ನು ಮಾಡಿದ್ದೇವೆ, it will take its own course. ಎಂದು ಹೇಳಿದರೆ ಬಹುಶಃ ಅದು ಯಶಸ್ವಿಯಾಗಲಾರದು ಎಂಬುದು ನನ್ನ ಸ್ವಂತ ಅಭಿಪ್ರಾಯ. ಆ ದೃಷ್ಟಿಯಿಂದ ಸರ್ಕಾರದಲ್ಲಿ, ಮಂತ್ರಿಮಂಡಲದಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತಿರುವುದೇನೆಂದರೆ, ಈ ಕಾನೂನಿನ ಮೂಲಕ ನೀರನ್ನು ಹಂಚುವ ಕಾರ್ಯದ ಬಗ್ಗೆ ತಾವೇ ಹೇಳಿರುವಂತೆ, ನೀರಿನ ಉಪಯುಕ್ತತೆಯ ಪ್ರಾಮುಖ್ಯತೆ ಬಗ್ಗೆ ಜನರನ್ನು ಎಚ್ಚರಗೊಳಿಸುವಂಥ, ಅವರಲ್ಲಿ ಆ ಕುರಿತು ಅರಿವು ಮೂಡಿಸಿ ಶಿಕ್ಷಣ ಕೊಡುವಂಥ ಕೆಲಸ ಇದರಿಂದಾಗಲೆಂದು ಹಾರೈಸುತ್ತೇನೆ. ಇಷ್ಟೇ ಅಲ್ಲದೆ, ಇದರಲ್ಲಿ ಬರೀ ನೀರು ಹಂಚುವ ಕೆಲಸವನ್ನಷ್ಟೇ ಕೊಡದೆ ಕಾಲುವೆ, ಕೆರೆ ದುರಸ್ತಿ ಕಾರ್ಯ ಮತ್ತು ಹೂಳೆತ್ತುವ ಕೆಲಸವೂ ಸೇರಿದೆ. ಅಂದರೆ, ಸ್ವಲ್ಪ ಕಾಸಾಡುವ ಕೆಲಸವನ್ನು ಅವರ ಕೈಗೆ ಕೊಡುತ್ತಿದ್ದೀರಿ. ಕೇವಲ ನೀರು ಬಿಡುವ ಕೆಲಸವಾಗಿದ್ದರೆ ಯಾರೂ ಮುಂದೆ ಬರುತ್ತಿರಲಿಲ್ಲ. ಎಲ್ಲಿ ಸ್ವಲ್ಪ ಕಾಸಾಡುತ್ತದೆಯೋ ಅಲ್ಲಿ ಸ್ಪರ್ಧೆಯೂ ಜಾಸ್ತಿ, ಕಿತ್ತಾಟವೂ ಜಾಸ್ತಿ. ಆದುದರಿಂದ, ಬರೀ ನೀರಿನ ವಿತರಣೆಯಷ್ಟೇ ಅಲ್ಲದೆ ಕಾರ್ಯನಿರ್ವಹಣೆಯ ಕೆಲಸವನ್ನು ಈ ವಿಧೇಯಕದ ಮೂಲಕ ಜನರ ಕೈಗೆ ಕೊಡುತ್ತಿರುವುದರಿಂದ ಕಾಸಾಡುವ ಕೆಲಸದಲ್ಲಿ

ಕಿತ್ತಾಟ ಬರದಂತೆ ನೋಡಿಕೊಳ್ಳುವ ಎಚ್ಚರಿಕೆಯನ್ನು ಕೂಡ ವಹಿಸಿಕೊಳ್ಳಬೇಕು. ಈ ದಿಸೆಯಲ್ಲಿ ನಾನು ಈಗಾಗಲೇ ಹೇಳಿದಂತೆ ನೀರಿನ ನಿರ್ವಹಣೆಯನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಬೇಕಾದಂಥ ಅನಿವಾರ್ಯ ಪರಿಸ್ಥಿತಿಯಲ್ಲಿ ಅನೇಕ ಮಾರ್ಗಗಳು ನಮ್ಮ ಮುಂದಿರುವುದರಿಂದ, ಸರ್ಕಾರ ಒಂದು ಉತ್ತಮವಾದ ಮಾರ್ಗವನ್ನು ಅನುಸರಿಸುತ್ತಿರುವುದರಿಂದ ಈ ನಿಟ್ಟಿನಲ್ಲಿ ಸರ್ಕಾರ ಯಶಸ್ವಿಯಾಗಲೆಂದು ಮತ್ತೊಮ್ಮೆ ಹಾರೈಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಇವೊತ್ತು 2000ನೇ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಂದಿರುವುದು ಸ್ವಾಗತಾರ್ಹವಾದ ವಿಚಾರವೆಂದು ಹೇಳುತ್ತಾ ಇದಕ್ಕಾಗಿ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರನ್ನು ನಾನು ಅಭಿನಂದಿಸುತ್ತೇನೆ. ಅದೇ ರೀತಿ ಈ ಹಿಂದೆ ರಾಜ್ಯದಲ್ಲಿ ನೀರಾವರಿ ಮಂತ್ರಿ ಹುದ್ದೆಯನ್ನಲಂಕರಿಸಿದ್ದ ಶ್ರೀಯುತರುಗಳಾದ ಹೆಚ್.ಎಂ. ಚನ್ನಬಸಪ್ಪ, ಹೆಚ್.ಎನ್. ನಂಜೇಗೌಡ ಮತ್ತು ನಾಗರಾಳ್‌ರವರನ್ನು ನೆನೆಸಿಕೊಳ್ಳಬೇಕಾಗಿದೆ. ಇವರೆಲ್ಲರಿಗಿಂತಲೂ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾಗಿರುವ ಶ್ರೀ ಹೆಚ್.ಕೆ. ಪಾಟೀಲ್‌ರವರ ಹೆಸರನ್ನು ವಿಶೇಷವಾಗಿ ಹೇಳಬೇಕಾಗುತ್ತದೆ. ಹೆಚ್.ಕೆ. ಪಾಟೀಲ್‌ರವರು ಒಬ್ಬ ಕ್ರಿಯಾಶೀಲ ಮಂತ್ರಿಗಳಾಗಿದ್ದು ಸದರಿ ವಿಧೇಯಕವನ್ನು ತಂದಿರುವುದು ನಿಜವಾಗಿಯೂ ಸ್ವಾಗತಾರ್ಹವಾದುದಾಗಿದೆ. ಆದರೆ, ಹೆಚ್.ಕೆ. ಪಾಟೀಲ್‌ರವರ ತಂದೆಯವರಾದ ದಿವಂಗತ ಪೂಜ್ಯ ಕೆ.ಹೆಚ್. ಪಾಟೀಲ್‌ರವರ ಬಗ್ಗೆ ನನ್ನದೇ ಆದ ಒಂದು ಸ್ಪಂದನವಿದೆ. ವಿಧೇಯಕದಲ್ಲಿ ತಿಳಿಸಿರುವಂತೆ ಅಪೆಕ್ಸ್ ಬಾಡಿಗೆ ನೀರಾವರಿ ಮಂತ್ರಿಗಳೇ ಅಧ್ಯಕ್ಷರಾಗಬೇಕೆಂದಿರುವ ಬಗ್ಗೆ ನನ್ನ ಅಭಿಪ್ರಾಯವನ್ನು ಆಗಲೇ ವ್ಯಕ್ತಪಡಿಸಿದ್ದಾಯಿತು. ಇದು ಏಕೆ ಅಗತ್ಯವಿತ್ತು? ಮುಂತಾದ ವಿಷಯಗಳ ಬಗ್ಗೆ ನಾನು ಅನಂತರ ಮಾತನಾಡುತ್ತೇನೆ. ನೀರಾವರಿ ಮಂತ್ರಿಗಳಾಗಿ ನೀವು ಈ ರೀತಿ ಮಾಡಬಾರದಾಗಿತ್ತು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾರ್ಕೆಟಿಂಗ್ ಬೋರ್ಡಿಗೆ ಮಂತ್ರಿಗಳೇ ಅಧ್ಯಕ್ಷರೆಂದು ವಿಧೇಯಕದ ಮೂಲಕ ಏನು ತಂದಿದ್ದೀರಿ, ನಿಜವಾಗಿಯೂ ಇದು ಪ್ರಜಾತಂತ್ರ ವ್ಯವಸ್ಥೆಯಾಗುವುದಿಲ್ಲ. ಅದೇ ರೀತಿ ನೀರಾವರಿ ಸಹಕಾರ ಸಂಘಕ್ಕೆ ಸಂಬಂಧಿಸಿದ ತಿದ್ದುಪಡಿ ತಂದಿದ್ದು ಪ್ರಜಾತಂತ್ರದಲ್ಲಿ ಒಬ್ಬ ಮಂತ್ರಿ ಅದಕ್ಕೆ ಅಧ್ಯಕ್ಷರಾಗಿದ್ದರೆ ಯಾವ ಬೋರ್ಡ್ ಆಫ್ ಡೈರೆಕ್ಟರ್‌ಗೆ ಸಭೆಯಲ್ಲಿ ಅವರೆದುರು ಎದ್ದು ನಿಂತು ಮಾತನಾಡುವುದಕ್ಕೆ ಶಕ್ತಿ ಬರುತ್ತದೆ? ನೀವೇ ಹೇಳಿ. ಹೆಚ್.ಕೆ. ಪಾಟೀಲ್‌ರವರು ಲಿಬರಲ್ ಆಗಿ ಕೇಳಬಹುದು. ಆದರೆ, ಮುಂದಿನ ದಿನಗಳಲ್ಲಿ ಯಾರಾದರೂ ನೀರಾವರಿ ಮಂತ್ರಿಗಳಾದಾಗ, ಇದರ ಅಧ್ಯಕ್ಷರಾದಂಥ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯಲ್ಲಿ ಉತ್ತರ ಕೊಡುವುದಾಗಲೀ, ಅವರ ಮೇಲೆ ಪ್ರಸ್ತಾಪ ಮಾಡುವುದಾಗಲೀ ಸಾಧ್ಯವೇ? ಎಂಬುದನ್ನು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳ ಗಮನವನ್ನು ಮುಖ್ಯವಾಗಿ ಸೆಳೆಯುತ್ತಿದ್ದೇನೆ. ಇವೊತ್ತು ನೀರಿನ ನಿರ್ವಹಣೆ ಬಹಳ ಮುಖ್ಯವಾದುದಾಗಿದೆ. ಇದರ ಬಗ್ಗೆ ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳಾದ ಬೈರೇಗೌಡರು ಮತ್ತು ವೈ.ಕೆ. ರಾಮಯ್ಯನವರು ಬಹಳಷ್ಟು ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಮಾತನಾಡುತ್ತಾ ಒಂದು ಹೆಜ್ಜೆ ಮುಂದೆ ಹೋಗಿ ಶ್ರೀ ಬೈರೇಗೌಡರ ಹೆಸರನ್ನು ಪ್ರಸ್ತಾಪಿಸಿದಿರು.

ಇಸ್ರೇಲ್ ದೇಶದಲ್ಲಿ ಇವೊತ್ತು ಬೆಳೆಗೆ ನೀರನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಣೆ ಮಾಡುತ್ತಿದ್ದಾರೆ. ನಮ್ಮಲ್ಲಿ ಒಂದು ಗಾದೆ ಇದೆ. ಏನೆಂದರೆ, 'ತೊನ್ನೆ ಕಡಿತ' ಎಂಬ ಕೆಲವು ಭೂಮಿ ಇದ್ದು, ಅದರಲ್ಲಿ ಯಾವುದೇ ಬೆಳೆ ಬೆಳೆಯಲು ಪ್ರಯತ್ನಿಸಿದರೂ ಬೆಳೆಯಲಾಗುವುದಿಲ್ಲ. ಇದಕ್ಕಿಂತಲೂ ಹೀನಾಯಮಟ್ಟದಲ್ಲಿರುವ ಭೂಮಿ ಇಸ್ರೇಲ್‌ನಲ್ಲಿದೆ. ಅಲ್ಲಿ ನೀರಿಗೇಕೆ ಅವರು ಅಷ್ಟೊಂದು ಒತ್ತು ಕೊಡುವಂಥ ಪರಿಸ್ಥಿತಿ ಬಂದಿತೆಂದರೆ, ಅಲ್ಲಿ ಒಂದೊಂದು ಹನಿ ನೀರು ಕೂಡ ಸರ್ಕಾರದ ಆಸ್ತಿಯಾಗಿದೆ! ನಮ್ಮ ದೇಶದಲ್ಲಿ ಎಲ್ಲೆಂದರಲ್ಲಿ ಬೋರ್‌ವೆಲ್‌ಗಳನ್ನು ಕೊರೆದಂತೆ ಆ ದೇಶದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವಂತಿಲ್ಲ. ಎಲ್ಲಿಗೆ ಬೇಕಾದರೂ ನೀರು ಬಿಡುವಂತಿಲ್ಲ ಮತ್ತು ತೆಗೆದುಕೊಂಡು ಹೋಗುವಂತಿಲ್ಲ! ನಮ್ಮ ದೇಶದಲ್ಲಿ ಭೂಮಿಯಲ್ಲಿ ಲಭ್ಯವಾಗುವ ಖನಿಜ ವಸ್ತುಗಳು ಹೇಗೆ ಸರ್ಕಾರದ ಆಸ್ತಿಯಾಗಿವೆಯೋ ಹಾಗೆ ಆ ದೇಶದಲ್ಲಿ ಭೂಮಿ ಮತ್ತು ನೀರು ಸರ್ಕಾರದ ಆಸ್ತಿಯಾಗಿದೆ! ಇವೆರಡೂ ಕಾರಣಗಳಿಂದಲೇ ಇಸ್ರೇಲ್ ದೇಶದಲ್ಲಿ ಇವೊತ್ತು ನೀರಿನ ನಿರ್ವಹಣೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ನಾನು ಇದೇ ಸದನದಲ್ಲಿ ಬಹಳಷ್ಟು ಸಾರಿ ಒಂದು ವಿಚಾರ ಹೇಳಿದ್ದೇನೆ. ಏನೆಂದರೆ, ಕೇರಳದ ಕೊಚ್ಚಿನ್ ಪ್ರದೇಶದ ಒಬ್ಬ ಇಲಿಯಾವೊ ಎಂಬ ಹೆಸರಿನ ರೈತನೊಬ್ಬ ಕುರಿ ಸಾಕಣೆಗಾಗಿ ಮೂವತ್ತು ವರ್ಷಗಳ ಹಿಂದೆ ಇಸ್ರೇಲ್ ದೇಶಕ್ಕೆ ಹೋಗಿ ನೆಲೆಸಿದ್ದಾನೆ. ಇಸ್ರೇಲ್ ದೇಶಕ್ಕೆ ನಾವು ಹೋಗಿದ್ದಂಥ ಸಂದರ್ಭದಲ್ಲಿ ಆತ ನನ್ನನ್ನು ಹಾಗೂ ಮಾನ್ಯ ಬೈರೇಗೌಡರನ್ನು ಉಪಹಾರಕ್ಕೆ ಆಹ್ವಾನಿಸಿ, ಉಪಹಾರ ಕೊಡುತ್ತಾ ಒಂದು ಮಾತು ಹೇಳಿದ. ಏನೆಂದರೆ, "with one inch of land and one drop of water I will earn one Dollar" ಈ ಮಾತು ಹೇಳಬೇಕಾದರೆ ಬಹಳ ಧೈರ್ಯ ಬೇಕಾಗುತ್ತದೆ. ನಮ್ಮ ದೇಶದ ಕೇರಳ ರಾಜ್ಯದಿಂದ ಇಸ್ರೇಲ್ ದೇಶಕ್ಕೆ ಹೋಗಿ ನೆಲೆಸಿರುವ ರೈತನ ಬಾಯಲ್ಲಿ ಬಂದ ಅಂತಹ ಶ್ರದ್ಧೆಯ, ಗಡಸುತನದ ಮಾತುಗಳನ್ನು ಕೇಳಿ ನನಗೆ ಮೈ ಪುಳಕಿತವಾಯಿತು. 'ಒಂದು ಇಂಚು ಭೂಮಿ ಹಾಗೂ ಒಂದು ಹನಿ ನೀರಿದ್ದರೆ ಒಂದು ಡಾಲರ್‌ನಷ್ಟು ಹಣ ಗಳಿಸುತ್ತೇನೆ' ಎಂದು ಧೈರ್ಯವಾಗಿ ಹೇಳಬೇಕಾದರೆ ಅಂತಹ ಪರಿಸ್ಥಿತಿ ಇವೊತ್ತು ನಮ್ಮ ದೇಶದಲ್ಲಿಲ್ಲ. ಅಲ್ಲಿ ವರ್ಷಕ್ಕೆ ಮೂರು ಇಂಚಿನಷ್ಟು ಮಳೆಯಾಗುತ್ತದೆ. ಆ ದೇಶದಲ್ಲಿ ಕುಡಿಯುವುದಕ್ಕೆ ಮತ್ತು ವ್ಯವಸಾಯದ ಉದ್ದೇಶಕ್ಕಾಗಿ ಮಾತ್ರ ಜೋರ್ಡಾನ್ ನದಿಯ ನೀರನ್ನು ಉಪಯೋಗಿಸುತ್ತಾರೆ. ಆದರೆ, ಅದೃಷ್ಟವಶಾತ್ ನಮ್ಮ ದೇಶದಲ್ಲಿ ಬೇಕಾದಷ್ಟು ನದಿಗಳಿದ್ದು ಸಾಕಷ್ಟು ಪ್ರಮಾಣದಲ್ಲಿ ಕೆಲವು ಭಾಗಗಳಲ್ಲಿ ಮಳೆಯಾಗುತ್ತಿದ್ದರೂ ನೀರನ್ನು ನಾವು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದೇವೆಯೇ? ಎಂಬುದನ್ನು ಯೋಚಿಸಬೇಕು. ಮಾನ್ಯ ಹಿರಿಯ ಸದಸ್ಯರಾದ ವೈ.ಕೆ. ರಾಮಯ್ಯನವರು ಮಾತನಾಡುತ್ತಾ ಹೇಳಿದರು, ನಾವು ಚಿಕ್ಕ ಹುಡುಗರಾಗಿದ್ದಾಗ ಒಳ್ಳೆಯ ಮಳೆಯಾಗುತ್ತಿತ್ತು, ಪ್ರತಿ ವರ್ಷವೂ ಕೆರೆ-ಕುಂಟೆಗಳೆಲ್ಲವೂ ತುಂಬಿರುತ್ತಿದ್ದವು. ಆದರೆ, ಈಗ 6-7 ವರ್ಷಗಳಿಗೊಮ್ಮೆ ಕೆರೆ ತುಂಬಿ ತುಳುಕಿದರೆ ಅದೇ ದೊಡ್ಡ ಸಾಧನೆ ಎಂಬುದು. ಈ ಸಲ ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗದಿರುವುದರಿಂದ ಅಲ್ಲಿನ ಕೆರೆಗಳು ತುಂಬಿರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ರೇಷ್ಮೆ ಮತ್ತು ಜವಳಿ ಮಂತ್ರಿಗಳಾದ ಎಂ. ಮಹದೇವುರವರು 'ತಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದ್ದರಿಂದ ಒಳ್ಳೆಯ ಮಳೆಯಾಯಿತು' ಎಂದರು. ಈ ಕುರಿತು ನಾನು ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ಕೋಲಾರ ಜಿಲ್ಲೆಯಲ್ಲಿ ಈ ವರ್ಷ ಕಡಿಮೆ ಪ್ರಮಾಣದಲ್ಲಿ

ಮಳೆಯಾಯಿತು. ಕಾರಣ, ಅಲ್ಲಿ ಈ ಸಲ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕದಿರುವುದೇ ಆಗಿದೆ. ಆ ಜಿಲ್ಲೆಯಲ್ಲಿ ನಿಮ್ಮ ಪಕ್ಷ ಮುನಿಸಿಕೊಂಡಂತೆ ಕಾಣುತ್ತದಾದ್ದರಿಂದ, ಅಲ್ಲಿ ಒಳ್ಳೆಯ ಮಳೆಯಾಗುವಂತೆ ತಾವು ದೇವರ ಕಡೆಯಿಂದ ವರ ಕೊಡಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ಮಹದೇವು ಮಾತ್ರ ಇದ್ದಾರೆ ಬೆಂಕಿ ಆರಿಹೋಗಿದೆ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಬೆಂಕಿ ಶಮನವಾಗಲಿಯೆಂದು ನಮ್ಮ ಜಿಲ್ಲೆಯಲ್ಲಿ ಈ ಸಲ ಭಾರಿ ಮಳೆಯಾಗಿಬಿಟ್ಟಿದೆ.

ಶ್ರೀ ಸಿ. ಬೈರೇಗೌಡ : ಕೇವಲ ಬೆಂಕಿ ಮಹದೇವು ಅಲ್ಲ. ಪೆಟ್ರೋಲ್, ಬೆಂಕಿ ಮಹದೇವು ಎಂದು ಹೊಸದಾಗಿ ಗುಣವಾಚಕವನ್ನು ಸೇರಿಸಿ ಜನರು ಮಾತನಾಡುತ್ತಿದ್ದಾರೆ.

ಶ್ರೀ ಎಂ. ಮಹದೇವ್ : ಎರಡನ್ನೂ ಉಪಯೋಗಿಸುವುದನ್ನು ಮರೆತುಬಿಟ್ಟಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಬೆಂಕಿ ಇಲ್ಲದೆಯೇ ದೈನಂದಿನ ಕೆಲಸಗಳೇ ಪ್ರಾರಂಭವಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ಕಡೆ ಹೆಚ್ಚಾಗಿ ಗಮನಕೊಡುವಂಥ ಈ ನಿಟ್ಟಿನಲ್ಲಿ ಬಿಲ್ಲನ್ನು ತಂದಿರುವುದು ಸ್ವಾಗತಾರ್ಹವಾದುದು. ಆಂಧ್ರ ಪ್ರದೇಶದಲ್ಲಿ ಕೆರೆಗಳಿಗೆ ತೂಬುಗಳನ್ನು ಕೂರಿಸಿ ಮೂರ್‍ನಾಲ್ಕು ವರ್ಷಗಳಾಗಿದೆ. ಅದು ನಮ್ಮ ಪಕ್ಕದ ತಾಲ್ಲೂಕುಗಳಲಾದ ಮಲಂದೇರು, ಮದನಪಲ್ಲಿ, ಕುಪ್ಪಂ ಇರಬಹುದು. ಆ ಮೂಲಕ ಬೋರ್‌ವೆಲ್‌ಗಳಲ್ಲಿ, ಬಾವಿಗಳಲ್ಲಿ ನೀರು ಬರುವಂಥ ಕೆಲಸವನ್ನು ಮಾಡಿದ್ದಾರೆ. ಕೆರೆಯಿಂದ ಹೊರಕ್ಕೆ ನೀರನ್ನು ಬಿಡುತ್ತಿಲ್ಲ. ಆದ್ದರಿಂದ ಅಂತರ್ಜಲದ ಮಟ್ಟವು ಹೆಚ್ಚಾಗಿದೆ. ಈ ವ್ಯವಸ್ಥೆ ಆಗಬೇಕೆಂದು ನಮ್ಮ ಜಿಲ್ಲಾ ಸಚಿವರು ಒಂದು ಸಭೆಯನ್ನೂ ಮಾಡಿದ್ದರು. ಇದರ ಬಗ್ಗೆ ಜನರಿಂದ ಸಮ್ಮಿಶ್ರ ಪ್ರತಿಕ್ರಿಯೆ ಬಂದಿದೆ. ಕೆಲವರು ತೂಬುಗಳನ್ನು ತೆಗೆಯಬೇಕು ಎಂದರೆ ಮತ್ತೆ ಕೆಲವರು ತೆಗೆಯಬಾರದು ಎಂದು ಹೇಳುತ್ತಾರೆ. ಬೆಂಗಳೂರು ಗ್ರಾಮಾಂತರ, ತುಮಕೂರು, ನಮ್ಮ ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ರೀತಿ ಕೆರೆಗಳ ತೂಬುಗಳನ್ನು ಬಂದ್ ಮಾಡಿದರೆ ನಿಜವಾಗಿಯೂ ಅಂತರ್ಜಲದ ಮಟ್ಟ ಜಾಸ್ತಿಯಾಗುತ್ತದೆಂದು ಹೇಳಬಯಸುತ್ತೇನೆ. ನಮ್ಮಲ್ಲಿ ತೆಂಗು, ಮಾವು, ರೇಷ್ಮೆ ಮುಂತಾದವಕ್ಕೆ ತುಂತುರು ನೀರಾವರಿ ವ್ಯವಸ್ಥೆ ಮಾಡಿದ್ದಾರೆ. ಹಿಂದಿನ ಸರ್ಕಾರದಲ್ಲಿ ಇದಕ್ಕೆ ಹೆಣ್ಣುಮಕ್ಕಳಿಗೆ 90 ಪರ್‌ಸೆಂಟ್‌ವರೆಗೆ ಸಬ್ಸಿಡಿ, ಸಣ್ಣ ರೈತರಿಗೆ ಐವತ್ತು ಪರ್‌ಸೆಂಟ್‌ವರೆಗೆ ಸಬ್ಸಿಡಿ ಕೊಡುತ್ತಿದ್ದರು. ಅದಕ್ಕೆ ನಾವು ಒತ್ತು ಕೊಡುತ್ತಿದ್ದೇವೆ. ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ನಾವು ತುಂತುರು ನೀರಾವರಿಗೆ, ಡ್ರಿಪ್ ಇರಿಗೇಷನ್‌ಗೆ ಒತ್ತು ಕೊಡುತ್ತಿದ್ದೇವೆ. ಇದನ್ನು ಮಾಡಿದ್ದೇ ಆದರೆ ನಾವು ವಾಟರ್ ಮ್ಯಾನೇಜ್‌ಮೆಂಟನ್ನು ಮಾಡಬಹುದು. ಮುಂದಿನ ದಿವಸಗಳಲ್ಲಿ ಮಳೆ ಹೇಗೆ ಆಗುತ್ತದೋ, ಇಲ್ಲವೋ ಎಂಬುದು ಗೊತ್ತಿಲ್ಲ. ಇವತ್ತು ಮರಗಳನ್ನು ನಿರ್ಮೂಲನೆ ಮಾಡುತ್ತಿರುವುದರಿಂದ ಸರಿಯಾಗಿ ಮಳೆ ಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ಬಹಳ ಮುಖ್ಯವಾದುದು. ಇಸ್ರೇಲ್ ದೇಶದಲ್ಲಿ ಮಾವಿನ ಗಿಡಗಳನ್ನು ಹಾಕಿದ್ದರು.

ನಮ್ಮಲ್ಲೇನು ಮಾವಿನ ಬೆಳೆ ಬರುತ್ತದೆ ಅದರ ಐದು ಪಟ್ಟು ಮಾವಿನ ಬೆಳೆ ಇಸ್ರೇಲ್‌ನಲ್ಲಿ ಬರುತ್ತದೆ. ಅವರೂ ಸಹ ಡ್ರಿಪ್-ಇರಿಗೇಷನ್ ಮಾಡಿದ್ದಾರೆ. ಅವರು ಹಲವಾರು ವೆರೈಟಿಗಳನ್ನು ಇಟ್ಟುಕೊಂಡಿದ್ದಾರೆ, ಕ್ರೋನಿಂಗ್ ಮಾಡುತ್ತಾರೆ. ಆ ರೀತಿ ಏನು ಬೆಳೆಗಳನ್ನು ಬೆಳೆಯುತ್ತಾರೆ ಅದನ್ನು ಬೆಳೆಯಲು ಒತ್ತು ಕೊಡುವ ಉದ್ದೇಶವನ್ನು ಬಿಲ್ಲಿನಲ್ಲಿ ಅಳವಡಿಸಿದ್ದೀರಿ. ಇದು ಬಹಳ ಮುಖ್ಯ. ಕ್ರಾಪ್‌ಪ್ಯಾಟ್ರನ್‌ನಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೆಯಬೇಕೆಂದು ಇರುತ್ತದೆ. ನದಿ ದಂಡೆಯಲ್ಲಿ ಕಬ್ಬು ಮತ್ತು ಭತ್ತ ಈ ಎರಡನ್ನು ಮಾತ್ರ ಬೆಳೆಯುತ್ತಾರೆ. ಅದಕ್ಕಿಂತ ಹೆಚ್ಚು ಆದಾಯ ಬರುವ ಬೆಳೆಯನ್ನು ನಮ್ಮ ರೈತರು ಬೆಳೆಯುವುದೇ ಇಲ್ಲ. ಈ ಮನೋಭಾವನೆಯನ್ನು ಬದಲಾವಣೆ ಮಾಡುವ ಕೆಲಸವನ್ನು ನಾವು, ನೀವು ಸಹಕಾರಿ ಸಂಘಗಳ ಮೂಲಕ ಮಾಡಬೇಕು. ವಾಟರ್ ಮ್ಯಾನೇಜ್‌ಮೆಂಟ್ ಮಾಡುವ ಬಗ್ಗೆ ಇಸ್ರೇಲ್ ದೇಶದವರನ್ನು ಕರೆಸಿ ಕೋಲಾರ, ಗುಲ್ಬರ್ಗಾ ಜಿಲ್ಲೆಗಳನ್ನು ವಹಿಸಿ ನೀರನ್ನು ಮೇಲೆ ಎತ್ತುವುದಕ್ಕೆ ಯಾವ್ಯಾವ ರೀತಿಯಿಂದ ಮಾಡಬೇಕು ಎಂಬ ಬಗ್ಗೆ ಸರ್ವೆ ಮಾಡಿ ಮಾಹಿತಿ ಕೊಡಲು ಹೇಳಲಾಗಿತ್ತು. ಆದರೆ ಕಾರಣಾಂತರಗಳಿಂದ ಅದು ಎಲ್ಲಿ ನಿಂತು ಹೋಯಿತೊ ಗೊತ್ತಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಆದ್ದರಿಂದಲೇ ನಾನು ಮಾನ್ಯ ಶ್ರೀನಿವಾಸಗೌಡರಿಗೆ, ಮಾನ್ಯ ಬೈರೇಗೌಡರಿಗೆ ನಿನ್ನೆಯಿಂದ ಹೇಳುತ್ತಿದ್ದೇನೆ. What is relevant in Israel, is not relevant in India or Kolar. ಕಾರಣವನ್ನು ಅವರೇ ಈಗ ಹೇಳಿದ್ದಾರೆ. ನಮ್ಮಲ್ಲಿ ಬೇಸಾಯವು ಲಾಭದಾಯಕವೋ ಅಲ್ಲವೋ ಎಂಬ ಬಗ್ಗೆ ನೋಡುವುದೇ ಇಲ್ಲ. ಮುಂಗಾರು ಮಳೆ ಬಂದರೆ ಸಾಕು ಹೆಗಲ ಮೇಲೆ ನೇಗಿಲನ್ನು ಇಟ್ಟುಕೊಂಡು ಹೋಗಿ ರಾಗಿಯನ್ನು ಕಬ್ಬು, ಭತ್ತವನ್ನು ಹಾಕುತ್ತೇವೆ. ಆದ್ದರಿಂದ ನಮ್ಮ ಜನರಲ್ಲಿ ನೀರಿನ ನಿರ್ವಹಣೆಯ ಜೊತೆಗೆ ಯಾವ ಬೆಳೆಯನ್ನು ಬೆಳೆದರೆ ಲಾಭದಾಯಕವಾಗುತ್ತದೆ ಎಂಬ ಬಗ್ಗೆ ಅರಿವನ್ನು ಮೂಡಿಸಬೇಕೆಂದು ಮಾನ್ಯ ಸಚಿವರಿಗೆ ನಾನು ಹೇಳಿದ್ದು. ಇಸ್ರೇಲ್‌ನಲ್ಲಿರುವ ಸಾಮಾಜಿಕ ಹಿನ್ನೆಲೆಯಲ್ಲಿ ಮಳೆ ಬಂದಕೂಡಲೇ ಅವರು ರಾಗಿಯನ್ನು ಬೆಳೆದು ಬಿಡುವುದಿಲ್ಲ. ಯಾವ ಬೆಳೆ ಹಾಕಿದರೆ ಎಷ್ಟು ಬೆಳೆ ಬರುತ್ತದೆ, ಯಾವ ರೋಗ ಬರುತ್ತದೆ ಮುಂತಾದ ಬಗ್ಗೆ ನೋಡುತ್ತಾರೆ. ಆದರೆ ನಮ್ಮಲ್ಲಿ ಆ ರೀತಿ ಸಾಮಾಜಿಕ ಹಿನ್ನೆಲೆ ಇಲ್ಲ. ಮುಂಗಾರು ಮಳೆ ಬಿದ್ದ ತಕ್ಷಣವೇ ರಾಗಿ, ಭತ್ತ, ಕಬ್ಬನ್ನು ಹಾಕಿಬಿಡುತ್ತಾರೆ. ಆದ್ದರಿಂದ ಭಾರತದ ಬೇಸಾಯದ ಪದ್ಧತಿಗೂ, ಬೇಸಾಯ ಮಾಡುವ ಜನರ ಸಾಮಾಜಿಕ ಹಿನ್ನೆಲೆಗೂ, ಇಸ್ರೇಲ್ ದೇಶದಲ್ಲಿ ಬೇಸಾಯ ಮಾಡುವಂಥ ಜನರ ಸಾಮಾಜಿಕ ಹಿನ್ನೆಲೆಗೂ ಬಹಳ ವ್ಯತ್ಯಾಸ ಇದೆ. ಈ ಬದಲಾವಣೆಯನ್ನು ನಮ್ಮ ದೇಶದಲ್ಲಿ ತರಬೇಕಾಗಿದೆ. ಕೈಗಾರಿಕೆಯಂತೆ ಬೇಸಾಯವನ್ನೂ ಒಂದು ಉದ್ದಿಮೆಯಾಗಿ ಪರಿಗಣಿಸಿ, ಆ ಬದಲಾವಣೆಯನ್ನು ನಮ್ಮ ದೇಶದಲ್ಲಿ ತಂದರೆ ಮಾತ್ರ ಭಾರತ ದೇಶವನ್ನು ಇಸ್ರೇಲ್ ದೇಶವನ್ನಾಗಿ ಮಾಡಬಹುದೆಂದು ನನ್ನ ಅನಿಸಿಕೆ. It is just a way of life.

ಶ್ರೀ ಕೆ. ಶ್ರೀನಿವಾಸಗೌಡ : ಇವತ್ತು ಆ ಬದಲಾವಣೆ ಆಗಬೇಕು ಎಂಬುದೇ ಈ ಬಿಲ್ಲಿನ ಉದ್ದೇಶ. ಬೀಜಗಳ ಬಗ್ಗೆ ಹೇಳುವುದಾದರೆ, ಸರ್ಕಾರ ಟಿಶ್ಯೂಕಲ್ಚರ್ ಬಗ್ಗೆ ಎಷ್ಟೇ ಪ್ರಯತ್ನ ಮಾಡಿದರೂ ಸಹ ಅದಕ್ಕೆ ಪ್ರಚಾರ ಸಿಕ್ಕಲಿಲ್ಲ. ಆದರೆ ಇಂಡೋ-ಅಮೇರಿಕನ್ ಸೀಡ್ಸ್‌ನವರು ಟೊಮ್ಯಾಟೊ ಬೆಳೆಯುವುದಾಗಲಿ, ಕ್ಯಾಪ್ಸಿಕಮ್ ಬೆಳೆಯುವುದಾಗಲಿ, ಬಾಳೆ ಬೆಳೆಯುವುದಾಗಲೀ, ಹಣ್ಣು ತರಕಾರಿಗಳನ್ನು

ಬೆಳೆಯವುದಾಗಲೀ ಟಿಶ್ಯೂಕಲ್ಚರನ್ನು ಇಡುತ್ತಿದ್ದಂತೆ ನಮ್ಮ ರಾಜ್ಯದಲ್ಲಿ ಅದಕ್ಕೆ ಬಹಳ ಅವಕಾಶ ಸಿಕ್ಕಿತು. ಇವತ್ತು ವಾಟರ್ ಮ್ಯಾನೇಜ್‌ಮೆಂಟ್‌ಗೆ ನಾವು ಆ ದಿಕ್ಕಿನಲ್ಲಿ ಒತ್ತು ಕೊಡಬೇಕಾಗುತ್ತದೆ. ಬಹಳ ಹೆಚ್ಚು ನೀರನ್ನು ಕೊಟ್ಟರೆ ಹೆಚ್ಚು ಬೆಳೆಯೇನೂ ಬರುವುದಿಲ್ಲ. ತಂತ್ರಜ್ಞಾನವನ್ನು ಉಪಯೋಗಿಸಿ ಸಮರ್ಪಕವಾಗಿ ನೀರು ಕೊಟ್ಟರೆ ಬೆಳೆ ಸಹ ಜಾಸ್ತಿ ಬರುತ್ತದೆ. ಅದರ ಬಗ್ಗೆ ಸಹಕಾರ ಸಂಘಗಳ ಮೂಲಕ ರೈತರಲ್ಲಿ ಅರಿವು ಮೂಡಿಸಬೇಕಾಗುತ್ತದೆ. ಇವತ್ತು ತೆಂಗಿನ ಗಿಡವನ್ನು ಹಾಕಿ ನೀರು ಕಟ್ಟು ಎಂದರೆ ಪೈಪಿನ ಮೂಲಕ ಹಾಕದೆ ಕಾಲುವೆಯ ಮೂಲಕ ನಾವು ಹಾಕುತ್ತೇವೆ. ಆದರೆ ಗಿಡವು ಎಷ್ಟು ಬೇಕೋ ಅಷ್ಟು ನೀರನ್ನು ಕುಡಿಯುತ್ತದೆಯೇ ಹೊರತು ಉಳಿದ ನೀರೆಲ್ಲ ನಷ್ಟವಾಗುತ್ತದೆ. ಇದರ ಬಗ್ಗೆ ವ್ಯವಸಾಯ ಇಲಾಖೆಯ ಅಧಿಕಾರಿಗಳು ಯೋಚನೆ ಮಾಡಲು ಹೋಗುವುದಿಲ್ಲ. ಅವರು ಪಟ್ಟಣದಲ್ಲಿ ವ್ಯವಸಾಯವನ್ನು ಮಾಡುತ್ತಾರೆಯೇ ವಿನಹ ಹಳ್ಳಿಗಳಲ್ಲಿ ವ್ಯವಸಾಯ ಮಾಡುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಅವರು ಹಳ್ಳಿಗಳಿಗೆ ಬಂದು ವ್ಯವಸಯ ಮಾಡುವುದನ್ನು ನೋಡಬೇಕು. ವಾಟರ್ ಮ್ಯಾನೇಜ್‌ಮೆಂಟ್‌ಗೆ ಹೆಚ್ಚು ಒತ್ತು ಕೊಡುವ ಕೆಲಸವನ್ನು ನಾವು ಮಾಡಬೇಕು. ನಮ್ಮಲ್ಲಿ ಸಣ್ಣ ನೀರಾವರಿ ಕೆರೆಗಳ ಬಗ್ಗೆ ಸಹ ಸಹಕಾರಿ ಸಂಘಗಳು ಆಗುತ್ತಿದೆ. ಮಾನ್ಯ ಅರಗ ಜ್ಞಾನೇಂದ್ರರವರು ಮಾನ್ಯ ಬೈರೇಗೌಡರು ಹೇಳಿದಂತೆ ದಾರಿಯಲ್ಲಿ ಇದ್ದವರು, ಸಾರಾಯಿ ಅಂಗಡಿಯಲ್ಲಿ ಇದ್ದವರನ್ನು ಕೂರಿಸಿಕೊಂಡು ಒಂದು ಸಂಘವನ್ನು ಮಾಡಲು ಹೊರಟಿದ್ದಾರೆ. ಇವತ್ತು ಸಣ್ಣ ನೀರಾವರಿ ಕೆರೆಗಳ ಹೂಳನ್ನು ಎತ್ತಲು 1200 ಕೋಟಿ ಹಣವನ್ನು ಕೊಡುವುದಾಗಿ ಹೇಳುತ್ತಿದ್ದಾರೆ. ಈ ಸಹಕಾರಿ ಸಂಘಗಳಲ್ಲಿ ಪ್ರತಿಯೊಬ್ಬ ರೈತನಿಗೂ ಷೇರುದಾರನಾಗಲು ಅವಕಾಶ ಸಿಕ್ಕಬೇಕು. ನೂರು ರೂಪಾಯಿಗಳನ್ನು ಕೊಟ್ಟು ಷೇರುದಾರನಾದಾಗ ಮಾತ್ರ ಅವನಿಗೆ ಸದಸ್ಯತ್ವ ಸಿಗುತ್ತದೆಂದು ತಾವೇನು ಬಿಲ್ಲನ್ನು ತಂದಿದ್ದೀರಿ ಅದು ಸಾರ್ಥಕವಾಗುತ್ತದೆ. ಕೆರೆಗಳ ಕೆಳಗಡೆ ಇರುವವರಲ್ಲಿ ಮೊದಲು ಇರುವವರೆಲ್ಲ ಭತ್ತ, ಕಬ್ಬನ್ನು ಹಾಕುತ್ತಾರೆ. ನೀರು ಹೋಗದ ಕೊನೆಯವರು, ಟೈಲಾಂಡ್‌ನವರು ಅರ್ಕ್ನೊ, ಸಾಮೆ ಇವನ್ನು ಬೆಳೆಯಬೇಕಾಗುತ್ತದೆ. ಈ ಪದಗಳನ್ನು ತಾವು ಕೇಳಿಯೇ ಇಲ್ಲ. ನಮ್ಮ ಬಡ ಜಿಲ್ಲೆಗಳಲ್ಲಿ ಹಿಂದೆ ಹೊಟ್ಟೆಗೆ ಇಲ್ಲದಿದ್ದಾಗ ರಾಗಿ ಅರ್ಕ್ನೊ, ಸಾಮೆ ಇವೆಲ್ಲವನ್ನು ಬೆಳೆಯುತ್ತಿದ್ದೆವು. ತಾವು ಕ್ರಾಪ್ ಪ್ಯಾಟ್ರನ್ ಮಾಡುವಾಗ ಆ ಕೆರೆಯಲ್ಲಿ ಎಷ್ಟು ನೀರು ಇದೆ, ಎಷ್ಟು ಬೆಳೆಗೆ ಆಗುತ್ತದೆ, ಭತ್ತದ ಬೆಳೆ ಮಾಡಬೇಕೇ, ಕಬ್ಬಿನ ಬೆಳೆ, ಹಳಸಂದೆ ಬೆಳೆ ಮಾಡಬೇಕೇ ಎಂದು ಬೆಳೆಗಳಲ್ಲಿ ಬದಲಾವಣೆ ಮಾಡುವ ಕೆಲಸವನ್ನು ಆ ಸಹಕಾರ ಸಂಘ ತೀರ್ಮಾನ ತೆಗೆದುಕೊಳ್ಳುವ ಮೊದಲು ಸರ್ಕಾರದಿಂದ ನೀರಾವರಿ ಇಲಾಖೆಗೆ ಆದೇಶಗಳು ಹೋಗಬೇಕು. ಇವತ್ತು ನಮ್ಮ ಸಣ್ಣ ನೀರಾವರಿ ಇಲಾಖೆ ಕೆರೆಗಳ ನಿರ್ವಹಣೆ ಮಾಡುತ್ತಿದೆ. ಕೆರೆಗಳ ತೂಬು ಒಡೆದು ಹೋದರೆ ಅದನ್ನು ಮುಚ್ಚುವುದು, ಕೋಡಿ ಏನಾದರೂ ಹೆಚ್ಚು ಕಡಿಮೆಯಾದರೆ ಅದನ್ನು ರಿಪೇರಿ ಮಾಡುವ ಕೆಲಸವನ್ನು ಇಲಾಖೆಯು ಈಗ ಮಾಡುತ್ತಿದೆ. ಕೆರೆಯಲ್ಲಿರುವ ನೀರು ಎಷ್ಟು ಎಕರೆಗೆ ನೀರಾವರಿಯಾಗುತ್ತದೆ ಅಥವಾ ಎಷ್ಟು ತಿಂಗಳುಗಳ ಕಾಲ ಆ ಕೆರೆಯ ನೀರನ್ನು ಬಳಕೆ ಮಾಡಿಕೊಳ್ಳಲು ಸಾಧ್ಯವಿದೆ ಎಂಬ ಬಗ್ಗೆ ಸಣ್ಣ ನೀರಾವರಿ ಇಲಾಖೆ ಕೃಷಿ ಇಲಾಖೆಗೆ ಮಾಹಿತಿ ನೀಡಬೇಕು. ಕೆರೆಯಲ್ಲಿ ಇಷ್ಟೇ ನೀರಿರುವುದರಿಂದ ರೈತರು ಇಂಥಿಂಥ ಬೆಳೆಗಳನ್ನು ಇಷ್ಟು ತಿಂಗಳುಗಳಲ್ಲಿ ಬೆಳೆಯಬಹುದಾಗಿದೆ ಎಂಬ ಮಾಹಿತಿಯನ್ನು ಕೃಷಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಗಳೆರಡೂ ಸೇರಿ ರೈತನಿಗೆ ನೀಡುವಂತಹ ಕೆಲಸ

ಮಾಡಬೇಕು. ಆಗ ಮಾತ್ರ ಈ ಕ್ರಾಪ್-ಪ್ಯಾಟ್ರನ್ ದಿಕ್ಕನ್ನು ಬದಲಾಯಿಸಬಹುದೇ ವಿನಃ ಅಥವಾ ವಾಟರ್ ಮ್ಯಾನೇಜ್‌ಮೆಂಟ್ ಅನ್ನು ಬದಲಾಯಿಸಬಹುದೇ ವಿನಃ ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. 'ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು' ಎನ್ನುವಂತಹ ಪರಿಸ್ಥಿತಿಗೆ ಇವತ್ತು ನಾವು ಬಂದಿದ್ದೇವೆ. ಈ ಒಂದು ಕೆಲಸವನ್ನು ಹೆಚ್ಚಿನ ಒತ್ತು ಕೊಟ್ಟು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೆರೆಗಳ ಒತ್ತುವರಿ ಮಾಡಿಕೊಳ್ಳುವುದು ಒಂದು ದೊಡ್ಡ ಪಿಡುಗು ಆಗಿದೆ. ನನ್ನಂತಹ ದೊಡ್ಡ ಮನುಷ್ಯ ಅಥವಾ ಊರಿನ ಪಟೇಲ ಅಥವಾ ಗೌಡರು ಕೆರೆಗಳ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿದ್ದರೆ ಅದನ್ನು ನೋಡಿ ಬಡಬಗ್ಗರು ಹಾಗೇ ಇರುವಂತಹ ಪರಿಸ್ಥಿತಿ ಇದೆ. ಅದರಲ್ಲೂ ಬಯಲು ಸೀಮೆಯಲ್ಲಿ ಒತ್ತುವರಿ ಮಾಡಿಕೊಳ್ಳುವುದು ಹೆಚ್ಚಾಗಿದೆ. ಯಾರೋ ಮಹಾನುಭಾವರು ಸಾವಿರಾರು ವರ್ಷಗಳ ಹಿಂದೆ ಈ ಕೆರೆಗಳನ್ನು ಕಟ್ಟಿ ನಮಗೆ ಉಪಕಾರ ಮಾಡಿರುತ್ತಾರೆ. ಅಂತಹ ಕೆರೆಗಳನ್ನು ಒತ್ತುವರಿ ಮಾಡಿಕೊಳ್ಳುವುದು ಈಗ ದೊಡ್ಡ ಪಿಡುಗು ಆಗಿದೆ. ಕನಿಷ್ಟ ಕೆರೆಗಳ ಬಾರ್ಡರ್ ಸರ್ವೆ ಮಾಡಲಿಕ್ಕೆ ಒತ್ತಾಯಿಸಿದರೆ ಮಾನ್ಯ ಕಂದಾಯ ಮಂತ್ರಿಗಳು ಇಲಾಖೆಯಲ್ಲಿ ಸರ್ವೇಯರ್‌ಗಳು ಇಲ್ಲವೆಂದು ಹೇಳುತ್ತಾರೆ. ಕೆರೆ ತುಂಬಿದಾಗ ಅದರ ಬಾರ್ಡರ್‌ನಲ್ಲಿ ಒಂದು ಕಲ್ಲು ಹಾಕಿ ಅದರ ಗಡಿ ಗುರುತಿಸುವಿಕೆ ಮಾಡುವ ಕೆಲಸವಾದರೂ ಆಗಬೇಕು. ಅದು ಬಹಳ ಮುಖ್ಯವಾಗಿ ಆಗಬೇಕಾದ ಕೆಲಸವಾಗಿರುತ್ತದೆ. ಇವತ್ತು ಕೆರೆಗಳ ಸಂರಕ್ಷಣೆ ಮಾಡುವಂತಹ ಕೆಲಸವನ್ನೂ ಕೂಡ ನಾವು ಆ ಸಹಕಾರ ಸಂಘಗಳಿಗೆ ಕೊಡಬೇಕು. ಹಿಂದೆ ಲೋಕೋಪಯೋಗಿ ಇಲಾಖೆ ನೀರಾವರಿಯನ್ನು ಹೊರತುಪಡಿಸಿ ಇದ್ದಾಗ ಪ್ರತಿ ವರ್ಷ ಯಾವುದಾದರೂ ಒಂದು ಕೆರೆಯ ತೂಬು, ಕೋಡಿ ಅಥವಾ ಏರಿಯ ಕೆಲಸ ಆಗುತ್ತಿತ್ತು. ಆದರೆ ಇತ್ತೀಚೆಗೆ ಅದಕ್ಕೆ ಹಣ ಇಲ್ಲ. ನೀರಾವರಿ ಇಲಾಖೆಯವರು ಕೆರೆ ಹೂಳು ತೆಗೆಯಲು ನಾನಾ ಕಾರಣಗಳನ್ನು ಹೇಳುತ್ತಿದೆ. ನಮ್ಮ ರಾಜ್ಯದ ಕೋಲಾರ ಜಿಲ್ಲೆಯಲ್ಲಿ ಇರುವಂತಹ ಕೆರೆಯೊಂದರಲ್ಲಿ ಹೂಳು ಎತ್ತುವಂತಹ ಕೆಲಸವನ್ನು 1992-93ರಲ್ಲಿ ಮಾಡಲಾಯಿತು. ಆ ಕೆರೆಗೆ ಮೊನ್ನೆ ಅಲ್ಲಿನ ಜನರು ನನ್ನನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ಕೋಡಿ ಕಟ್ಟಿರಲಿಲ್ಲ. ಮಣ್ಣು ಏನು ಅಲ್ಲಿ ಹಾಕಿದ್ದರೋ ಅದಕ್ಕೆ ಹುಲ್ಲಿನ ಟರ್ಫ್ ಹಾಕಿರಲಿಲ್ಲ. ಇದು ಆ ಇಲಾಖೆಯು ಮಾಡುವಂತಹ ಕೆಲಸದ ವೈಖರಿಯಾಗಿದೆ. ಮಾಡುವಂತಹ ಕೆಲಸವನ್ನು ಸಮರ್ಪಕವಾಗಿ ಮಾಡುವಂತಹ ದೊಡ್ಡತನ ಇಲಾಖೆಗೆ ಬರಬೇಕು. ಇಲಾಖೆ ಆ ಕೆರೆಗೆ ಹಾಕಿದ್ದ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗಿದೆ. ಇದರ ಬಗ್ಗೆ ನಾವು ಯಾರಿಗೆ ಹೇಳುವುದು? ಆ ಕೆರೆಯನ್ನು ರೈತರು ನನಗೆ ಕರೆದುಕೊಂಡು ಹೋಗಿ ತೋರಿಸಿದಾಗ ನನಗೆ ಒಮ್ಮೆ ಅಯ್ಯೋ ಎನಿಸಿತು. ಇಷ್ಟೊಂದು ಹಣವನ್ನು ಖರ್ಚುಮಾಡಿ ಆ ಕೆರೆಯನ್ನು ಕಟ್ಟಿ ಇವತ್ತು ಇಂತಹ ಪರಿಸ್ಥಿತಿಗೆ ಆ ಕೆರೆಯನ್ನು ಇಲಾಖೆಯವರು ತಂದಿದ್ದಾರಲ್ಲಾ ಎನ್ನುವಂತಹ ನೋವು ನನಗೆ ಉಂಟಾಯಿತು. ಇಲಾಖೆ ಈ ರೀತಿಯ ಲೋಪದೋಷಗಳನ್ನು ಸರಿಪಡಿಸುವ ಕಡೆಗೆ ಗಮನ ಹರಿಸಬೇಕು. ಈಗ ಎನ್‌ಡಿಡಿಬಿ ಯಿಂದ ನಮ್ಮ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಣ ಕೊಡಲಾಗುತ್ತಿದೆ. ಮೊನ್ನೆ ನಮ್ಮ ಸಹಕಾರ ಮಂತ್ರಿಗಳು ಸದನದಲ್ಲಿ ಮಾತನಾಡುತ್ತಾ ಎನ್‌ಡಿಡಿಬಿ -ಯವರು ನಮಗೆ ಪುಗಸಟ್ಟೆ ಹಣ ಕೊಡುವುದಿಲ್ಲ, ಅದಕ್ಕೆ ನಾವು ಶೇಕಡ 13ರಷ್ಟು ಬಡ್ಡಿ ಕೊಡುತ್ತಿದ್ದೇವೆ ಎಂದರು. ಆ ಮಾತು ನಿಜ. ಆದರೆ ಚುನಾಯಿತ ಮಂಡಳಿ ಇಲ್ಲದಿದ್ದರೆ ಇವತ್ತಿಗೂ ಕೂಡ ಎನ್‌ಡಿಡಿಬಿ-

ಯವರು ಯಾವ ರಾಜ್ಯಕ್ಕೂ ಸಾಲ ಕೊಡುವುದೇ ಇಲ್ಲ. ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ 15-20 ವರ್ಷಗಳ ಕಾಲ ಸಹಕಾರ ಸಂಘಗಳಿಗೆ ಚುನಾವಣೆಯನ್ನು ನಡೆಸದೇ ಇದ್ದಾಗ ಎನ್‌ಡಿಡಿಬಿ-ಯವರು ಅವರಿಗೆ ಸಾಲ ಕೊಡುವುದನ್ನು ನಿಲ್ಲಿಸಿದ್ದರು. ಸುಮಾರು ವರ್ಷಗಳಾದ ಮೇಲೆ ಆ ರಾಜ್ಯಗಳಲ್ಲಿ ಸಹಕಾರ ಸಂಘಗಳಿಗೆ ಚುನಾವಣೆಗಳು ನಡೆದವು. ಈಗ ನೀವು ತಂದಿರುವುದೇನೂ ಹೊಸದಲ್ಲ. ಹಿಂದೆ ನಮ್ಮ ಮಾನ್ಯ ಎಸ್.ಎಸ್. ಪಾಟೀಲರು ತಂದಂತಹ ಕಾಯ್ದೆಯಲ್ಲಿ ಈ ಅಂಶ ಸಹಾ ಇತ್ತು. ಈಗಿನ ಹೊಸ ಮಂತ್ರಿಗಳು ಅದನ್ನು ಬೇರೊಂದು ರೂಪದಲ್ಲಿ ತಂದಿದ್ದಾರೆ, ಇದು ಯಾವ ಕಾಯ್ದೆಯೊಳಗೆ ಬರುತ್ತದೆ ಎಂಬುದನ್ನು ನೋಡಿಕೊಂಡು ಇದಕ್ಕೊಂದಿಷ್ಟು ತನ್ನದೇ ಆದಂತಹ ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳುವುದು ಒಳ್ಳೆಯದು. ಏಕೆಂದರೆ ಇದು ನೀವು ಚಿಂತನೆ ಮಾಡಿದಂತೆ ಕೂಸಾಗಿದೆ. ನೀವು ಅದಕ್ಕೆ ಹೆಚ್ಚು ಗಮನ ಕೊಡಲೇಬೇಕು. ನೀವು ಅದಕ್ಕೆ ಯಾವುದೇ ಪರಿಸ್ಥಿತಿಯಲ್ಲೂ ರೋಗ ಅಂಟದ ಹಾಗೆ ಮತ್ತು ಯಾರೂ ಕೂಡ ಅದನ್ನು ತಡುವದ ಹಾಗೆ ನೋಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕು. ಈಗಾಗಲೇ ಮಾನ್ಯ ಸಚಿವರು ಎನ್‌ಸಿಡಿಸಿ-ಗೆ ಭೇಟಿ ನೀಡಿ ಷೇರು ಹಣವನ್ನು ಯಾವರೀತಿ ಸಂಗ್ರಹಿಸಬೇಕು ಎನ್ನುವುದನ್ನೂ ಕೂಡ ಮಾಡಿದ್ದೀರಿ. ನಮ್ಮ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ನಾನು 200 ಲೀಟರ್ ಹಾಲು ಹಾಕಿದರೂ ಕೂಡ ನನಗೆ ಎರಡೇ ಷೇರು ಸಿಗುತ್ತದೆ. ಆದರೆ ಇಲ್ಲಿ ಹಾಗಿರುವುದಿಲ್ಲ. ಕೆಲವರಿಗೆ 2 ಎಕರೆ ಇರಬಹುದು ಅಥವಾ ಕೆಲವರಿಗೆ 20 ಎಕರೆ ಜಮೀನು ಇರಬಹುದು. ಇವತ್ತು 20 ಎಕರೆ ಇರುವವನಿಗೆ 20 ಷೇರು ಸಿಗುತ್ತದೆ. ನಿಮ್ಮ ಕಾಯ್ದೆಯೊಳಗೆ ಷೇರುಗಳ ಸಂಖ್ಯೆಗೆ ಮಿತಿಯನ್ನು ವಿಧಿಸಿಲ್ಲ. 20 ಎಕರೆಯವನಿಗೆ 20 ಷೇರು ಕೊಟ್ಟು ....

ಶ್ರೀ ಹೆಚ್.ಕೆ. ಪಾಟೀಲ್ : ಎಷ್ಟು ಷೇರು ಒಬ್ಬ ಸದಸ್ಯ ಹೋಲ್ಡ್ ಮಾಡುತ್ತಾನೆ ಎನ್ನುವುದರ ಮೇಲೆ ಅವನಿಗೆ ಅಧಿಕಾರ ಪ್ರಾಪ್ತವಾಗುವುದಿಲ್ಲ. ಅವನು ಎಷ್ಟೇ ಷೇರು ಹೊಂದಿರಲಿ ಪ್ರತಿ ಒಂದು ಷೇರಿಗೆ ಅವನಿಗೆ ರೈಟ್ ಆಫ್ ವೋಟ್ ಬರುತ್ತದೆ. ಇವು ಕಂಪನಿಗಳಲ್ಲ ಎಂಬುದು ತಮಗೆ ಗೊತ್ತಿದೆ. 20 ಷೇರು ಇದ್ದರೂ ಒಂದೇ ಓಟು, 200 ಇದ್ದರೂ ಒಂದೇ ಓಟು ಇರುತ್ತದೆ. ಆದುದರಿಂದ ಕ್ವಾಂಟಮ್ ಆಫ್ ಷೇರ್ ಆಧರಿಸಿ ಯಾವುದೇ ಸದಸ್ಯನ ಅಧಿಕಾರ ಹೆಚ್ಚು ಕಡಿಮೆಯಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ನಾನು ಹೇಳಿದ ಉದ್ದೇಶ ಏನೆಂದರೆ, ಈಗ 20 ಎಕರೆ ಇರುವವನು 10 ಜನರ ಹೆಸರಿನಲ್ಲಿ ಎರಡೆರಡು ಎಕರೆ ಮಾಡುತ್ತಾನೆ. 10 ಜನರೂ ಷೇರು ನೋಂದಾಯಿಸಿಕೊಳ್ಳುತ್ತಾರೆ. ಆಗ ಈ 2 ಎಕರೆ ಇರುವವನು ಒಬ್ಬನೇ ನೋಂದಾಯಿಸುತ್ತಾನೆ. ಒಂದು ಮನೆಗೆ 10 ಷೇರು ಇರುತ್ತದೆ. ಇನ್ನೊಂದು ಮನೆಗೆ ಒಂದೇ ಷೇರು ಇರುತ್ತದೆ. ಆದ್ದರಿಂದ ಈ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಎರಡಕ್ಕಿಂತ ಮೇಲೆ ಹೆಚ್ಚು ಷೇರು ಇರಬಾರದು ಎಂದು ಹೇಗೆ ಷರತ್ತು ವಿಧಿಸಲಾಗಿರುತ್ತದೋ ಅದನ್ನೂ ಇಲ್ಲೂ ವಿಧಿಸಬೇಕು. ಒಂದು ಕುಟುಂಬಕ್ಕೆ ಎರಡು ಷೇರುಗಳಿಗೆ ಮೇಲ್ಪಟ್ಟು ಇರಬಾರದು ಎನ್ನುವ ನಿರ್ಬಂಧವನ್ನೂ ಕೂಡ ನಾವು ವಿಧಿಸಬೇಕು ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮಲ್ಟಿ-ಸ್ಟೇಟ್ ಕೋ-ಆಪರೇಟಿವ್ ಆಕ್ಟ್‌ನಲ್ಲಿ ಯಾವುದೇ ಸಹಕಾರ ಸಂಘಗಳಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಅನ್ನು ಅಲ್ಲಿನ ಆಡಳಿತ ಮಂಡಳಿ ಅಥವಾ ಸರ್ಕಾರ ಎರಡು ಹಂತದಲ್ಲಿ ಸೆಲೆಕ್ಟ್ ಮಾಡುತ್ತದೆ. ಅದನ್ನು ಇಲ್ಲಿ ಅಳವಡಿಸುವುದು ಬಹಳ ಒಳ್ಳೆಯದು. ಇವತ್ತು ಸಹಕಾರ ಸಂಘಗಳಲ್ಲಿ ಅಧಿಕಾರಿಗಳಿಗೆ

ಬಡ್ತಿ ನೀಡುವ ಸಲುವಾಗಿ ಹುದ್ದೆಗಳನ್ನು ಹೆಚ್ಚು ಮಾಡಲಾಗುತ್ತಿದೆ. ಇದನ್ನು ಎಲ್ಲಾ ಸರ್ಕಾರಗಳೂ ಕೂಡ ಮಾಡಿಕೊಂಡು ಬಂದಿವೆ. ಮಾನ್ಯ ಎಸ್.ಎಸ್. ಪಾಟೀಲರು ಇದ್ದಾಗಲೂ ಅವರೂ ಇದನ್ನೇ ಮಾಡಿಕೊಂಡು ಬಂದಿದ್ದರು. ಇಲಾಖೆಯ ಅಧಿಕಾರಿಗಳಿಗೆ ಬಡ್ತಿ ನೀಡುವ ಸಲುವಾಗಿ ಇವತ್ತಿನ ದಿವಸ ಅಲ್ಲಿನ ಕೇಡರ್ ಸ್ಟ್ರೆಂತ್ ಜಾಸ್ತಿ ಮಾಡುವ ಕೆಲಸವಾಗುತ್ತಿದೆ. ಈ ರೀತಿ ಅಧಿಕಾರಿಗಳನ್ನು ಅಲ್ಲಿಗೆ ಬಡ್ತಿ ಸಲುವಾಗಿ ಪೋಸ್ಟಿಂಗ್ ಮಾಡುವುದು ನಿಲ್ಲಬೇಕು. ಆಡಳಿತ ಮಂಡಳಿ ಅಥವಾ ಸರ್ಕಾರ ಸಹಕಾರ ಸಂಘದ ಮ್ಯಾನೇಜಿಂಗ್ ಡೈರೆಕ್ಟರ್ ಅಥವಾ ಸೆಕ್ರೆಟರಿಯನ್ನು ನೇಮಕ ಮಾಡುವಂತಹ ಒಂದು ಪ್ರಾವಿಷನ್ ಈಗ ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಆಕ್ಟ್‌ನಲ್ಲಿ ಇದೆ. ಅದನ್ನು ದಯವಿಟ್ಟು ಇಲ್ಲೂ ಅಳವಡಿಸಿಕೊಂಡರೆ ನಿಜವಾಗಿಯೂ ಕೂಡ ಆ ಸಹಕಾರ ಸಂಘ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಡೆಯುತ್ತದೆ ಎನ್ನುವಂತಹ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಇಲ್ಲಿ ಹೇಳಬಯಸುತ್ತೇನೆ. ನೀವು ಇವತ್ತು ಏನು ಈ ವಿಧೇಯಕವನ್ನು ತಂದಿದ್ದೀರಿ, ಇದು ನಿಜವಾಗಿಯೂ ಕೂಡ ಬಹಳ ಒಳ್ಳೆಯದು. ಆದರೆ ಅದಕ್ಕೆ ಎಲ್ಲಾ ವಿಧವಾದಂತಹ ಪ್ರಚಾರ ಸಿಗಬೇಕು. ಪ್ರತಿಯೊಬ್ಬ ರೈತನಿಗೂ ಕೂಡ ಇದು ಗೊತ್ತಾಗಬೇಕು. ನಾವು ಷೇರುಗಳನ್ನು ಪಡೆದುಕೊಂಡರೆ ನಮಗೆ ಈ ಸಹಕಾರ ಸಂಘದ ಸದಸ್ಯತ್ವ ಸಿಗುತ್ತದೆ ಎಂಬುದು ಅವನಿಗೆ ಗೊತ್ತಾಗಬೇಕು. ಈಗಾಗಲೇ ನನ್ನ ಕ್ಷೇತ್ರದಲ್ಲಿ 5 ಊರುಗಳಲ್ಲಿ ಸಹಕಾರ ಸಂಘಗಳು ನೋಂದಾವಣೆಯಾಗಿವೆ. ಯಾರೋ ಅಲ್ಲಿಗೆ ಬಂದವರನ್ನು ಕೇಳಿದರೆ ನಮಗೆ ಯಾರಿಗೂ ಇದರ ಬಗ್ಗೆ ಗೊತ್ತೇ ಇಲ್ಲ, ಕೋಲಾರದಲ್ಲಿ ಕುಳಿತುಕೊಂಡು ಬರೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಈ ತರಹದ ಕೆಲಸಗಳು ಆಗಬಾರದು. ಈ ತರಹ ಆದರೆ ಅದಕ್ಕೆ ನಿಮ್ಮ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಂದ ಸ್ಟೇ ಕೊಡಿಸಿ ಮತ್ತೆ ಇನ್ನೊಂದು ಸಾರಿ ಅದೆಲ್ಲವನ್ನೂ ಸೇರಿಸಿ ನೋಂದಾಯಿಸಿಕೊಳ್ಳುವಂತಹ ಕೆಲಸವನ್ನು ಮಾಡಬೇಕೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

4.40 ಪಿ.ಎಂ.

ಇದರಲ್ಲಿ ಏನು ಹೇಳಿದ್ದಾರೆಂದರೆ;

"Provided that where an irrigation work is entrusted to a water users society, the Irrigation Officer, instead of consulting the Committee so appointed by the State Government, shall....." ಎಂದು ಹೇಳಿದ್ದಾರೆ, ಆ ನಂತರ 62C. Functions of Water users project level Federation : The Water Users Project Level Federation shall perform the following functions, namely -

(1) to prepare an operational plan based on its entitlement area, soil and cropping pattern at the beginning of each irrigation season; ಎಂದು ಹೇಳಿದ್ದಾರೆ.

ವ್ಯವಸಾಯ ಇಲಾಖೆ, ಸಣ್ಣ ನೀರಾವರಿ ಇಲಾಖೆ ಮತ್ತು ಹಾರ್ಟಿಕಲ್ಚರ್ ಇಲಾಖೆಗಳಲ್ಲಿ ಕ್ರಾಪ್ ಪ್ಯಾಟ್ರನನ್ನು ಅಳವಡಿಸಿಕೊಂಡರೆ ಬಹಳ ಅನುಕೂಲವಾಗುತ್ತದೆ. ಶ್ರೀಮಾನ್ ಹೆಚ್.ಕೆ. ಪಾಟೀಲರು ದೊಡ್ಡ ಸಹಕಾರಿಗಳು. ನೀವು ಮಂತ್ರಿಗಳನ್ನು ಅಪೆಕ್ಸ್ ಬಾಡಿ ಅಧ್ಯಕ್ಷರನ್ನಾಗಿ ಮಾಡುವುದನ್ನು ಬಿಡಬೇಕು.

ಇದು ನಿಮ್ಮ ಕಾಲದಲ್ಲಿ ಆದರೆ ಮುಂದೆ ಬರುವವರಿಗೆ ಹಾಲಿ ಸಹಕಾರಿ ಮಂತ್ರಿಗಳು ತಂದಿರುವುದು ತಪ್ಪಲ್ಲವೆಂದು ಜನರಲ್ಲಿ ಭಾವನೆ ಬರುತ್ತದೆ. ಅದನ್ನು ಈಗಲೇ ಬದಲಾಯಿಸಿ ಎಲೆಕ್ಟೆಡ್ ಬೋರ್ಡಿಗೆ ಒಬ್ಬ ಅಧ್ಯಕ್ಷರನ್ನಾಗಿ ಮಾಡುವ ಕೆಲಸ ಮಾಡಬೇಕೆಂದು ಹೇಳಿ, ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಸನ್ಮಾನ್ಯ ಉಪಾಧ್ಯಕ್ಷರೆ, ನೀರು ಬಳಕೆದಾರರ ಸಂಘಕ್ಕೆ ಕಾನೂನು ತರುತ್ತಿದ್ದಾರೆ. ಇದನ್ನು ಓದುತ್ತಿದ್ದರೆ ಬಹಳ ಸಂತೋಷವಾಗುತ್ತಿದೆ, ಇದರ ಬಗ್ಗೆ ಚಿಂತನೆ ಮಾಡಿ ಮುಂದೆ ಏನಾಗಬಹುದು ಎಂದು ನೋಡಿದರೆ ಭಯವಾಗುತ್ತದೆ, ನೀರು ಬಿಡುವವರು ಯಾರು? ಹಳ್ಳಿಯಲ್ಲಿ ಒಂದು ಗಾದೆ ಮಾತು ಇದೆ. "ಹರಿಯುವ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯೇ?" ಎಂದರೆ, ಹರಿಯುವ ನೀರನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೆ ಏನು ಕೇಳಬೇಕೆಂಬ ಭಾವನೆ ಇದೆ. ಆ ನಂತರ ನೀರಾವರಿ ಇಲಾಖೆಯವರು ಬಂದು ಹರಿಯುವ ನೀರನ್ನು ಯಾವ ರೀತಿ ಹಂಚಬೇಕೆಂದು ತಿಳಿಸಿದರು. ಈಗ ಸಹಕಾರ ಇಲಾಖೆಯವರು ಬರುತ್ತಾರೆ, ಇದನ್ನು ಓದುತ್ತಿದ್ದರೆ ಬಹಳ ಖುಷಿಯಾಗುತ್ತಿದೆ, ಆದರೆ ಇಂಪ್ಲಿಮೆಂಟ್ ಮಾಡುವಾಗ ಬಹಳಷ್ಟು ಗೊಂದಲ ಇದೆ. ಕಳೆದ ಒಂದು ವರ್ಷದಿಂದ ಅಧೀನ ಶಾಸನ ರಚನಾ ಸಮಿತಿಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಆ್ಯಕ್ಟ್ ಆಗುತ್ತದೆ, ರೂಲ್ಸ್ ಫ್ರೇಮ್ ಮಾಡಬೇಕಾದರೆ ಗೊಂದಲ ಬರುತ್ತದೆ. ಕಾನೂನು ಏನಾದರೂ ಸಕ್ಸಸ್ ಆದರೆ ಹಳ್ಳಿ ಕಡೆ "ಪಾಟೀಲರ ಕಾನೂನು" ಎಂದು ನಿಮಗೆ ಹೊಗಳುತ್ತಾರೆ. ಈ ಕಾನೂನಿನಲ್ಲಿ ಏನಾದರೂ ತೊಂದರೆಯಾದರೆ ನಿಮಗೆ ಬಹಳಷ್ಟು ಕೆಟ್ಟ ಹೆಸರು ಬರುತ್ತದೆ. ರೂಲ್ಸ್ ಫ್ರೇಮ್ ಮಾಡುವಾಗ ಬೈಲಾ, ಸರ್ಕಾರದ ಅಧಿನಿಯಮಗಳನ್ನು ಬಹಳಷ್ಟು ಗಮನದಲ್ಲಿಟ್ಟುಕೊಂಡು, ಈ ಕೆಲಸ ನಿರ್ವಹಣೆ ಮಾಡಬೇಕಾಗುತ್ತದೆ. ಎರಡು-ಮೂರು ಉದಾಹರಣೆ ಹೇಳುತ್ತೇನೆ, ರೂಲ್ಸ್ ಫ್ರೇಮ್ ಮಾಡಬೇಕಾದರೆ ನಮಗೆ ಎಲ್ಲಿ ತೊಂದರೆಯಾಗುತ್ತದೆ ಎಂದರೆ, "to levy and collect water charges and service charges from the land holders". ಅಯ್ಯನಕೆರೆ ಹಾಗೂ ಮಗದದ ಕೆರೆ ಎಂದು ಎರಡು ಕೆರೆಗಳಿವೆ, ಎಷ್ಟು ಟ್ಯಾಕ್ಸ್ ಹಾಕುತ್ತೀರಿ ಎಂದು ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಒಂದು ಕೆರೆ ವ್ಯಾಪ್ತಿಯಲ್ಲಿ ಒಂದು ಎಕರೆಗೆ 50 ರೂಪಾಯಿ, ಅಥವಾ 100 ರೂಪಾಯಿಗಳ ಟ್ಯಾಕ್ಸ್ ಹಾಕಿ, ಇನ್ನೊಂದು ಕೆರೆ ವ್ಯಾಪ್ತಿಯಲ್ಲಿ 30 ರಿಂದ 31 ರೂಪಾಯಿಗಳವರೆಗೆ ಟ್ಯಾಕ್ಸ್ ಹಾಕಿದರೆ ಅಲ್ಲೇ ಗೊಂದಲ ಆಗುತ್ತದೆ. ಹೆಚ್ಚಿಗೆ ಮಾಡುವ ವಿಚಾರದಲ್ಲಿ ಯಾರ್ಯಾರು ಸೇರಿ ಮಾಡಬೇಕು, ಸೊಸೈಟಿಗಳ ರೂಪದಲ್ಲಿ ಒಂದೊಂದು ಸೊಸೈಟಿಯವರು ಒಂದೊಂದು ತರಹ ಮಾಡುತ್ತಾ ಹೋದರೆ ರಾಜ್ಯದಲ್ಲಿ ಗೊಂದಲವಾಗುತ್ತದೆ. ಟ್ಯಾಕ್ಸ್ ನಿಗದಿ ಮಾಡತಕ್ಕಂತಹ ಸಂದರ್ಭದಲ್ಲಿ ಯಾರ್ಯಾರು ಸೇರಿ ಟ್ಯಾಕ್ಸ್ ನಿಗಧಿ ಮಾಡಬೇಕು? ಯಾವ ಅಧಿಕಾರಿಗಳು ಸೇರಿ ಮಾಡಬೇಕು? ಮತ್ತು ರಾಜ್ಯಾದ್ಯಂತ ಕೆಲವು ಹೆಕ್ಟೇರ್‌ಗಳ ಮೇಲೆ ಒಂದೇ ಒಂದು ಟ್ಯಾಕ್ಸ್ ಲೆವಿ ಮಾಡಬೇಕೆಂದು ಹೇಳುತ್ತೇನೆ. ಈ ಆ್ಯಕ್ಟನ್ನು ಬಹಳಷ್ಟು ಎಲಾಬರೇಟ್ ಆಗಿ ತರಬೇಕಾಗಿತ್ತು, ತಾವು ಹರಿಬರಿಯಲ್ಲಿ ತಂದಿದ್ದೀರಿ ಎಂದು ನನಗನ್ನಿಸುತ್ತದೆ. ಎಷ್ಟು ಟ್ಯಾಕ್ಸ್ ಹಾಕಬೇಕು, ಯಾವ ಟ್ಯಾಕ್ಸ್ ಹಾಕಬೇಕು? ಯಾವ ರೀತಿ ಕಲೆಕ್ಟ್ ಮಾಡಬೇಕು? ಇದರ ಬಗ್ಗೆ ನಿಖರವಾದ ವಿಷಯವನ್ನು ಕನಿಷ್ಟ ರೂಲ್ಸ್‌ನಲ್ಲಿ ತರದೇ ಹೋದರೆ ಗೊಂದಲವಾಗುತ್ತದೆ, ಇದು ಒಂದು. ಎರಡನೆಯದಾಗಿ ಎಲ್ಲಿಂದ

ದುಡ್ಡು ವಸೂಲಿ ಮಾಡಬೇಕೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನಾನೇ ನನ್ನ ಸೊಸೈಟಿಯಲ್ಲಿ ಹಣ ಮೊಬಿಲೈಸ್ ಮಾಡುತ್ತಾ ಹೋದರೆ ಗೊಂದಲವಾಗುತ್ತದೆ. ಯಾವ ರೀತಿಯಲ್ಲಿ ಹಣ ಮೊಬಲೈಸ್ ಮಾಡಬೇಕೆಂದು ಸಹ ರೂಲ್ಸ್‌ನಲ್ಲಿ ಕರೆಕ್ಟಾಗಿ ಹೇಳಬೇಕು. ಕ್ರಾಪ್ ಪ್ಯಾಟ್ರನ್ ಬಗ್ಗೆ ಬಹಳಷ್ಟು ವಿಷಯ ಚರ್ಚೆಯಾಯಿತು. ಇಸ್ರೇಲ್‌ನಿಂದ ಹಿಡಿದು ಕರ್ನಾಟಕದವರೆಗೆ ಚರ್ಚೆಯಾಯಿತು. ಇದನ್ನು ಯಾರು ಮಾಡಬೇಕು, ಇದನ್ನು ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ನಾನೂ ಒಬ್ಬ ಸೊಸೈಟಿ ಅಧ್ಯಕ್ಷ, ನಾನು ರಿಮೋಟ್ ವಿಲೇಜ್‌ನಲ್ಲಿ ರಾಗಿ ಬೆಳೆಯಬೇಕೆಂದು ಆದೇಶ ಕೊಡುತ್ತೇನೆ. ನೀವು ಅಪ್ಪರ್ ಏರಿಯಾದಲ್ಲಿ ಭತ್ತ ಬೆಳೆಯಬೇಕೆಂದು ಹೇಳುತ್ತೀರಿ. ಇದನ್ನು ಕೆಲವು ಸದಸ್ಯರು ಒಪ್ಪುವುದಿಲ್ಲ. ಆಗ ಕಾನೂನು ಕ್ರಮ ಏನೆಂದು ಸ್ಪಷ್ಟಪಡಿಸಬೇಕಾಗುತ್ತದೆ. ಜೊತೆಯಲ್ಲಿ ಕ್ರಾಪ್ ಪ್ಯಾಟ್ರನ್ ಹೇಳುವ ಸಂದರ್ಭದಲ್ಲಿ ಯಾವ ಯಾವ ಅಧಿಕಾರಿಗಳು ಸೇರಿ ಕ್ರಾಪ್ ಪ್ಯಾಟ್ರನ್ ಮಾಡಬೇಕೆಂದು ರೂಲ್ಸ್‌ನಲ್ಲಿ ಸ್ಪಷ್ಟ ಮಾಡಬೇಕಾಗುತ್ತದೆ.

Objects and reasons ನಲ್ಲಿ ಈ ರೀತಿಯಾಗಿ ಹೇಳಿದ್ದೀರಿ.

"vi) to empower water users society to levy water charges when water is temporarily made available as well as when water is used unauthorisedly".

ಮಗದದ ಕೆರೆಯಲ್ಲಿ ಸುಮಾರು 7,000 ಎಕರೆ ಅನ್-ಆಥರೈಸ್ಡ್ ಆಗಿ ಇವತ್ತು ತೆಗೆದುಕೊಳ್ಳುತ್ತಿದ್ದಾರೆ. ಅವರು 25 ವರ್ಷಗಳಿಂದ ಇದ್ದಾರೆ. ಆಥರೈಸ್ಡ್, ಅನ್-ಆಥರೈಸ್ಡ್ ಎಂದು ತೀರ್ಮಾನ ಮಾಡುವವರು ಯಾರು ? ಸೊಸೈಟಿಯವರು ಅಥವಾ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಮಾಡಬೇಕು. ಇದರ ಬಗ್ಗೆ ಸ್ಪಷ್ಟವಾಗಿ ರೂಲ್ಸ್ ಮಾಡಬೇಕು. ಉಳಿದ ವಿಷಯದಲ್ಲಿ ಒಂದು ಬೈಲ ಹೊರಟಿದೆ. ನಮ್ಮಲ್ಲಿ ಈಗಾಗಲೇ ಎಲೆಕ್ಷನ್ ನಡೆಯುತ್ತಿದೆ. ಅಯ್ಯನ ಕೆರೆಯಿಂದ ಒಂದು ಸೊಸೈಟಿಯಾಗಿದೆ. ಅಲ್ಲಿ ಕಾಲುವೆಯ ಮೇಲು ಹಂತದ ಕಾಲುವೆಯಿಂದ ಒಬ್ಬ ಸದಸ್ಯ, ಆಯ್ಕೆಯಾಗಬೇಕು, ಎರಡನೇ ಹಂತದ ಕಾಲುವೆಯಲ್ಲಿ ಇಬ್ಬರು, ಮೂರನೇ ಹಂತದ ಕಾಲುವೆಯಲ್ಲಿ ನಾಲ್ಕು ಜನ ಆಯ್ಕೆಯಾಗಬೇಕು, ಒಂದೇ ಕಡೆ ಕಾಲುವೆ ಇದ್ದರೆ ಲಾಕ್ ಬರುತ್ತದೆ, ಆದರೆ ನಮ್ಮಲ್ಲಿರತಕ್ಕಂತಹ ಒಂದೇ ಕೆರೆಯಲ್ಲಿ ಒಂದೇ ಸಾರಿ ಐದು ಕಾಲುವೆಗಳು ಹುಟ್ಟುತ್ತವೆ. ಹಂತಹಂತವಾಗಿ ಚುನಾವಣೆ ಮಾಡುವುದಕ್ಕೆ ಗೊಂದಲವಾಗಿದೆ. ಡಿ.ಆರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಸ್ಪಷ್ಟವಾದ ಆದೇಶ ಕೊಡದೇ ಇದ್ದುದರಿಂದ ಅಲ್ಲಿ ಗೊಂದಲವಾಗಿದೆ. ಸದಸ್ಯರನ್ನು ಎಲೆಕ್ಟ್ ಮಾಡಬೇಕಾದರೆ ಯಾರು ಹೇಗೆ ಎಲೆಕ್ಟ್ ಮಾಡಬೇಕು ಎನ್ನುವುದನ್ನು ಸರ್ಕಾರದಿಂದ ಆದೇಶ ಹೊರಡಿಸಬೇಕಾಗುತ್ತದೆ. ಇಲ್ಲದಿದ್ದರೆ ಗೊಂದಲ ತಪ್ಪುವುದಿಲ್ಲ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಏಕೆ ಮಾಡುತ್ತೀರಿ ? ಈಗ ವಾಟರ್ ಯೂಜರ್ಸ್ ಅಪೆಕ್ಸ್ ಲೆವಲ್ ಸೊಸೈಟಿ ಅಂತ ಮಾಡಿದ್ದೀರಲ್ಲ ಇಲ್ಲಿಗೆ ಸಚಿವರು ಅಧ್ಯಕ್ಷರಾಗಬೇಕು, ನಮ್ಮಲ್ಲಿರತಕ್ಕಂತಹ ಸೊಸೈಟಿಗಳಿಗೆ ಶಾಸಕರು ಏಕೆ ಅಧ್ಯಕ್ಷರಾಗಬಾರದು? ಸ್ಟೇಟ್ ಲೆವಲ್‌ನಲ್ಲಿ ಆದರೆ ಒಂದು ತೀರ್ಮಾನ. ಸ್ಟೇಟ್ ಲೆವಲ್‌ನಲ್ಲಿ ವಾಟರ್ ಯೂಜರ್ಸ್ ಅಪೆಕ್ಸ್ ಲೆವಲ್ ಫೆಡರೇಷನ್ ಅಂತ ಮಾಡಿದ್ದಾರೆ. ಇದರ ಅಧ್ಯಕ್ಷರು ಮೇಜರ್ ಇರಿಗೇಷನ್ ಮಿನಿಸ್ಟರ್, ಕೋ-ಅಧ್ಯಕ್ಷರು ಮೈನರ್ ಇರಿಗೇಷನ್ ಮಿನಿಸ್ಟರ್. ಇಲ್ಲಿ ಯೋಚನೆ ಮಾಡಿರುವುದು ನಾನು ಒಪ್ಪುತ್ತೇವೆ ಅಥವಾ ಬಿಡುತ್ತೇವೆ ಎಂದರೆ ಅದು ನಿಮಗೆ

ಸೇರಿದ್ದು. ಅದೇ ರೀತಿ ನಮ್ಮ ವಾಟರ್ ಸೊಸೈಟಿಯಲ್ಲಿ ಏಕೆ ಮಾಡಲಿಲ್ಲ? ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ಏಕೆ ಕೋ-ಅಧ್ಯಕ್ಷರನ್ನಾಗಿ ಮಾಡಲಿಲ್ಲ? ಅಲ್ಲೊಂದು, ಇಲ್ಲೊಂದು ಎಂದು ನೀವು ಏಕೆ ತಾರತಮ್ಯ ಮಾಡಿದ್ದೀರಿ? ದಯಮಾಡಿ ಇಲ್ಲಿಯೂ ತೆಗೆಯಿರಿ, ಇಲ್ಲ, ಅಲ್ಲಿಯೂ ಇನ್‌ಕ್ಲೂಡ್ ಮಾಡಿಕೊಳ್ಳಿ. ಎರಡರಲ್ಲಿ ಒಂದು ತೀರ್ಮಾನವನ್ನು ಸರ್ಕಾರ ಮಾಡಬೇಕು. ಈ ಕ್ಲ್ಯಾರಿಫಿಕೇಶನ್ ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮೊನ್ನೆ ನಮ್ಮ ರಾಜ್ಯದಲ್ಲಿ ಕೆಲವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಮಧ್ಯ ಕರ್ನಾಟಕದ 10 ಜಿಲ್ಲೆಗಳಾದ ತುಮಕೂರು, ಹಾಸನ, ಚಿಕ್ಕಮಗಳೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಬಳ್ಳಾರಿ, ದಾವಣಗೆರೆ ಮತ್ತು ಚಿತ್ರದುರ್ಗ ಇಲ್ಲಿಯ ಲೋಕಸಭಾ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ಸಹಿ ಹಾಕಿ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ನಮಗೆ ಕೆರೆಗಳಿಗೆ ನೀರು ಬಿಡುವ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಬಹಳ ಬೇಗ ಸರ್ವೇ ಮಾಡಿ ಯಾವ ಯಾವ ನದಿಯಿಂದ ನೀರು ಕೊಡುತ್ತೀರಿ? ನಮಗೆ ಪೂರ್ತಿ ನದಿ ನೀರು ಕೊಡದೆ ಇದ್ದರೂ ಕೆರೆಗಳಿಗೆ ತುಂಬಿಸುವ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

+ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ನೀರಾವರಿ ಸಚಿವರು ತಂದಂತಹ ಕಾನೂನು ತಿದ್ದುಪಡಿ ವಿಧೇಯಕಕ್ಕೆ ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ನನ್ನದೇ ಆದ ಸಂಶಯಗಳನ್ನು ಈ ದಿಸೆಯಲ್ಲಿ ವ್ಯಕ್ತ ಮಾಡುತ್ತಿದ್ದೇನೆ. ಇಂದು ತಂದಿರುವಂಥ ಮಸೂದೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗಳಿಗೆ ಸಂಬಂಧಪಟ್ಟಂತೆ ಇದರ ಜೊತೆಗೆ ಕೆರೆಕಟ್ಟೆಗಳ ಹಾಗೂ ಏತ ನೀರಾವರಿ ಯೋಜನೆಗಳಿಗೂ ಸಂಬಂಧ ಪಟ್ಟಿದ್ದಾಗಿದೆ. ಇದರಲ್ಲಿ ತಿಳಿಸಿರುವಂತೆ 500 ರಿಂದ 700 ಎಕರೆಗಳಿಗೆ ಒಂದು ಸಹಕಾರ ಸಂಘವನ್ನು ಮಾಡಬೇಕು. ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳ ಪ್ರತಿಯೊಂದು ಪ್ರದೇಶದ ಅಚ್ಚುಕಟ್ಟು ಪ್ರದೇಶವನ್ನು ಈಗಾಗಲೇ ಗುರುತಿಸಿರುವಂತೆ ಕೆರೆಕಟ್ಟೆಗಳ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶವನ್ನು ಗುರುತಿಸಿದ್ದಾರೆಯೇ ಎಂಬುದನ್ನು ನಾನು ಕೇಳಬಯಸುತ್ತೇನೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ? ನನ್ನ ಅಂದಾಜಿನಂತೆ ಸುಮಾರು 30 ಕೆರೆ ಕಟ್ಟೆಗಳಿವೆ, ನಾನು ಹೇಳುವುದರಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೆ ಮಾನ್ಯ ಸಚಿವರು ವಿವರಣೆ ಕೊಡಬೇಕು. ಇದರಲ್ಲಿ ಸುಮಾರು ಶೇಕಡ 90 ರಷ್ಟು ಕೆರೆಗಳ ಅಚ್ಚುಕಟ್ಟು ಪ್ರದೇಶ 100 ಎಕರೆಗಿಂತಲೂ ಹೆಚ್ಚಿಲ್ಲ. ಇದಕ್ಕೆ ಹೊಂದಿಕೊಳ್ಳುವಂತೆ 500 ರಿಂದ 700 ಎಕರೆಗೆ ಸಹಕಾರ ಸಂಘವನ್ನು ಮಾಡಲು ಐದಾರು ಕೆರೆಗಳಿಗೆ ಹೊಂದಿಕೊಳ್ಳುವಂತೆ ಮಾಡಬೇಕೆಂದು ಹೇಳಿದ್ದಾರೆ. ಇದು ಸರಿಯೋ ಅಥವಾ ತಪ್ಪೋ ಎನ್ನುವ ದಿಸೆಯಲ್ಲಿ ಚಿಂತನೆಯನ್ನು ಮಾಡಬೇಕಾಗಿದೆ. ಬೈಲಾ ಪ್ರಕಾರ 9 ಜನರ ಆಡಳಿತ ಮಂಡಳಿ ಬಗ್ಗೆ ಹೇಳಿದ್ದಾರೆ. ಅದರಲ್ಲಿ 5 ಜನರು ನೀರಾವರಿ ಉಪಯೋಗ ಮಾಡಿಕೊಳ್ಳತಕ್ಕಂಥವರು, ಇಬ್ಬರು ನಾಮ ನಿರ್ದೇಶನ ಹೊಂದಿದವರು, ಇಬ್ಬರು ಬೇರೆ ರೀತಿಯ ಬಳಕೆದಾರರಾಗಿರುವವರು ಇರುತ್ತಾರೆ. ನಾನು ಹೇಳುವುದೇನೆಂದರೆ ಪ್ರತಿಯೊಂದು ಕೆರೆಗೂ ಒಂದೊಂದು ಸೊಸೈಟಿ ಆಗಬೇಕು. ಇದನ್ನು ಮಾಡದೇ 9 ಜನರಲ್ಲಿ ನೀರನ್ನು ಬಳಸಿಕೊಳ್ಳುವ ವಿಚಾರದಲ್ಲಿ ಜಗಳ

ಆಗಬಹುದು, ವೈಷಮ್ಯ ಬೆಳೆಯುವ ಸಂದರ್ಭಗಳು ಬರಬಹುದು. ಈ ರೀತಿ ಮಾಡುವುದರಿಂದ ನೀರಿನ ಉಪಯೋಗ ಸರಿಯಾಗಿ ಆಗುವುದಿಲ್ಲ. ನೀವು ತಿಳಿಸಿರುವಂತೆ ಮಾಡಿದರೆ ನೀರಿನ ಬಳಕೆದಾರರಿಗೆ ನ್ಯಾಯ ದೊರಕುವುದಿಲ್ಲವೆನ್ನುವ ಸಂಶಯ ಕಂಡುಬರುತ್ತದೆ. ಆಂಧ್ರ ಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ, ರಾಜಸ್ತಾನದಲ್ಲಿ, ಪಾಂಡಿಚೇರಿ ಹಾಗೂ ಅನೇಕ ಕಡೆಗಳಲ್ಲಿ ಇಂಥ ಕಾರ್ಯಕ್ರಮ ಹಾಕಿಕೊಂಡಾಗ ಒಂದೊಂದು ಕೆರೆಗೂ ಒಂದೊಂದು ರಿಜಿಸ್ಟರ್ಡ್ ಸೊಸೈಟಿ ಮಾಡಿದ್ದಾರೆಯೇ ಹೊರತು ಸಹಕಾರ ಸಂಘಗಳನ್ನು ಅವರು ಮಾಡಿಲ್ಲ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಕೂಡ ಒಂದೊಂದು ಕೆರೆಗೂ ರಿಜಿಸ್ಟರ್ಡ್ ಸೊಸೈಟಿಯನ್ನು ಮಾಡಬೇಕು. ಆ ರೀತಿ ಮಾಡದೇ ಇಂದು ತಂದಿರುವ ತಿದ್ದುಪಡಿಯಂತೆ ಮಾಡಿದರೆ ರೈತರ ಹಿತ ಕಾಪಾಡಲು ಆಗುವುದಿಲ್ಲವೆನ್ನುವ ಸಂಶಯ ನನಗೆ ಕಂಡುಬರುತ್ತಿದೆ. ಇಂದು ಚುನಾವಣೆಗಳನ್ನು ಕೂಡ ಮಾಡಬೇಕಾದ ಅವಶ್ಯಕತೆ ಇದೆ. ಇಂದಿನ ಕಲುಷಿತ ರಾಜಕಾರಣದಲ್ಲಿಯೂ ಕೂಡ ಆದರ್ಶ ಪ್ರಾಯವಾದ ಒಳ್ಳೆಯ ಸಚಿವರು ಇಂದು ಇದ್ದಾರೆ. ಅವರ ಬಗ್ಗೆ ನನಗೆ ವಿಶ್ವಾಸವಿದೆ. ಆದರೆ ಸರ್ಕಾರದ ಎಲ್ಲಾ ಸಚಿವರ ಬಗ್ಗೆ ನನಗೆ ವಿಶ್ವಾಸವಿಲ್ಲ. ಮುಂದೆ ಬರುವ ಸರ್ಕಾರದ ಬಗ್ಗೆ ಕೂಡ ವಿಶ್ವಾಸ ನನಗಿಲ್ಲ. ಇವತ್ತಿನ ಕಲುಷಿತ ರಾಜಕಾರಣದಲ್ಲಿ ಮುಂದೆ ಏನೇನೋ ಆಗಬಹುದು. ಈ ಹಿನ್ನೆಲೆಯಲ್ಲಿ ರೈತರು ಸಾಮಾಜಿಕ ಜೀವನದಲ್ಲಿ ಮುಂದೆ ನೀರಿಗೆ ಬೆಂಕಿ ಇಡುವಂಥ ಪ್ರಸಂಗ ಬರಬಹುದು, ಕಾವೇರಿಗೆ ಬೆಂಕಿ ಹಚ್ಚಿದ ಹಾಗೆ ಮತ್ತೊಮ್ಮೆ ಅಂಥ ಪ್ರಸಂಗಗಳು ಆಗಬಾರದು. ಆದಕಾರಣ ಎಲ್ಲರ ಒಮ್ಮತದಿಂದ ಸೊಸೈಟಿಯನ್ನು ಮಾಡಬೇಕಾಗಿದೆ. ಇಂದು ನಾವು ಕೆರೆಗಳ ಬಗ್ಗೆ ಕೇವಲ ನೀರಾವರಿ ದೃಷ್ಟಿಯಿಂದ ಮಾತ್ರ ಚಿಂತನೆ ಮಾಡಬಾರದು. ಅನೇಕ ಕೆರೆಗಳಿಗೆ ಸಾಂಸ್ಕೃತಿಕ ಮಹತ್ವವಿದೆ, ಸಾಮಾಜಿಕ ಚಿಂತನೆ ಇದೆ, ಐತಿಹಾಸಿಕ ಮಹತ್ವ ಇದೆ. ಇಂಥ ಕೆರೆಗಳಲ್ಲಿ ಸ್ನಾನ ಮಾಡಿದರೆ, ತೆಪ್ಪ ಬಿಟ್ಟರೆ ರೋಗರುಜಿನಗಳು ವಾಸಿಯಾಗುವಂಥ ಹಿನ್ನೆಲೆ ಕೂಡ ಇರುತ್ತವೆ. ಆದುದರಿಂದ ಅಲ್ಲಿ ಮಾಡುವ ಸೊಸೈಟಿಗೆ ಕೇವಲ ರೈತರನ್ನು ಮಾತ್ರ ಸೇರಿಸದೆ ಇಡೀ ಊರಿನ ಜನರನ್ನು ಗಮನದಲ್ಲಿಟ್ಟಕೊಂಡು ಸಹಕಾರ ಸಂಘವನ್ನು ಮಾಡುವ ವಿಚಾರವನ್ನು ಕೈಬಿಡಬೇಕೆಂದು ಹೇಳಿ ಅದರ ಬದಲು ಒಂದೊಂದು ಕೆರೆಗೂ ರಿಜಿಸ್ಟರ್ಡ್ ಸೊಸೈಟಿಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇದನ್ನು ಎಲ್ಲ ಜನರನ್ನು ಸೇರಿಸಿಕೊಂಡೇ ನೊಂದಾಯಿಸಿ ಮಾಡಬೇಕು. ಈಗಾಗಲೇ ಯು.ಕೆ.ಪಿ.ಯಲ್ಲಿ ಅನೇಕ ಸೊಸೈಟಿಗಳನ್ನು ಮಾಡಿದ್ದಾರೆ. ಇದರ ಜೊತೆಗೆ ಗಂಗಾ ಕಲ್ಯಾಣ ಕಾರ್ಯಕ್ರಮ ಕೂಡ ಅನೇಕ ಕಡೆಗಳಲ್ಲಿ ಆಗಿದೆ. ಪರಿಣತರ ವರದಿಯಂತೆ ಅವು ಯಾವುವು ಯಶಸ್ವಿಯಾಗಲಿಲ್ಲ. ಆದಕಾರಣ ಮಾನ್ಯ ಸಚಿವರು ಇವೆಲ್ಲಾ ವಿಚಾರಗಳನ್ನು ಪರಿಗಣಿಸಿ ರಿಜಿಸ್ಟರ್ಡ್ ಸೊಸೈಟಿ ಮಾಡಲು ಮತ್ತು ಚುನಾವಣೆಯನ್ನು ನಡೆಸಲು ಕ್ರಮ ತೆಗೆದುಕೊಂಡು ತಿದ್ದುಪಡಿಯ ಬಗ್ಗೆ ಮರುಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಿರುವ ಉದ್ದೇಶಿತ ಕಾನೂನಿನ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದು ಬಹಳ ಕ್ಲಿಷ್ಟಕರ ಪ್ರಯೋಗವಾಗಿದೆ ಎಂಬುದನ್ನು ಅವರು ಗಮನಿಸಬೇಕು. ಇವೊತ್ತು ಆದರ್ಶವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಸಲುವಾಗಿ ಸಹಕಾರ ಸಂಘಗಳನ್ನು ರಚನೆ ಮಾಡಲು ಕಾನೂನನ್ನು ತಿದ್ದುಪಡಿ ಮಾಡಲಾಗಿದೆ. ಆದರೆ ಇಂದು ನೀರಿನ ಹಂಚಿಕೆ ವ್ಯವಸ್ಥೆ ಯಾವುದೇ ಶಿಸ್ತಿಗೆ, ವ್ಯವಸ್ಥೆಗೆ ಒಳಪಡಲಾರದಂಥ

ಪರಿಸ್ಥಿತಿ ಇದೆ. ಹೀಗಿರುವಾಗ ಇದನ್ನು ಸರಿಪಡಿಸಲಾಗುತ್ತದೆಯೇ ಎನ್ನುವ ಸಂಶಯ ಬರುತ್ತದೆ. ಹಲವಾರು ದಶಕಗಳ ಹಿಂದೆ ರಚನೆಯಾಗಿರುವ ಸಣ್ಣ ಕಾಲುವೆಗಳ ಮೂಲಕ ನೀರನ್ನು ಹಾಯಿಸುವುದು, ಇದರ ಜೊತೆಗೆ ಡ್ಯಾಮ್ ಮೂಲಕ ನೀರನ್ನು ಸಂಗ್ರಹಿಸಿ ಅದನ್ನು ಸಣ್ಣ ಸಣ್ಣ ಕಾಲುವೆಗಳ ಮೂಲಕ ನೀರನ್ನು ಬಿಟ್ಟು ಹಲವಾರು ವರ್ಷಗಳಿಂದ ಹಿಂದೆ ಏನು ಮೂಲ ಸ್ವರೂಪವಿತ್ತೋ ಆ ಸ್ವರೂಪ ಇವೊತ್ತು ಉಳಿದಿಲ್ಲ. ಹಲವಾರು ರಿಸ್ಟ್ರಿಕಶನ್‌ಗಳನ್ನು ರೈತರ ಮೇಲೆ ಹೇರುತ್ತೇವೆ. ಕ್ರಾಪ್ ಪ್ಯಾಟ್ರನ್ ಬಗ್ಗೆ, ಇಷ್ಟೇ ನೀರನ್ನು ಪಡೆಯಬೇಕು ಎಂದು ಹೇಳುವುದು, ನಮ್ಮ ಕಡೆ ಮುಂಗಾರಿನಲ್ಲಿ 40 ಪರ್ಸೆಂಟ್ ಮತ್ತು ಹಿಂಗಾರಿನಲ್ಲಿ 20 ಪರ್ಸೆಂಟ್ ನೀರನ್ನು ಉಪಯೋಗ ಮಾಡಬೇಕು ಎಂದು ಹೇಳುತ್ತೇವೆ. ಇದು ಕಾಲುವೆಗಳ ರಚನೆ ಮಾಡುವಾಗ ಡಿಸ್ಟ್ರಿಬ್ಯೂಟರ್ ಇರಬಹುದು, ಅಥವಾ ಸಬ್-ಡಿಸ್ಟ್ರಿಬ್ಯೂಟರ್ ಇರಬಹುದು ಅಥವಾ ಮುಖ್ಯ ಕಾಲುವೆಗಳೇ ಇರಬಹುದು, ಇವುಗಳನ್ನು ಮಾಡುವಾಗ ಬಹುತೇಕ ಲೆಕ್ಕಾಚಾರವನ್ನು ಮಾಡಿಯೇ ಇಷ್ಟೇ ನೀರನ್ನು ಬಳಸಬೇಕು ಎಂಬ ವಿಷಯವನ್ನು ಹೇಳಬೇಕಾದ ಸನ್ನಿವೇಶ ಕೂಡ ಬರುತ್ತದೆ. ಯಾವಾಗಲೂ ಕಾಲುವೆಗಳಲ್ಲಿ ಪ್ರತಿಶತ 60ರಷ್ಟು ನೀರು ಹರಿಯುತ್ತಿರಬೇಕು ಎನ್ನುವ ನಿರ್ಬಂಧ ಇರುತ್ತದೆ. ಬೆಳಗಾಂನಲ್ಲಿ ನಡೆದ ಕಾಡಾ ಲೆವೆಲ್‌ನ ತಜ್ಞರ ಸಮಿತಿಯಲ್ಲಿ ನಾನು ಹಿಂದೆ ಭಾಗವಹಿಸಿದ್ದೆ. ಆಗ ಅದರ ಅಧ್ಯಕ್ಷರಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳು ಇದ್ದರು. ಇದು 1983-84ರಲ್ಲಿ ನಡೆದ್ದದ್ದು. ಆ ಸಭೆಯಲ್ಲಿ ನಾವು ಏನು ಹೇಳಿದ್ದೇವೆಂದರೆ, ನೀವು ನಿಗಧಿತವಾದ ನೀರನ್ನು ನಮಗೆ ಕೊಟ್ಟರೆ ಮಾತ್ರ ನಾವು ಸರಿಯಾದ ರೀತಿಯಲ್ಲಿ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನೀರಿನ ಬಳಕೆಯಲ್ಲಿ ನೀವೇನು ನಿಯಮಗಳನ್ನು ಮಾಡುತ್ತೀರೋ ಅವುಗಳನ್ನು ಉಲ್ಲಂಘನೆ ಮಾಡುವ ಪರಿಸ್ಥಿತಿಯೂ ಬರುವುದಿಲ್ಲವಾದ್ದರಿಂದ ಆ ರೀತಿಯಾಗಿ ಮಾರ್ಪಾಡು ಮಾಡಿಕೊಡಿ ಎಂದು ಹೇಳಿದ್ದೆವು. ಆ ರೀತಿ ಮಾಡಿಕೊಡುವಂತೆ ಎರಡ್ಮೂರು ಕಾಲುವೆಗಳ ಬಗ್ಗೆ ಕೂಡ ಅವರಿಗೆ ಹೇಳಿದ್ದೆವು. ಆದರೆ ಅದು ಒಪ್ಪಿಗೆಯಾಯಿತು ಹಾಗೂ ಠರಾವು ಆಯಿತು. ಸಮಿತಿಯಲ್ಲಿ ಚೀಫ್ ಇಂಜಿನಿಯರ್, ವೈಸ್ ಚಾನ್ಸಲರ್ ಇದ್ದರು. ನಿಗದಿತ ವೇಳೆಗೆ ಕೊಡಬೇಕೆಂದು ಹೇಳಿದ ಆ ನಿರ್ಣಯ ಇವತ್ತಿನವರೆಗೂ ಹೊರಗೆ ಬರಲಿಲ್ಲ. ಕಾರಣ ಇಷ್ಟೆ, ಬಹುತೇಕ ಆ ಇಲಾಖೆಯಿಂದ ಅದನ್ನು ಮಾಡುವುದಕ್ಕೆ ಸಾಧ್ಯವಿರಲಿಲ್ಲವೆನ್ನುವುದು ಇರಬಹುದು. ಅಥವಾ ಅಷ್ಟು ಹಣಕಾಸಿನ ಪರಿಸ್ಥಿತಿ ಕೂಡ ಇರಲಿಕಿಲ್ಲ. ಅಥವಾ ನೀರು ಏನು ಕೊಡುತ್ತೇವೆ ಅದು ಇಷ್ಟೇ ನಿಶ್ಚಿತವಾಗಿ ಕೊಡುತ್ತಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಎನ್ನುವ ವಿಚಾರ ಇತ್ತು. ಬಹುತೇಕ ನಾವು ಅನುಭವದ ಮೇಲೆ ನೋಡುತ್ತೇವೆ. ಬಹಳಷ್ಟು ನೀರಾವರಿ ಪ್ರದೇಶದಿಂದ ಬಂದಂತಹ ಜನರಿಗೆ ಅದು ಗೊತ್ತಿರುತ್ತದೆ. ಹೆಚ್ಚಿರುತ್ತದೆ, ಇಲ್ಲ ಕಡಿಮೆ ಇರುತ್ತದೆ. ಎಷ್ಟು ಬೇಕೋ ಅಷ್ಟು ತರುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಪರಿಸ್ಥಿತಿ ಇವತ್ತು ಆಗಿದೆ. ಕಡಿಮೆ ಯಾವಾಗ ಆಗುತ್ತದೆ? ಅಲ್ಲಿ ಸಿಲ್ಟ್ ನಿಂತು ಬೆಳೆ ಬೆಳೆಯುವುದಕ್ಕೇ ಸಾಧ್ಯವಿಲ್ಲ ವೆಂದಾಗ, ಎಷ್ಟೇ ನಾವು ನೀರು ತೆಗೆದುಕೊಂಡರೆ ಅಲ್ಲಿ ನೀರು ಬರದೇ ಇರುವಂತಹ ಪರಿಸ್ಥಿತಿ ಇರುತ್ತದೆ. ಬಹಳಷ್ಟು ತಡೆ ಹಾಕಿ ಹೆಚ್ಚೆಚ್ಚು ನೀರನ್ನು ನಾವು ತೆಗೆದುಕೊಂಡು ಹೋದಾಗ ಅತೀ ಹೆಚ್ಚು ನೀರು ಬರುವಂತಹ ಸಂದರ್ಭ ಇದೆ. ಹೀಗಾಗಿ ಅಲ್ಲಿ ಇರುವಂತಹ ಕಾಲುವೆಗಳ ರಚನೆ ಇವತ್ತು ರೈತನಿಗೆ ನೀರು ಪಡೆಯುವುದಕ್ಕೆ ಅಥವಾ ನೀರು ಮುಟ್ಟಿಸುವುದಕ್ಕೆ, ಅವರಿಗೆ ಎಷ್ಟು ಪ್ರಮಾಣದಲ್ಲಿ ಕೊಡಬೇಕೋ

ಅಷ್ಟು ಯೋಗ್ಯ ಪರಿಸ್ಥಿತಿಯಲ್ಲಿ ಇದೆಯೇ ಎಂದು ಸರ್ಕಾರ ನೋಡಬೇಕು. ಹೀಗಾಗಿ ನೀರಾವರಿ ಸಹಕಾರ ಸಂಘಗಳನ್ನು ನಾವು ಸ್ವಾಗತ ಮಾಡಿದ್ದೇವೆ. ಸಹಕಾರಿಗಳಾಗಿಬಹುದು. ಅಥವಾ ಕೊನೆ ಒಂದು ಉಪಾಯ ಎಂದು ನಾವು ತಿಳಿದುಕೊಳ್ಳಬಹುದು. ಇದರ ಮುಂದೆ ಏನೂ ಇರುವುದಿಲ್ಲ. ಏಕೆಂದರೆ ಅದರಲ್ಲಿ ಅವ್ಯವಸ್ಥಿತ ನೀರು ನಾವು ತೆಗೆದುಕೊಳ್ಳುತ್ತೇವೆ ಆದರೆ ಟ್ಯಾಕ್ಸ್ ಕೊಡುವುದಿಲ್ಲ. ನೀರು ಹರಿಸುವವರು ಯಾರೂ ಬಂದು ಸೂಪರ್‌ವಿಷನ್ ಮಾಡುವುದಿಲ್ಲ. ಅವರೂ ಸಹ ಸೂಪರ್‌ನ್ಯೂಮರ್ ಎಂದು ಹೇಳಿ ಬೇರೆ ಬೇರೆ ಕೆಲಸದ ಮೇಲೆ ಹೋಗಿಬಿಟ್ಟರು. ಇವತ್ತು ಕಂಟ್ರಾಕ್ಟ್ ಕೊಟ್ಟು, ಟೆಂಡರ್ ಕೊಟ್ಟು ಆ ಕೆಲಸವನ್ನು ಮಾಡಿಸುವಂತಹ ಪರಿಸ್ಥಿತಿ ಇದೆ. ಹೀಗೆ ಮಾಡುವಂತಹ ಕೆಲಸದಲ್ಲಿ ನೀರಾವರಿ ಇಲಾಖೆಯವರದೇ ಆದಂತಹ ಪರ್ಯಾಯ ವ್ಯವಸ್ಥೆ ಇದೆ. ಎಕರೆವಾರು ಕೊಡುವಂತಹ ಹಣದಲ್ಲಿ ಎಷ್ಟು ಖರ್ಚು ಮಾಡುತ್ತಿದ್ದಾರೆ. ಎಷ್ಟು ಬೇಕು ಎನ್ನುವಂಥದರ ಬಗ್ಗೆ ದೀರ್ಘವಾದಂತಹ ವಿವರ ಇಲ್ಲ. ಅದಕ್ಕೆ ನಾವು ಇವತ್ತು ನೀರನ್ನು ಪಡೆಯುವಂತಾದ್ದು ಹಾಗೂ ಕೊಡುವಂತಾದ್ದಕ್ಕೆ ಸಹಕಾರ ಸಂಘಗಳ ಮಾಡುವಂತಹ ಕೆಲಸ ಆಗಿದೆ. ಸಹಕಾರ ಸಂಘಗಳು ಮಾಡಿದ್ದನ್ನು ಸ್ವಾಗತ ಮಾಡಿದರು. ನೀರಾವರಿ ಪ್ರದೇಶದಲ್ಲಿ ಇರುವಂತಹ ರೈತರಿಗೆ ಏನಾಗಿದೆ ಎಂದರೆ ಸಹಕಾರ ಸಂಘಗಳಿಗೆ ಬಹಳಷ್ಟು ಪ್ರಮಾಣದಲ್ಲಿ ಸರ್ಕಾರದಲ್ಲಿ ದುಡ್ಡು ಬರುತ್ತದೆಂಬ ಭಾವನೆ ಬಂದಿದೆ. ಅದು ಆಗಬಾರದು. ಇದರ ಉದ್ದೇಶ ನೋಡಬೇಕು. ನಾವು ನೋಡುತ್ತೇವೆ. ನಾವು ಸಾಲ ಪಡೆಯಬಹುದು. ಮೈಂಟೇನ್ ಮಾಡಬಹುದು, ಹೊಸ ಕಾಲುವೆ ರಚನೆ ಮಾಡಬಹುದು, ನಿರ್ವಹಣೆ ಮಾಡಬಹುದು, ಉಸ್ತುವಾರಿ ಮಾಡಬಹುದು. ಇದೆಲ್ಲಾ ಇದ್ದರೂ ಹೆಚ್ಚು ಜನಗಳಲ್ಲಿ ಇರುವಂತಹ ಪ್ರಚಲಿತ ಭಾವನೆ ಏನೆಂದರೆ ಸರ್ಕಾರದಿಂದ ಎಲ್ಲಾ ಬರುತ್ತದೆ. ರಾಜ್ಯ ಸರ್ಕಾರಗಳು ಬೇರೆ ಇರಬಹುದು, ಯಾವ ರೀತಿಯಾಗಿ ಹಣ ಉಪಯೋಗ ಮಾಡಿಕೊಂಡು ಕೆಲಸ ಮಾಡಬಹುದು, ದುರುಪಯೋಗ ಮಾಡಬಹುದು ಎನ್ನುವ ಭಾವನೆ ಇರುವಂತಹ ಸನ್ನಿವೇಶವಾಗಿದೆ. ಅದನ್ನು ಅವರು ನೋಡಿರಬಹುದು ಅಥವಾ ಪರಿಸ್ಥಿತಿ ಉದ್ಭವವಾಗಿರಬಹುದು. ಅದಕ್ಕಾಗಿ ಅದರ ಮೂಲ ಗುರಿ ತಪ್ಪಬಾರದು. ಅದಕ್ಕಾಗಿ ಆ ಒಂದು ಸಹಕಾರ ಸಂಘಗಳಿಗೆ ಯಾವ ಕೆಲಸವನ್ನು ವಹಿಸಿಕೊಟ್ಟು ಅದನ್ನು ಎಕ್ಸಿಕ್ಯೂಟ್ ಮಾಡುವುದಕ್ಕೆ ಏನು ಮಾಡಬೇಕು? ಸಹಕಾರ ಸಂಘಗಳಿಗೆ ಕೆಲಸ ಮಾಡುವುದಕ್ಕೆ ಹಚ್ಚುವಾಗ ಕಾಲುವೆಗಳನ್ನು ಯಾವ ಮಟ್ಟಕ್ಕೆ ಸರ್ಕಾರ ಮಾಡಿಕೊಡಬೇಕು ಎನ್ನುವುದು ಅಷ್ಟೇ ಮುಖ್ಯ. ಇಲ್ಲದೇ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈ ನೀರಾವರಿ ತಿದ್ದುಪಡಿ ವಿಧೇಯಕ ಏನಿದೆ ಅದರ ಸದುಪಯೋಗವಾಗಲಿ, ರೈತರಿಗೆ ಇದರಿಂದ ಅನುಕೂಲವಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನೀರಾವರಿ ಬೆಳೆಗಾರರ ಸಹಕಾರ ಸಂಘವನ್ನು ವೈಜ್ಞಾನಿಕವಾದ ರೀತಿಯಲ್ಲಿ ನೀರನ್ನು ಬಳಕೆ ಮಾಡುವುದಕ್ಕೆ ಸರ್ಕಾರ ಈ ಒಂದು ತಿದ್ದುಪಡಿ ವಿಧೇಯಕವನ್ನು ತಂದಿದೆ, ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ನೀರಾವರಿ ಮಂತ್ರಿಗಳಾದ ಪಾಟೀಲ್‌ರವರು ಈ ಇಲಾಖೆಯಲ್ಲಿ ಒಂದು ಪರಿಣಾಮಕಾರಿಯಾದಂತಹ ಪರಿವರ್ತನೆಯನ್ನು ಮಾಡಿ ಇವತ್ತು ಏನು ಕೋಟ್ಯಾಂತರ ಜನ ರೈತರು ನೀರಿಗಾಗಿ ಬವಣೆ ಪಡುತ್ತಿದ್ದಾರೆ

ಅವರಿಗೆ ಅನುಕೂಲವಾಗುವಂತಹ ಕೆಲಸ ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಡ್ಯಾಂ ಕಟ್ಟಿ ನಾಲೆಗಳನ್ನು ಹಾಕಿದ್ದರೂ ಕೂಡ ಸಾವಿರಾರು ಎಕರೆಗಳಿಗೆ ನೀರು ಇಲ್ಲದೆ ಇರುವುದನ್ನು ನಾವು ನೋಡಿದ್ದೇವೆ. ಅವರ ಒಂದು ಅನಿಸಿಕೆಗೆ ಸ್ಪಂದಿಸಿ ಸರ್ಕಾರ ಈ ತಿದ್ದುಪಡಿ ವಿಧೇಯಕವನ್ನು ತಂದಿರುವುದನ್ನು ನಾನು ಸ್ವಾಗತ ಮಾಡುತ್ತಾ, ಇದರಲ್ಲಿ ಅನೇಕ ಅಡೆತಡೆಗಳು ನ್ಯೂನತೆಗಳು ಇರುತ್ತವೆ. ಅದೇನೆಂದರೆ, ಬಿಲ್ ತಂದಿರತಕ್ಕಂಥ ಉದ್ದೇಶ ಒಳ್ಳೆಯದಾಗಿದೆ. ಈ ಉದ್ದೇಶ ನೂರಕ್ಕೆ ನೂರು ಭಾಗ ಪರಿಣಾಮಕಾರಿಯಾಗಿ ಆಗಬೇಕಾದರೆ ಬಹಳಷ್ಟು ರೀತಿಯಾಗಿ ಕಟ್ಟುನಿಟ್ಟಿನ ಕಾನೂನನ್ನು ಸರ್ಕಾರದವರು ಫ್ರೇಮ್ ಮಾಡುವಂತಾದ್ದು ಬಹಳ ಅವಶ್ಯಕತೆ ಇದೆ. ಸಹಕಾರ ಸಂಘ ಎಂದರೆ ಇವತ್ತು ಜನರಲ್ಲಿ ಬಹಳ ತಾತ್ಸಾರ ಮನೋಭಾವ ಬಂದಿದೆ. ಅನೇಕ ಸಾವಿರಾರು ಸಹಕಾರ ಸಂಘಗಳು ಇದ್ದರೂ ಒಳ್ಳೆಯ ಕೆಲಸ ಮಾಡತಕ್ಕಂಥಾದ್ದು ಸಹಕಾರ ಸಂಘಗಳು ನೂರು ಸಿಗುವುದು ಕಷ್ಟ. ಸಹಕಾರಿ ಸಂಘಗಳಲ್ಲಿ ಬರೀ ನುಂಗಣ್ಣನ ಕತೆಯಾಗಿದೆ. ಅವು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಆ ದೃಷ್ಟಿಯಿಂದ ನಾನಾದರೂ ಮನವಿ ಮಾಡಿಕೊಳ್ಳುವುದೇನೆಂದರೆ, ಸಹಕಾರ ತತ್ವದ ಆಧಾರದ ಮೇಲೆ ನೀರಿನ ಬಳಕೆಯನ್ನು ಗ್ರಾಮಸ್ಥರು ನೋಡಿಕೊಳ್ಳುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಸಹಕಾರ ತತ್ವಕ್ಕೆ, ಸಹಕಾರ ಸಂಘದ ನಿಯಮಗಳಿಗೆ ಅಮೆಂಡ್‌ಮೆಂಟ್ ತಂದು ವಿಶೇಷವಾಗಿ ಈ ನೀರಾವರಿ ಸಹಕಾರ ಸಂಘಗಳಿಗೆ ಅನ್ವಯವಾಗತಕ್ಕಂಥ ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಯಾವುದೇ ರೀತಿಯಲ್ಲಿ ಇದರಲ್ಲಿ ಹಣ ದುರುಪಯೋಗವಾಗದೇ ಇರುವಂತಹ ರೀತಿಯಲ್ಲಿ ನೋಡಿಕೊಳ್ಳಬೇಕಾಗುತ್ತದೆ ಎಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ ನಾಮಕರಣ ಸದಸ್ಯರನ್ನು ದಯಮಾಡಿ ತೆಗೆಯಬೇಕು. ಈ ನಾಮಕರಣ ಸದಸ್ಯರು ಬಂದಾಗ ರಾಜಕೀಯ ಶುರುವಾಗಿ ಸರ್ಕಾರದ ಮತ್ತು ಸರ್ಕಾರೇತತ ಪರವಾಗಿ, ಅಲ್ಲಿ ಯಾವ ಸಹಕಾರ ಸಂಘಗಳು ಬರುತ್ತವೆ ಆ ಸಹಕಾರ ಸಂಘ ಯಾವತ್ತು ಕೂಡ ಉದ್ಧಾರವಾಗುವುದಿಲ್ಲ. ಸಹಕಾರ ಸಂಘಗಳು ಯಾವತ್ತು ಕೂಡ ರಾಜಕೀಯದಿಂದ ದೂರ ಇದ್ದರೆ ಬಹಳ ಅನುಕೂಲವಾಗುತ್ತದೆ. ಈ ನಾಮಕರಣ ಸದಸ್ಯರನ್ನು ನೇರವಾಗಿ ತೆಗೆದುಹಾಕಬೇಕು. ಮಾನ್ಯ ಮಲ್ಲಿಕಾರ್ಜುನ್‌ರವರು ಹೇಳಿದಹಾಗೆ ಈ ಸಹಕಾರ ಸಂಘಗಳಿಗೆ ಮಿತಿ ಏನಿದೆ ಸಾವಿರ ಎಕರೆ ಎಂದು ಅದು ಡಬಲ್ ಮಾಡಬೇಕು. ಅಡ್ಮಿನಿಸ್ಟ್ರೇಟಿವ್ ಪರ್ಪಸ್‌ಗೆ ಒಂದು ಯೂನಿಟ್ ಜಾಸ್ತಿ ಇರಬೇಕು ಮತ್ತು ಆ ಯೂನಿಟ್‌ಗೆ ಗೌರವಾಧ್ಯಕ್ಷರನ್ನಾಗಿ ಶಾಸಕರನ್ನು ನೇಮಕ ಮಾಡಬೇಕು. ಯಾವಾಗ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಿ, ಆಗ ಸಂಬಂಧಪಟ್ಟ ಇಂಜಿನಿಯರ್, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹಿಡಿತ ಹೆಚ್ಚಾಗಿರುತ್ತದೆ. ಅಲ್ಲಿ ಹಣ ಹಾಗೂ ಅಧಿಕಾರ ದುರುಪಯೋಗವಾಗುವುದಿಲ್ಲ. ಅಲ್ಲಿ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತವೆ ಎಂದು ಹೇಳಿ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ. ಈ ದಿನ ಎಂದರೆ ದಿನಾಂಕ14.11.2000ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ವಿಧಾನಸಭಾ ಕಾರ್ಯಕಲಾಪಗಳನ್ನು

ದಿನಾಂಕ 17.11.2000ವರೆಗೆ ನಡೆಸಿ ತದನಂತರ ದಿನಾಂಕ 20, 21 ಮತ್ತು 22ರಂದು ನವೆಂಬರ್ 2000ವರೆಗೆ ನಡೆಸಲು ತೀರ್ಮಾನಿಸಲಾಗುತ್ತದೆ. ಇದಕ್ಕೆ ಸದನದ ಸಹಮತ ಇದೆಯೆಂದು ನಾನು ಭಾವಿಸುತ್ತೇನೆ.

ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ (ಮುಂದುವರೆದ ಚರ್ಚೆ)

ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2000

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ನೀರಿನ ಬಳಕೆದಾರರ ಸಹಕಾರ ಸಂಘವನ್ನು ಮಾಡುವ ಉದ್ದೇಶದಿಂದ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಈ ಮಸೂದೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹುತೇಕ ಕೃಷಿ ಇಲಾಖೆಯಲ್ಲಿ ಕೆಲಸ ಮಾಡಿರತಕ್ಕಂಥ, ಕೃಷಿ ಬಗ್ಗೆ ಅಧ್ಯಯನ ಮಾಡಿರತಕ್ಕಂಥ ನಮ್ಮ ಸನ್ಮಿತ್ರರು ಬಹಳ ದೀರ್ಘವಾಗಿ ಮಾತನಾಡಿದ್ದಾರೆ, ಮತ್ತು ಬಹಳ ಉತ್ತಮವಾಗಿರತಕ್ಕಂಥ ಸಲಹೆಗಳನ್ನು ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷ ಗೌರವಾನ್ವಿತ ಸದಸ್ಯರುಗಳು ಕೊಟ್ಟಿದ್ದಾರೆ. ನಾನು ಸಹ ಒಂದೆರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ನಮ್ಮ ಶ್ರೀಮಾನ್ ಬೈರೇಗೌಡರು ನಮ್ಮ ಸರ್ಕಾರದಲ್ಲಿ ಕೃಷಿ ಮಂತರ್ಗಳಾಗಿದ್ದಂತಹ ಸಂದರ್ಭದಲ್ಲಿ ಒಂದು ಅಗ್ರಿಕಲ್ಚರ್ ಪಾಲಿಸಿ ಎಂದು ಮಾಡಿದ್ದರು. ಆ ಅಗ್ರಿಕಲ್ಚರ್ ಪಾಲಿಸಿಯಲ್ಲಿ ಇದರ ಬಗ್ಗೆ ಮೆನ್‌ಷನ್ ಮಾಡಿದ್ದಾರೆ. ಇದಾದಮೇಲೆ ವರ್ಲ್ಡ್ ಬ್ಯಾಂಕ್‌ನವರು ಸಹ ನಮ್ಮ ದೇಶಕ್ಕೆ ಬಂದಾಗ ಕೃಷಿ ಇಲಾಖೆಗೆ ಸಾಲ ಕೊಡತಕ್ಕಂಥ ಸಂದರ್ಭದಲ್ಲಿ ಇದು ಆಗಬೇಕು ಎಂದು ಅನೇಕ ಸಂದರ್ಭದಲ್ಲಿ ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಜೊತೆಗೆ ನಮ್ಮ ರಾಜ್ಯದಲ್ಲಿ ನೀರಾವರಿ ಸೊಸೈಟಿಗಳನ್ನು ಮಾಡುತ್ತೇವೆಂದು ಹೇಳಿದಮೇಲೆ ಮಾನ್ಯ ಪ್ರಧಾನ ಮಂತ್ರಿಗಳು ಯಾವುದೋ ಒಂದು ರಾಷ್ಟ್ರ ಮಟ್ಟದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಒಂದು ಒಳ್ಳೆಯ ಕೆಲಸ ಮಾಡುತ್ತಿದೆಯೆಂದು ಇದರ ಬಗ್ಗೆ ಹೇಳಿದ್ದಾರೆ. ಇಲ್ಲಿ ನೀರು ಮತ್ತು ಭೂಮಿಯನ್ನು ಯಾವರೀತಿ ಸಂರಕ್ಷಣೆ ಮಾಡಬೇಕು, ಇದನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ನಮ್ಮ ರೈತರಿಗೆ

5.10 ಪಿ.ಎಂ.

ಶಿಕ್ಷಣ ಕೊಡಬೇಕೆನ್ನುವಂಥಾದ್ದು ನಿರ್ವಿವಾದದ ವಿಚಾರವಾಗಿದೆ. ಕ್ರಾಪಿಂಗ್ ಪ್ಯಾಟ್ರನ್ ಮತ್ತ ನೀರಿನ ಬಳಕೆಯ ಬಗ್ಗೆ ರೈತರಿಗೆ ಶಿಕ್ಷಣ ಕೊಡುವುದರ ಬಗ್ಗೆ ನಮ್ಮದು ಯಾರದೂ ಭಿನ್ನಾಭಿಪ್ರಾಯವಿಲ್ಲ. ಇದರ ಬಗ್ಗೆ ನನಗಿರುವಂತಹ ಸಂಶಯವೆಂದರೆ, ಮಾನ್ಯ ಮುಖ್ಯಮಂತ್ರಿಯವರ, ಮಂತ್ರಿಯವರ ಹಾಗೂ ಸದಸ್ಯರುಗಳ ಸಚಿವ ಸಂಪುಟದ ತೀರ್ಮಾನವಾದರೆ ಸಾಧ್ಯವೇ ಹೊರತು ಇಲ್ಲದೇ ಹೋದರೆ

ಈ ಒಂದು ಕಾರ್ಯಕ್ರಮ ಯಶಸ್ವಿಯಾಗುತ್ತದೆಂದು ನನಗನಿಸುವುದಿಲ್ಲ. ಈ ಕಾರ್ಯಕ್ರಮ ಯಶಸ್ವಿಯಾಗ ಬೇಕಾದರೆ ನಿಮಗೆ ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ. ನೀವು ಈ ನೀರಾವರಿ ಇಲಾಖೆಯನ್ನು "ಕಾಂಗ್ರೆಸ್ಸೀಕರಣ" ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡಿದ್ದರೆ ಇದು ಖಂಡಿತವಾಗಿಯೂ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ನೀವು ಇದನ್ನು ಕಾಂಗ್ರೆಸ್ಸೀಕರಣ ಮಾಡುವುದಕ್ಕೆ ಹೊರಟಿದ್ದೀರಾ? ಎನ್ನುವಂತಹ ಸಂಶಯ ನಮಗೆ, ನೀವು ಇದುವರೆಗೂ ಮಾಡಿರುವಂತಹ ಕೆಲವು ಕಾಮಗಾರಿಗಳಿಂದ ಹಾಗೆ ಅನ್ನಿಸುತ್ತಿದೆ. ಮಾನ್ಯ ಉಪಾಧ್ಯಕ್ಷರೆ, ಇದು ಆರ್ಡಿನೆನ್ಸ್ ರೀ-ಪ್ಲೇಸ್‌ಮೆಂಟ್ ಬಿಲ್ ಆಗಿದೆ. ಇದನ್ನು ಆರ್ಡಿನೆನ್ಸ್ ಮಾಡಿದ ತಕ್ಷಣವೇ ನೀವು ಇದರ ಉದ್ಘಾಟನಾ ಕಾರ್ಯಕ್ರಮವನ್ನು ಎಲ್ಲಾ ಕಡೆಗಳಲ್ಲೂ ಮಾಡಿದ್ದೀರಿ. ಇದಕ್ಕೆ ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರನ್ನು, ಪದಾಧಿಕಾರಿಗಳನ್ನು, ಕಾಂಗ್ರೆಸ್ ಅಧ್ಯಕ್ಷರನ್ನು, ಇವರೆಲ್ಲರನ್ನೂ ಕರೆಸಿಕೊಂಡು ಕಾರ್ಯಕ್ರಮವನ್ನು ಮಾಡಿದ್ದೀರಿ. ಇದನ್ನು ನಾನೇ ಸ್ವತಃ ನೋಡಿದ್ದೇನೆ, ಇದು ನನಗೆ ಗೊತ್ತಿದೆ, ನಾನು ಸಹ ಅವರನ್ನು ನೀವು ಏಕೆ ಎಲ್ಲರೂ ಹೋಗುತ್ತಿದ್ದೀರಿ, ಎಂದು ಕೇಳಿದೆ. ಅದಕ್ಕೆ ಅವರು ಬೆಂಗಳೂರಿನಲ್ಲಿ ನೀರಾವರಿ ಸೊಸೈಟಿಯ ಉದ್ಘಾಟನೆ ಇದೆ ಎಂದು ಹೇಳಿದರು. ಇದು ಈ ರೀತಿಯಾಗಬಾರದು, ತಮಗೆ ಗೊತ್ತಿರುವ ಹಾಗೆ ಅಧಿಕಾರದ ವಿಕೇಂದ್ರೀಕರಣ ಮಾಡಿದಂತಹ ಘನ ಉದ್ದೇಶವೇನು? Ultimately, people should participate in the administration ಎನ್ನತಕ್ಕಂಥ ಘನ ಉದ್ದೇಶವಾಗಿದೆ. ಮಾನ್ಯ ಉಪಾಧ್ಯಕ್ಷರೆ, ಅತ್ಯಂತ ಪ್ರಾಮಾಣಿಕವಾಗಿ ಮತ್ತು ರಾಜಕೀಯ ವ್ಯವಸ್ಥೆಯ ಆಷಾಢಭೂತಿತನವನ್ನು ಬಿಟ್ಟು ನೀವು ಮಾತನಾಡಿದಾಗ ಇದು ಯಾವುದೇ ಊರಿನಲ್ಲಿ ಗ್ರಾಮ ಪಂಚಾಯತ್ ಸದಸ್ಯರಿಗೆ, ಆ ಊರಿನ ಕಂಟ್ರಾಕ್ಟ್ ಅನ್ನು ಅವನಿಗೆ ಕೊಡಬೇಕು, ಅವನು ಹೇಳಿದಂಥವರಿಗೆ ಕೊಡಬೇಕು, ಎನ್ನುವಂತಹ ವಾಸ್ತವಾಂಶ ಸ್ಥಿತಿಯಾಗಿದೆ. ಇದೇ ರೀತಿಯಲ್ಲಿ ತಾಲ್ಲೂಕು ಪಂಚಾಯತ್ ಕಂಟ್ರಾಕ್ಟ್ ಅನ್ನು ಆ ಸದಸ್ಯರಿಗೆ ಕೊಡಬೇಕು, ತಾಲ್ಲೂಕು ಬೋರ್ಡ್ ಸದಸ್ಯರಾದರೆ ಅವರಿಗೆ ಕೊಡಬೇಕೆಂದು ಏನು ಇಲ್ಲ. ಇಲ್ಲಿ ನಮ್ಮ ಬಹುತೇಕ ಎಂ.ಎಲ್.ಎ.ಗಳು ಫಂಡ್ ಬೇಕೆಂದು ಕೇಳುತ್ತಿದ್ದಾರೆ. ಇದನ್ನು ಇವರು ಏಕೆ ಕೇಳುತ್ತಿದ್ದಾರೆಂದರೆ ಗ್ರಾಮ ಪಂಚಾಯತ್ ಸದಸ್ಯರುಗಳು, ತಾಲ್ಲೂಕು ಬೋರ್ಡ್ ಸದಸ್ಯರುಗಳು, ಜಿಲ್ಲಾ ಪರಿಷತ್ತಿನ ಸದಸ್ಯರುಗಳು ಇದನ್ನು ತೆಗೆದುಕೊಳ್ಳುತ್ತಿದ್ದಾರೆ. ಬೆಂಗಳೂರು ಸಿಟಿಯಲ್ಲಿರುವಂತಹ ಎಂ.ಎಲ್.ಎ.ಗಳಿಗೆ ಏನು ಕೆಲಸವಿರುವುದಿಲ್ಲ, ಇವರಿಗೆ ಅಸೆಂಬ್ಲಿಯನ್ನು ಅಟೆಂಡ್ ಮಾಡುವುದಷ್ಟೆ ಕೆಲಸ, ಕಾರ್ಪೋರೇಟರ್ಸ್ ಫಂಡ್ ತೆಗೆದುಕೊಳ್ಳುತ್ತಾರೆ. This is a transition period. ಇದೆಲ್ಲಾ ಆಗುವಂಥಾದೆ, ಆದರೆ ವಸ್ತುಸ್ಥಿತಿ ಏನಾಗಿದೆ? ವಿಕೇಂದ್ರೀಕರಣದ ಹೆಸರಿನಲ್ಲಿ ಆಗಿರುವಂಥಾದ್ದು ಏನು? ಈ ವಿಕೇಂದ್ರೀಕರಣದ ಹೆಸರಿನಲ್ಲಿ ಗುಣಮಟ್ಟ ಸಂಪೂರ್ಣವಾಗಿ ಕಡಿಮೆಯಾಗಿದೆ. ಇವತ್ತು ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಲ್ಲಿ ಅಧಿಕಾರಿಗಳು ಕಾನೂನುಗಳನ್ನು ಮಾಡಿಸಿಕೊಳ್ಳುತ್ತಾರೆ. ಅದಕ್ಕೆ ಬೇಕಾದಂತಹ ಕಾನೂನುಗಳನ್ನು ಒಬ್ಬೊಬ್ಬ ಅಧಿಕಾರಿಯೂ ಡೈರೆಕ್ಟರ್‌ಗಳಾದ್ದಾಗ ಒಂದೊಂದು ಕಾನೂನನ್ನು ಮಾಡಿಸುತ್ತಾರೆ. ಈ ಕಾನೂನು ಇಲಾಖೆ ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ಕಾನೂನುಗಳನ್ನೆ ನಿರಶನಗೊಳಿಸುವಂತಹ, ನಿಲ್ಲಿಸುವಂತಹ ಕೆಲಸಕ್ಕೆ ನಾವು ಬಂದು ನಿಂತಿದ್ದೇವೆ. ನಮ್ಮ ಮಾನ್ಯ ಸದಸ್ಯರಾದಂತಹ ಪೂಜಾರ್‌ರವರು ಗಂಗಾ ಕಲ್ಯಾಣ ಕಾರ್ಯಕ್ರಮದ ಬಗ್ಗೆ ಹೇಳಿದರು. ಈ

ಕಾರ್ಯಕ್ರಮ ಸೊಸೈಟಿ ಕಾನ್ಸೆಫ್ಟ್‌ನಲ್ಲಿರುವಂಥಾದ್ದು, ಇದನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಎಂದು ವಿಶೇಷವಾಗಿ ಪ್ರಾರಂಭವಾದ ಕಾರ್ಯಕ್ರಮವಾಗಿದೆ. ಆದರೆ ಇದರ ವಸ್ತುಸ್ಥಿತಿ ಏನಾಗಿದೆ? ಯಾವ ತಾಲ್ಲೂಕುಗಳಿಗೆ ಹೋಗಿ ನೋಡಿದರೂ ಪಂಪ್ ಕೆಟ್ಟು ಹೋಗಿರುತ್ತದೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಬರುವುದಿಲ್ಲ? ನೀರು ಕೊಡುವುದಕ್ಕೆ ಜಗಳವಾಗುತ್ತದೆ. ಇದು ಒಂದು ಉದಾಹರಣೆಯಾಗಿದೆ. ಇದೇ ರೀತಿಯಲ್ಲಿ ಗ್ರಾಮ ಪಂಚಾಯತ್ ಉದಾಹರಣೆಯೂ ಸಹ ನಮ್ಮ ಮುಂದೆ ಇದೆ. ಈಗಾಗಲೇ ತಾವು ಒಂದು ಸಾವಿರ ಸೊಸೈಟಿಗಳಿಗೆ ಚೀಫ್ ಪ್ರಮೋಟರ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆಂದು ಹೇಳಿದ್ದೀರಿ. ನಾನು ಒಂದು ತಾಲ್ಲೂಕಿನ ಬಗ್ಗೆ ಹೇಳುತ್ತೇನೆ, ಆದರೆ ಅದರ ಹೆಸರನ್ನು ಹೇಳುವುದಿಲ್ಲ. ಅಲ್ಲಿ 17 ಸೊಸೈಟಿಗಳು ಆಗಿವೆ, ಅದರಲ್ಲಿ ತಾಲ್ಲೂಕಿನ ಬಗ್ಗೆಯೇ ಹೇಳುತ್ತೇನೆ, ನನಗೆ 48 ಸಾವಿರ ಓಟುಗಳು ಬಂತು, ನನ್ನ ವಿರುದ್ಧವಾಗಿ ಇರುವವರಿಗೆ 24 ಸಾವಿರ ಓಟುಗಳು ಬಂತು. ನನ್ನ ಪಕ್ಕದ ಕ್ಷೇತ್ರದಲ್ಲಿ ಮಾನ್ಯ ಸಹಕಾರಿ ಮಂತ್ರಿಯವರಿಗೆ45 ಸಾವಿರ ಓಟುಗಳು ಬಂದು, ಅವರ ವಿರುದ್ಧವಿದ್ದವರಿಗೆ 31 ಸಾವಿರ ಓಟುಗಳು ಬಂತು. ಅಲ್ಲಿ 17 ಸೊಸೈಟಿಗಳನ್ನು ಮಾಡಿದ್ದೀರಿ. ನಾವು ಆ ಸೊಸೈಟಿಯ ಪ್ರಮೋಟರ್‌ಗಳಾಗುವುದಕ್ಕೆ ಅಯೋಗ್ಯರೇನು? ಈ 17 ಸೊಸೈಟಿಯಲ್ಲಿ ನಾವು ಒಬ್ಬರು ಬೇಡವೇ? ನಾನು ಕಾಂಗ್ರೆಸ್ಸೀಕರಣವೆಂದು ಏಕೆ ಹೇಳಿದೆನೆಂದರೆ, ತಾವು ಇದಕ್ಕೆ ಬೇಸರ ಮಾಡಿಕೊಳ್ಳಬೇಡಿ. ನಿಮ್ಮ ಸರ್ಕಾರದಲ್ಲಿ ಕೆಲಸ ಮಾಡುವಂತಹ ಮಂತ್ರಿಗಳು ಯಾರಾದರೂ ಇದ್ದಾರೆಂದರೆ ಅದರಲ್ಲಿ ನೀವೇ ಮೊದಲನೆಯವರಾಗುತ್ತೀರಿ. We have all the appreciation for you. But the political system doesn't allow this kind this kind of a thing and ultimately what is doing to happen? ಬಡವರಿಗೆ ಸಣ್ಣ ರೈತರಿಗೆ, ಒಂದೆರಡು ಎಕರೆ ಜಮೀನು ಇರುವವರಿಗೆ, ನೀರು ಸಿಗುವುದಿಲ್ಲ. They will definitely not get. ಇನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಭೂಮಿ ಇದ್ದರೆ ಅವರಿಗೆ ತಿರುಪತಿ ನಾಮವೇ ಗ್ಯಾರಂಟಿ ನೀವು ಬ್ಯಾಕ್‌ವರ್ಡ್ ಕ್ಲಾಸ್‌ನವರನ್ನು ಮೆಂಬರ್ ಆಗಿ ಮಾಡಿದ್ದೀರಿ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ತಾವೇ ಅದನ್ನು ಹೇಳಿದ್ದೀರಿ. ನಾನು ಅದಕ್ಕೆ ಅಪ್ರಿಸಿಯೇಟ್ ಮಾಡುತ್ತೇನೆ. ಆದರೆ ಅವರಿಗೆ ನೀರು ಸಿಗುವುದಿಲ್ಲ. ಇವತ್ತು ಇಂಜನಿಯರ್‌ಗಳು ಇದ್ದರೆ ಅವರನ್ನು ಎದುರಿಸಿ ಅವರ ಮೇಲೆ ಮೇಲ್ದರ್ಜೆ ಇರುತ್ತದೆ. ಇವತ್ತಿನ ಪೊಲಿಟಿಕಲ್ ಸಿಸ್ಟಂ ಆ ಮಟ್ಟಕ್ಕೆ ಬಂದಿದೆ, ಇದು ಈ ದೇಶದ ದುರ್ದೈವವಾಗಿದೆ. ನಮ್ಮ ಪಕ್ಷದ ರಾಜ್ಯವಾದ ಆಂಧ್ರಪ್ರದೇಶದಲ್ಲಿ "ಜನ್ಮ ಭೂಮಿ" ಎಂಬ ಕಾರ್ಯಕ್ರಮವನ್ನು ಮಾಡಿದರು. This is same according to me. ಇದಕ್ಕೂ ಈ "ಜನ್ಮಭೂಮಿ - ಕಾರ್ಯಕ್ರಮಕ್ಕೂ ಹೆಚ್ಚಿನ ವ್ಯತ್ಯಾಸ ಏನೂ ಇಲ್ಲ. I really appreciate the spirit behind it. But in reality our political system doesn't allow right now for absorbing such a kind of law. ಈ ಕಾರ್ಯಕ್ರಮವನ್ನು ತೆಗೆದುಕೊಂಡು ನಾವು ರೈತರಿಗೆ ಮಾಡುವುದಕ್ಕಾಗುವುದಿಲ್ಲ. ತಮ್ಮ ತಂದೆಯವರು ಸಹಕಾರಿ ಕ್ಷೇತ್ರದಲ್ಲಿ ಏನು ದೊಡ್ಡ ಹೆಸರನ್ನು ಈ ಕರ್ನಾಟಕ ರಾಜ್ಯದಲ್ಲಿ, ಈ ದೇಶದಲ್ಲಿ ತೆಗೆದುಕೊಂಡರು. ಆ ರೀತಿಯಲ್ಲಿ ದೊಡ್ಡ ಹೆಸರು ನಿಮಗೆ ಬರುವುದಾದರೆ ಅದಕ್ಕೆ ನಮಗೆ ಸಂತೋಷವೇ ಮತ್ತೆ ಇದರಿಂದ ನನಗೆ ಹೊಟ್ಟೆಕಿಚ್ಚು ಏನೂ ಇಲ್ಲ. ನಾನು ಅದರ ಬಗ್ಗೆ ಸಂತೋಷ ಪಡುತ್ತೇನೆ. ನಾನು ಇದಕ್ಕೆ ನನ್ನ ಉದಾಹರಣೆಯನ್ನು ಕೊಟ್ಟಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ನನಗೆ ಆಶ್ಚರ್ಯವಾದಂತಹ ಸಂಗತಿ

ಏನಂದರೆ ನಾನು ಕಳೆದ 20 ವರ್ಷಗಳಿಂದ ಆ ಕ್ಷೇತ್ರದ ಶಾಸಕನಾಗಿ ಇದ್ದೇನೆ. ನನಗೆ ವಿರುದ್ಧವಾಗಿ ನಾಲ್ಕೈದು ಘಟಾನುಘಟಿಗಳು ಬಂದಿದ್ದಾರೆ, ಅವರನ್ನು ಜನರು ಸೋಲಿಸಿದ್ದಾರೆ. ಅಲ್ಲಿ ಚೀಫ್ ಪ್ರಮೋಟರ್ ಅನ್ನು ಅಪಾಯಿಂಟ್ ಮಾಡುವಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ. ಇದಕ್ಕೆ ನನ್ನನ್ನು ಕರೆದಿಲ್ಲ. ನನಗೆ ಈ ಪರಿಸ್ಥಿತಿಯಾದರೆ, ಆ ಕಡೆ ಇರುವಂಥ ಶಾಸಕರ ಗತಿ ಏನು? ಎಂದು ನಾನು ಊಹೆ ಮಾಡಿಕೊಳ್ಳುತ್ತೇನೆ. ಅದಕ್ಕೋಸ್ಕರ ತಾವು ದಯಮಾಡಿ you come out of this. ನಮ್ಮ ಕಡೆಯಿಂದ 160, 170 ಸದಸ್ಯರು ಗೆದ್ದಿದ್ದೇವೆ. ಈ ರೀತಿಯ ಕಾನೂನನ್ನು ನಮ್ಮ ಅತ್ಯಂತ ಪ್ರಾಮಾಣಿಕ ವ್ಯಕ್ತಿಯಾದಂತಹ ಶ್ರೀ ಎಸ್.ಎಸ್. ಪಾಟೀಲರವರು ಸಹಕಾರಿ ಕಾಯಿದೆಯನ್ನು ಬಹಳ ಪ್ರಾಮಾಣಿಕವಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಈಗ ನೀವು ನೀರಾವರಿ ಇಲಾಖೆಯ ಮೂಲಕ ಕಾಂಗ್ರೆಸ್ಸೀಕರಣ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ one-sided administration ನಡೆಯುತ್ತಿದೆ, ನಮಗೆ ಅದು ಗೊತ್ತಿದೆ. ಇದನ್ನು ಬೇರೆ ಸನ್ನಿವೇಶದಲ್ಲಿ ಮಾತನಾಡುವಾಗ ಹೇಳುತ್ತೇನೆ. ಇವತ್ತು ತಮ್ಮ ಘನ ಉದ್ದೇಶ ಏನಿದೆ, I appreciate the spirit behind this law. It is worth appreciating. ಇದು ಕರ್ನಾಟಕ ರಾಜ್ಯದಲ್ಲಿ ಯಶಸ್ವಿಯಾದರೆ. Ours is one of the few best governed states in India today. ಕರ್ನಾಟಕ ರಾಜ್ಯ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ಇಂತಹ ಮೂರ್‍ನಾಲ್ಕು ರಾಜ್ಯಗಳನ್ನು ಹೇಳಬಹುದು, ನಾವು ಉತ್ತರ ಪ್ರದೇಶ, ಬಿಹಾರ ರಾಜ್ಯಗಳನ್ನು ಉದಾಹರಣೆಗೆ ತೆಗದುಕೊಳ್ಳುವುದಕ್ಕಾಗುವುದಿಲ್ಲ. If you want to keep one step ahead take this House into confidence. ನೀವು ಈಗ ಕಾನೂನನ್ನು ಪಾಸ್ ಮಾಡುತ್ತೀರಿ, ಅದು ನಮಗೂ ಗೊತ್ತಿದೆ. ಈಗ ರೂಲ್ಸ್ ಏನು ಫ್ರೇಮ್ ಆಗಿತ್ತು ಅದು ಹೋಯಿತು. ಈಗ ತಾವು ರೂಲ್ಸ್ ಫ್ರೇಮ್ ಮಾಡಿ 15,000 ದಿಂದ 20,000 ಸೊಸೈಟಿಗಳನ್ನು ಮಾಡುವವರಿದ್ದೀರಿ. ನಾನು ಈ ರೂಲ್ಸ್, ರೆಗ್ಯುಲೇಷನ್ಸ್‌ಗಳನ್ನು ಡೀಟೈಲ್ ಆಗಿ ಓದುವುದಕ್ಕೆ ಹೋಗಲಿಲ್ಲ. ತಾವು ಒಳ್ಳೆಯ ಉದ್ದೇಶವನ್ನು ಇಟ್ಟುಕೊಳ್ಳಿ, ಒಳ್ಳೆಯ ಹೇಳಿಕೆ ಕೊಟ್ಟಿದ್ದೀರಿ. ಅದು ಕೃಷ್ಣ ಪ್ರಾಜೆಕ್ಟ್ ಅನ್ನು ಒಂದು ವರ್ಷದ ಮುಂಚೆ ಮುಗಿಸುತ್ತೇವೆಂದು ಹೇಳಿದ್ದೀರಿ. ಅದಕ್ಕಿಂತ ಒಳ್ಳೆಯ ಕೆಲಸ ನಮಗೆ ಇನ್ನು ಏನು ಆಗಬೇಕು? ಇದರಿಂದ ದುಡ್ಡು ಉಳಿಯುತ್ತದೆ, ಸಮಯ ಉಳಿಯುತ್ತದೆ. ರೈತರಿಗೆ ಅನುಕೂಲವಾಗುತ್ತದೆ, ಬಚಾವತ್ ಅವಾರ್ಡ್‌ಗೆ ಅನುಕೂಲವಾಗುತ್ತದೆ. ಇನ್ನು ನಮ್ಮ ಉದ್ದೇಶವೇನು? ನೀವು ಬರೀ ಹೇಳುತ್ತೀರಿ, ಕೃತಿಯಲ್ಲಿ ಆಗುತ್ತಿಲ್ಲ. ಅದರ ವಿರುದ್ಧವಾಗಿ ಆಗುತ್ತಿದೆ. ಆದುದರಿಂದ ದಯಮಾಡಿ, we are with you. We also participate. You need participation. After all what is the percentage of votes the Congress got? ಶೇಕಡ 30-35 ರಷ್ಟು ಓಟು ನಿಮಗೆ ಬಂದಿರಬಹುದು, ಕರ್ನಾಟಕದಲ್ಲಿ ಇನ್ನು ಶೇಕಡ 60 ರಷ್ಟು ಓಟು ನಿಮ್ಮ ವಿರುದ್ಧವಾಗಿದೆ, ಅದನ್ನು ತಿಳಿದುಕೊಂಡು ಶೇಕಡ 60ರಷ್ಟು ರೈತರನ್ನು ಕೂಡ ಈ ಕಾನೂನಿನಲ್ಲಿ ಭಾಗಿಗಳನ್ನಾಗಿ ಮಾಡಿಕೊಳ್ಳಬೇಕು.

ಶ್ರೀ ಎಸ್.ಎ.ಐ. ಡೊಂಗರಗಾಂವ್ : ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಶೇಕಡ 50ಕ್ಕಿಂತ ಹೆಚ್ಚಿಗೆ ಮತ ಬಂದಿರುವುದು ಸಾಬೀತಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸಚಿವರು ಈ ಅಂಕಿಅಂಶಗಳನ್ನು ಇಟ್ಟುಕೊಳ್ಳುವಲ್ಲಿ ಬಹಳ ತಜ್ಞರು, ಅವರಿಗೆ ನಗರ ಪ್ರದೇಶದಲ್ಲಿ ಅಷ್ಟು ಪರ್ಸೆಂಟ್ ಓಟಾಗಿಲ್ಲವೆನ್ನುವುದು ಗೊತ್ತಾಗಿಲ್ಲ, ನಾನು ಹೇಳುವುದೇನೆಂದರೆ, ಪಕ್ಷಾತೀತವಾಗಿ ಇದನ್ನು ದಯವಿಟ್ಟು ಕಾರ್ಯಾಚರಣೆಗೆ ತನ್ನಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಕರ್ನಾಟಕ ನೀರಾವರಿ ಹಾಗೂ ಇತರೆ ಕಾನೂನುಗಳ ತಿದ್ದುಪಡಿ ವಿಧೇಯಕದ ಮೇಲೆ ಗಂಭೀರವಾಗಿ ಬಹುದೊಡ್ಡ ಚರ್ಚೆ ನಡೆದಿದೆ. ವಿರೋಧಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್, ಮಾನ್ಯ ಪಿ.ಜಿ.ಆರ್. ಸಿಂಧ್ಯಾ, ಮಾನ್ಯ ಬೈರೇಗೌಡರು, ಮಾನ್ಯ ಎಸ್.ಎಸ್. ಪಾಟೀಲ್, ಮಾನ್ಯ ವೈ.ಕೆ. ರಾಮಯ್ಯ, ಮಾನ್ಯ ಹಂಪನಗೌಡ ಬಾದರ್ಲಿ, ಮಾನ್ ಕರಿಯಣ್ಣ, ಮಾನ್ಯ ಬೋಸ್‌ರಾಜ್, ಮಾನ್ಯ ಮುದ್ದಹನುಮೇಗೌಡ, ಮಾನ್ಯ ಚಂದ್ರಕಾಂತ್ ಬೆಲ್ಲದ್, ಮಾನ್ಯ ಬಚ್ಚೇಗೌಡ, ಮಾನ್ಯ ಪಾಪಣ್ಣ, ಮಾನ್ಯ ಕೆ. ಜಯಪ್ರಕಾಶ್ ಹೆಗ್ಡೆ, ಮಾನ್ಯ ಅರಗ ಜ್ಞಾನೇಂದ್ರ, ಮಾನ್ಯ ಕೆ. ಶ್ರೀನಿವಾಸಗೌಡ, ಮಾನ್ಯ ಪಿ.ಹೆಚ್. ಪೂಜಾರ್, ಮಾನ್ಯ ಬಿ.ಆರ್. ಯಾವಗಲ್, ಮಾನ್ಯ ಹೆಚ್.ಸಿ. ಬಸವರಾಜ್ ಇವರೆಲ್ಲಾ ನಮ್ಮ ತಿದ್ದುಪಡಿ ಮಸೂದೆಯ ಬಗ್ಗೆ ಅವರವರ ಅನುಭವದ ಹಿನ್ನೆಲೆಯಲ್ಲಿ ಸಾಕಷ್ಟು ಸಲಹೆ, ಮಾರ್ಗದರ್ಶನವನ್ನು ಸರ್ಕಾರಕ್ಕೆ ನೀಡಿದ್ದಾರೆ. ಬಹುಶಃ ಇತ್ತೀಚಿನ ದಿನಗಳಲ್ಲಿ, ಕೃಷಿಕರಿಗೆ ಸಂಬಂಧಿಸಿದ ಈ ಮಸೂದೆ, ಇಷ್ಟು ದೀರ್ಘವಾಗಿ ಎಲ್ಲರೂ ಪಾಲ್ಗೊಂಡು, ಸಲಹೆ ಮಾಡಿ, ಸರ್ಕಾರಕ್ಕೆ ಮಾರ್ಗದರ್ಶನ ಮಾಡಿರುವ ಮೊದಲ ಮಸೂದೆ ಇದಾಗಿದೆಯೇನೋ ಎನ್ನುವ ಭಾವನೆ ನನ್ನದಾಗಿದೆ. ಇದರ ಬಗ್ಗೆ ಇಷ್ಟು ಆಸಕ್ತಿಯನ್ನು ವಹಿಸಿದಕ್ಕೆ ಮೊದಲನೆಯದಾಗಿ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರಿಗೆಲ್ಲಾ ಸಲ್ಲಿಸುತ್ತೇನೆ. ಈ ಒಂದು ಮಸೂದೆ ತರುವ ಉದ್ದೇಶದ ಕುರಿತು ನಾನು ಮೊದಲು ಪ್ರಸ್ತಾಪ ಮಾಡಿದೆ. ಬಹುಶಃ ಎಲ್ಲರೂ ತಮ್ಮ ಒಪ್ಪಿಗೆಯನ್ನು ಈ ಬಗ್ಗೆ ವ್ಯಕ್ತ ಮಾಡಿದ್ದಾರೆ. ಇನ್ನು ಎರಡು ವಿಚಾರಗಳ ಬಗ್ಗೆ ನಾನು ಹೇಳುವುದಾದರೆ, ಈ ಸಹಕಾರ ಕ್ಷೇತ್ರ ಪವಿತ್ರವಾದ ಕ್ಷೇತ್ರ, ಕರ್ನಾಟಕ ರಾಜ್ಯದ ರೈತರಿಗೆ ಸಂಘಟನೆಯ ವಿಷಯವೇನಾದರೂ ಗೊತ್ತಿದೆ ಎಂದರೆ ಅದು ಸಹಕಾರ ಕ್ಷೇತ್ರ, ಸಹಕಾರ ಸಂಘಗಳು, ಮತ್ತೆ ಯಾವ ವ್ಯವಸ್ಥೆಯ ಬಗ್ಗೆ ಅವರಿಗೆ ಸಂಪೂರ್ಣ ಅರಿವು ಮೂಡಿಲ್ಲ. ಈ ಬಗ್ಗೆ ಸಹಕಾರ ಕ್ಷೇತ್ರದ ಮೂಲಕ ರೈತರ ಕಲ್ಯಾಣಕ್ಕೆ ಈ ದಾಪುಗಾಲನ್ನು ಹಾಕುತ್ತಿದ್ದೇವೆ. ಈಗ ಎಲ್ಲ ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟಂತೆ, ನೀರಾವರಿ, ಒಂದು ಅಡಾಪ್ಟ್ ಆಧಾರದ ಮೇಲೆ ನಡೆಯುತ್ತಿದೆ. ಬಹಳ ಸದಸ್ಯರ ಅನುಭವಕ್ಕೆ ಬಂದಂತೆ, ಅಲ್ಲಿ ಯಾರು ಗೇಟ್ ತೆಗೆಯುತ್ತಾನೆ, ಅವನು ಸರ್ಕಾರಿ ನೌಕರನಲ್ಲ, ಗುತ್ತಿಗೆದಾರನಲ್ಲ, ಯಾವುದೋ ಹೆಸರಿನಲ್ಲಿ ಅಲ್ಲಿ ಕೆಲಸದಲ್ಲಿದ್ದಾನೆ, ಅವನ ಜವಾಬ್ದಾರಿಯನ್ನು ಗುರುತಿಸುವುದಕ್ಕೆ ಹೋದರೆ ಸಾಧ್ಯವಾಗುವುದಿಲ್ಲ. ನಾವು ಇವತ್ತು ಒಟ್ಟು ಎಷ್ಟು ನೀರನ್ನು ಬಿಟ್ಟಿದ್ದೇವೆ, ಅದರಿಂದ ಒಟ್ಟು ಪ್ರಯೋಜನ ಎಷ್ಟಾಗಿದೆ ಎಂದು ಲೆಕ್ಕಾ ಹಾಕುವುದಕ್ಕೆ ಹೋದರೆ, ನಿಜವಾಗಿಯೂ ಕೂಡ ಎಲ್ಲರಿಗೂ ವೇದನೆಯಾಗುವಂತಹ ವ್ಯವಸ್ಥೆ ಇದೆ. ಒಟ್ಟು ಎಷ್ಟು ನೀರಾವರಿ ಸಾಮರ್ಥ್ಯವನ್ನು ನಿರ್ಮಾಣ ಮಾಡಿದ್ದೇವೆ ಎನ್ನುವ ಅಂಕಿ ಅಂಶವನ್ನು ನಾನು ಮಂತ್ರಿಯಾಗಿ ಬಹಳ ಅಂಜಿಕೆಯಿಂದ

ಹೇಳಬೇಕಾಗುತ್ತದೆ. ಏಕೆಂದರೆ, ನಾವು ಎಷ್ಟು ನೀರಾವರಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿದ್ದೇವೆ ಅದು ಹೊಲಗಳಿಗೆ ಹೋಗಿ ಮುಟ್ಟಿದೆಯೋ ಇಲ್ಲವೋ ಎನ್ನುವ ಅಂಕಿ ಅಂಶ ಇಲ್ಲದಿರುವ ಒಂದು ವ್ಯವಸ್ಥೆ ನಮ್ಮ ರಾಜ್ಯದಲ್ಲಿದೆ. ನಿಜ, ನಾವು ಬೃಹತ್ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ, ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಣೆಕಟ್ಟುಗಳನ್ನು ಕಟ್ಟಿದ್ದೇವೆ, ಕಾಲುವೆಗಳನ್ನು ಕಟ್ಟಿದ್ದೇವೆ. ಆದರೆ ಅಲ್ಲಿ ಮೈನರ್ಸ್ ಇಲ್ಲ, ಸಬ್-ಡಿಸ್ಟ್ರಿಬ್ಯೂಟರ್ಸ್ ಇಲ್ಲ, ಫೀಲ್ಡ್ ಚಾನಲ್ಸ್ ಇಲ್ಲ, ಯಾವ ಪ್ರದೇಶಕ್ಕೆ ನಾವು ನೀರು ಕೊಡುತ್ತೇವೆ, ಅಲ್ಲಿ ಭೂ ಅಭಿವೃದ್ಧಿ ಮಾಡುವ ಕೆಲಸವನ್ನು ಮಾಡುವುದಕ್ಕಾಗಲಿಲ್ಲ. ಇದಕ್ಕೆಲ್ಲಾ ಕಾರಣವೇನೆಂದರೆ, ಯಾರು ನೀರು ಬಳಕೆದಾರರಾಗಬೇಕಾಗಿತ್ತೋ, ಅವರು ಈ ವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಯಾವುದೇ ಆಸಕ್ತಿಯನ್ನು ತೆಗೆದುಕೊಳ್ಳಲಿಲ್ಲ. ಅಧಿಕಾರಿಶಾಹಿ ಎಷ್ಟು ಕೆಲಸ ಮಾಡಬೇಕೋ ಅಷ್ಟು ಮಾಡುತ್ತಾ ಬಂದರು, ಹಣ ಖರ್ಚಾಯಿತು, ಆದರೆ ನೀರಿನ ಉಪಯೋಗವಾಗಲಿಲ್ಲ. ಆದುದರಿಂದ ಅದರ ಪ್ರಯೋಜನ ಪಡೆಯುವವರ ಪಾಲ್ಗೊಳ್ಳುವಿಕೆಯಿಂದ ಯಾವುದೇ ಒಂದು ಯೋಜನೆ ಯಶಸ್ವಿಯಾಗುವುದಕ್ಕೆ ಸಾಧ್ಯವಿದೆ. ಆ ರೀತಿಯಲ್ಲಿ ಇದು ಸಫಲತೆಯಾಗಬೇಕೆನ್ನುವ ಕನಸನ್ನು ಕಂಡು ಈ ಒಂದು ಮಸೂದೆಯನ್ನು ಇವತ್ತು ತಮ್ಮ ಮುಂದೆ ತಂದಿದ್ದೇನೆ. ಹಿರಿಯ ಸದಸ್ಯರಾದ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು, ಮಾನ್ಯ ಸಿ. ಬೈರೇಗೌಡರು, ಮಾನ್ಯ ಕೆ. ಶ್ರೀನಿವಾಸಗೌಡರವರು ಸ್ವಲ್ಪಮಟ್ಟಿಗೆ ಕಟುವಾಗಿ ಹಾಗೂ ಖಾರವಾಗಿ ಮಾತನಾಡಿ ಈ ಮಸೂದೆಯ ಮೂಲಕ ನಾವು ಕಾಂಗ್ರೆಸ್ಸೀಕರಣ ಮಾಡುವುದಕ್ಕೆ ಹೊರಟಿದ್ದೇವೆಂದು ಹೇಳಿದರು. ಮಾನ್ಯ ಸದಸ್ಯರಾದ ಪಿ.ಹೆಚ್. ಪೂಜಾರ್‌ರವರು, ಈ ಸಹಕಾರ ಸಂಘ ಬೇಡ, ರಿಜಿಸ್ಟರ್ಡ್ ಸೊಸೈಟಿ ಮಾಡಿ ಎಂದು ಹೇಳಿದರು. ಯಾವ ಕಾರಣಕ್ಕಾಗಿ ನಿಮಗೆ ಆ ಕಲ್ಪನೆ ಬಂತೋ ಗೊತ್ತಿಲ್ಲ, ತಾವು ಗ್ರಾಮಾಂತರ ಪ್ರದೇಶದಿಂದ ಬಂದವರು. ಈ ಕಾನೂನು ಯಾವತ್ತು ನಾವು ಆರ್ಡಿನೆನ್ಸ್ ಮಾಡಿದೆವು ಆವತ್ತಿನಿಂದಲೇ ಬರಲಿಲ್ಲ, ಮಾನ್ಯ ಸಿಂಧ್ಯಾರವರೆ 1995ರಲ್ಲಿ ಈ ನೀರಾವರಿ ಕಾನೂನಿಗೆ ತಿದ್ದುಪಡಿಯನ್ನು ತಂದು, ಸಹಕಾರಿ ಸಂಸ್ಥೆಯನ್ನಾದರೂ ಮಾಡಬಹುದು ಇಲ್ಲವೇ ನೀರು ಬಳಕೆದಾರರ ಸಂಘವೆಂದು ರಿಜಿಸ್ಟರ್ಡ್ ಸೊಸೈಟಿ ಯಾದರೂ ಮಾಡಬಹುದು, ಅದು ಅಸ್ತಿತ್ವದಲ್ಲಿತ್ತು. ಆದರೆ ಈ ಐದು ವರ್ಷಗಳ ಅವಧಿಯಲ್ಲಿ ಎಷ್ಟು ಹೊಸ ಸಂಸ್ಥೆಗಳನ್ನು ಹುಟ್ಟುಹಾಕುವುದಕ್ಕೆ ಸಾಧ್ಯವಾಯಿತು? ಏತಕ್ಕೆ ರೈತರು ಆ ಸಹಕಾರಿ ಸಂಸ್ಥೆಗಳನ್ನು ಕಟ್ಟಲಿಲ್ಲ, ಅಥವಾ ರಿಜಿಸ್ಟರ್ಡ್ ಸೊಸೈಟಿಗಳನ್ನು ಮಾಡಲಿಲ್ಲ? ನಾವು ಏನು ಮಾಡಿದೆವು ಎಂದರೆ, ಪ್ರಚಾರಕ್ಕೆ ಬೇಕಾದಷ್ಟು ಕಾನೂನುಗಳನ್ನು ತಂದೆವು, ಅದು ಸರಿಯಲ್ಲ ಬೇಡವೆಂದು ಅಧಿಕಾರಿಗಳ ಒತ್ತಡ ಒಂದು ಕಡೆ ಇತ್ತು, ಅವರೇ ಮಧ್ಯೆ ತಾವೇನು ಕಾನೂನು ತಿದ್ದುಪಡಿಯನ್ನು ತಂದು ನಮ್ಮ ಒಪ್ಪಿಗೆಯನ್ನು ಪಡೆದುಕೊಂಡಿದ್ದೀರಿ, ಅದು ಕೇವಲ ಕಡತದಲ್ಲಿ ಉಳಿಯಿತೇ ಹೊರತು ಸಹಕಾರಿ ಸಂಸ್ಥೆಗಳು ಬರಲಿಲ್ಲ, ಯಾವುದೇ ರಿಜಿಸ್ಟರ್ಡ್ ಸೊಸೈಟಿಗಳು ಬರಲಲ್ಲ. ಆದ್ದರಿಂದ ಈಗ ನಾವು ಈ ತಿದ್ದುಪಡಿಯನ್ನು ಸುಗ್ರೀವಾಜ್ಞೆ ಮುಖಾಂತರ ತಂದಿದ್ದೇವೆ. ಇದರಲ್ಲಿ ಮೂಲಭೂತವಾಗಿರುವ ಅಧಿಕಾರವನ್ನು ರೈತರಿಗೆ ಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ಆ ಸೊಸೈಟಿ ಹೇಗೆ ನೋಂದಣಿಯಾಗಬೇಕು. ಅದು ಹೇಗೆ ನಡೆಯಬೇಕೆನ್ನುವುದು ಮಹತ್ವದ ವಿಚಾರವಲ್ಲ. Through this amendment we are empowering the farmers. ರೈತರಿಗೆ ಅಧಿಕಾರವನ್ನು ಕೊಡುವುದನ್ನು ಕಾನೂನಾತ್ಮಕವಾಗಿ, ನಾವು

ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತ ಮಾಡಿದ ಮೇಲೆ ಈ ಮಸೂದೆಯನ್ನು ತಂದಿದ್ದೇವೆ. ಮಾನ್ಯ ಸದಸ್ಯರಾದ ಸಿಂಧ್ಯಾರವರು ಇದನ್ನು ಮಾಡುವುದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕೆಂದು ಹೇಳಿದರು, ಅಧಿಕಾರ ವಿಕೇಂದ್ರೀಕರಣದ ಮೂಲಕ ನಾವು ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ಇವತ್ತು ವ್ಯಕ್ತ ಮಾಡಿದ್ದೇವೆ. ಇದರಿಂದಾಗಿ ಇವತ್ತು ನಮ್ಮ ರಾಜ್ಯದಲ್ಲಿ ಸೊಸೈಟಿಗಳನ್ನು ಮಾಡುವುದಕ್ಕೆ ಪೈಪೋಟಿ, ಚೀಫ್-ಪ್ರಮೋಟರ್ ಆಗುವುದಕ್ಕೆ ಪೈಪೋಟಿ ಆಗುತ್ತಿದೆ. ಆದರೆ ನಾನು ಇವತ್ತು ಒಂದು ಅಂಶವನ್ನು ಪ್ರಾಮಾಣಿಕವಾಗಿ ತಮ್ಮ ಮುಂದೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಏಕೆಂದರೆ ಅದನ್ನು ಬಹಳಷ್ಟು ಟೀಕೆ ಮಾಡುವುದಕ್ಕೆ ನಮ್ಮ ಹಲವು ಮಿತ್ರರು ಈ ಸಂದರ್ಭದಲ್ಲಿ ಉಪಯೋಗ ಮಾಡಿಕೊಂಡಿದ್ದಾರೆ. ನಾನು ಸಹಕಾರ ಕ್ಷೇತ್ರದಲ್ಲಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಪವರ್, ಜಾಯಿಂಟ್ ರಿಜಿಸ್ಟ್ರಾರ್‌ರವರ ಪವರ್ ಏನಿದೆ ಅದನ್ನು ನಮ್ಮ ಕಾಡಾ ಅಧಿಕಾರಿಗಳಿಗೆ, ಇರಿಗೇಷನ್ ಆಫೀಸರ್ಸ್‌ಗೆ ಇವತ್ತು ವರ್ಗಾಯಿಸಿಕೊಂಡಿದ್ದೇವೆ. We have delegated those powers from Co-operation Department to these Irrigation Officers who are called LDOs.ಅವರಿಗೆ ನಾನು ಒಂದು ನಿರ್ದೇಶನವನ್ನು ಕೊಟ್ಟಿದ್ದೇನೆ. ಅದೇನೆಂದರೆ - "ನೀವು ರಿಜಿಸ್ಟರ್ ಮಾಡತಕ್ಕಂಥ ಸಂದರ್ಭದಲ್ಲಿ ರಾಜಕೀಯ ಒತ್ತಡಕ್ಕೆ ಒಳಗಾಗಬಾರದು, ನೀವು ಯಾವುದೇ ಕಾರಣಕ್ಕೆ ನಿಮ್ಮ ಮನಸ್ಸಿಗೆ ಬಂದಂತೆ ರಿಜಿಸ್ಟರ್ ಮಾಡಬಾರದು, ನಿಮಗಾಗಿ ಕೆಲವು ಸೂಚನೆಗಳನ್ನು ಕಳುಹಿಸಿಕೊಡುತ್ತೇನೆಂದು ಹೇಳಿ ಅವರಿಗೆ ಸೂಚನೆಯನ್ನು ಕಳುಹಿಸಿ, ಯಾರು ಫಸ್ಟ್ ಪ್ರಪೋಸಲ್ ತಂದು ಕೊಡುತ್ತಾರೆ ಅವರಿಗೆ ಪ್ರಯಾರಿಟಿ ಕೊಡಬೇಕು, ಯಾರು ಹೆಚ್ಚು ಜನ ಸದಸ್ಯರು ಕೂಡಿಕೊಂಡು ಆ ಅಚ್ಚುಕಟ್ಟು ಪ್ರದೇಶದೊಳಗೆ ಚೀಫ್-ಪ್ರಮೋಟರನ್ನು ಆಯ್ಕೆ ಮಾಡಿರುತ್ತಾರೋ ಅವರಿಗೆ ತಮ್ಮ ಪ್ರಾಧಾನ್ಯತೆ ಕೊಡಬೇಕು. ಯಾರು ನೈಜವಾಗಿ ಕೃಷಿಕ ಇರುತ್ತಾನೋ ಅವನಿಗೆ ನೀವು ಆದ್ಯತೆ ಕೊಡಬೇಕು, ಜೊತೆಗೆ the proposal should not be finalised on political grounds. ಹೀಗೆ ಸುಮಾರು 5 ನಿರ್ದೇಶನಗಳನ್ನೊಳಗೊಂಡು ಈ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಆದರೆ ಇದನ್ನು ಮಾಡುವಾಗ ಏನಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ನಾನು ಕಾವೇರಿ ಅಚ್ಚುಕಟ್ಟು ಪ್ರದೇಶದ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತೇನೆ. ಏಕೆಂದರೆ ಈ ಮಸೂದೆಯನ್ನು ಸಂಪೂರ್ಣವಾಗಿ ತರಬೇಕೆಂದು ಹೇಳಿ ನನ್ನ ಇಚ್ಛಾಶಕ್ತಿಯನ್ನು ವ್ಯಕ್ತಮಾಡಿ ನಮ್ಮ ಎಲ್ಲಾ ಹಿರಿಯ ಮಂತ್ರಿಮಂಡಲದ ಸದಸ್ಯರ ಜೊತೆಗೆ ಮಾತನಾಡುವಾಗ, ಅನೇಕ ವಿರೋಧಪಕ್ಷದ ನಾಯಕರ ಜೊತೆಗೆ ಮಾತನಾಡುವಾಗ - "ಏನ್ರೀ, ಪಾಟೀಲರೆ, ನಿಮ್ಮ ಮುಂಬೈ ಕರ್ನಾಟಕದೊಳಗೆ ಸಹಕಾರ ಸಂಘಗಳ ಬಗ್ಗೆ ಸ್ವಲ್ಪಮಟ್ಟಿಗೆ ವಿಶ್ವಾಸವಿದೆ, ನಿಮ್ಮ ಕಡೆ ಏನೋ ಆಗಬಹುದು, ನಮ್ಮ ಕಡೆಯೆಲ್ಲ ಸಹಕಾರಿ ಸಂಘಗಳು ಅಷ್ಟು ಚೆನ್ನಾಗಿ ಆಗುವುದಿಲ್ಲ, ಹಾಗೆ ಹೀಗೆ" ಎಂದು ಬಹಳ ಲಘುವಾಗಿ ಟಿಪ್ಪಣಿ ಮಾಡಿ ಮುಗಿಸಿಬಿಡುತ್ತಿದ್ದರು. ಆದರೆ ವಾಸ್ತವಿಕವಾಗಿ ನಮ್ಮ ಈ ಮಸೂದೆಯ ಹಿನ್ನೆಲೆಯೊಳಗೆ, ನಮ್ಮ ಸರ್ಕಾರದ ಪ್ರಯತ್ನದ ಹಿನ್ನೆಲೆಯಲ್ಲಿ ಈ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿನ ರೈತರು ಸಾಕಷ್ಟು ಮಟ್ಟದ ಆಸಕ್ತಿಯನ್ನು ವ್ಯಕ್ತಮಾಡಿದ್ದಾರೆ. ಯಾವುದೇ ಅಚ್ಚುಕಟ್ಟು ಪ್ರದೇಶದೊಳಗೆ ಒಂದು ಸರ್ಕಾರಿ ಸಂಸ್ಥೆಯನ್ನು ಮಾಡಬೇಕಾದರೆ ಕಾಡಾದವರು ಈ ರೀತಿಯಾಗಿ ಇರುವಂಥ ಪಾಂಪ್ಲೆಟ್ಸನ್ನು ಹೊರಡಿಸುತ್ತಾರೆ. ದಯಮಾಡಿ ತಾವೆಲ್ಲ ಒಂದು ವಿಷಯವನ್ನು ಇಲ್ಲಿ ಗಮನಿಸಬೇಕು. ಹಳ್ಳಿಯ ಮೇಲೆ ಅವಲಂಬಿತ

ಅಥವಾ ಹಳ್ಳಿಯ ಸಹಕಾರ ಸಂಘ ಇವು ಅಲ್ಲ. ಇವು ಚಾನಲ್-ಬೇಸ್ಡ್ ಸೊಸೈಟಿಗಳು, ಕಮಾಂಡ್ ಏರಿಯಾ ಬೇಸ್ಡ್ ಸೊಸೈಟಿಗಳು ಇವು. ಇವು ನೀರಾವರಿ ವ್ಯಾಪ್ತಿಗೆ ಬರತಕ್ಕಂಥ ಸೊಸೈಟಿಗಳು ಆಗುತ್ತವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವಾಗ 'ಕಾಂಗ್ರೆಸ್ಸೀಕರಣ' ಎನ್ನುವ ಕಟುವಾದ ಶಬ್ದವನ್ನು ಏಕೆ ಹೇಳಿದೆನೆಂದರೆ, ಇತ್ತೀಚೆಗೆ ಕೆಲವು ಕಡೆಗಳಲ್ಲಿ ಹೊಸದಾಗಿ ಮಿಲ್ಕ್ ಸೊಸೈಟಿಗಳನ್ನು ಮಾಡುತ್ತಿದ್ದಾರೆ. ಆ ಮಿಲ್ಕ್ ಸೊಸೈಟಿಗಳಿಗೆ ಚೀಫ್-ಪ್ರಮೋಟರನ್ನು ಮಾಡಿ ಷೇರುಗಳನ್ನು ಕಲೆಕ್ಟ್ ಮಾಡುವಾಗ ಅದೆಲ್ಲವೂ ಸಹಿತ ಪೇಪರ್ ಮೇಲೆ ಇರುತ್ತದೆಯೇ ಹೊರತು ಅಲ್ಲಿ ನಿಮಗೆ ಯಾರೂ ಕನ್‌ವಿನಿಯೆಂಟ್ ಆಗುವುದಿಲ್ಲವೋ ಅಂಥ ಒಬ್ಬರನ್ನೂ ಸಹಿತ ಅಲ್ಲಿ ನೀವು ಸೇರಿಸಿಕೊಳ್ಳುತ್ತಿಲ್ಲ. ಇದು ರಿಜಿಸ್ಟರ್ ಆಗಿ ಬಂದಿರುತ್ತದೆ, ಚೀಫ್-ಪ್ರಮೋಟರ್ ಇರುತ್ತಾರೆ. ಹಾಗಾದರೆ ಹೇಗೆ ಇದನ್ನು ತಡೆಗಟ್ಟಬಹುದು ಎನ್ನುವುದಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ. ಒಂದು ಕೆಲಸ ಮಾಡಬೇಕು, ಅದೇನೆಂದರೆ - ಈಗ ಕಾಲುವೆಗೆ ಸಂಬಂಧಪಟ್ಟ ಹಾಗೆ, ಅಚ್ಚುಕಟ್ಟು ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಯಾರ್‍ಯಾರು ಜಮೀನ್ದಾರರು ಇದ್ದಾರೆ ಅವರಿಗೆಲ್ಲ ಸದಸ್ಯತ್ವ ಕೊಡಿ ಮತ್ತು ಸರ್ಕಾರದಿಂದಲೇ ಆ ದುಡ್ಡನ್ನು ಕೊಟ್ಟುಬಿಡಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಎಲ್ಲರನ್ನೂ ಸದಸ್ಯರನ್ನಾಗಿ ಮಾಡಬೇಕು ಮತ್ತು ಸದಸ್ಯರ ದುಡ್ಡನ್ನು ಸರ್ಕಾರ ತುಂಬಬೇಕೆಂದು ಮಾನ್ಯ ಸಿಂಧ್ಯಾ ಅವರು ಒಂದು ಸಲಹೆಯನ್ನು ಮಾಡಿದರು. ಪುಕ್ಕಟೆಯಾಗಿ ಮೆಂಬರನ್ನಾಗಿ ಮಾಡಿದರೆಂದರೆ ಯಾರೂ ಆಸಕ್ತಿ ತೆಗೆದುಕೊಳ್ಳದೆ ಆ ಇನಿಷಿಯೇಟಿವ್ ಏನಿದೆ, ಆ ಇನಿಷಿಯೇಟಿವ್ ಕಡಿತವಾಗಿ ಹೋಗುತ್ತದೆ. ಆದರೆ ಈ ಸಂದರ್ಭದಲ್ಲಿ ನಾನು ನಿಮ್ಮ ಆ ಒಂದು ಮಾತನ್ನು ಒಪ್ಪುತ್ತೇನೆ. Nobody will take interest. I will send direction. Even in rules we can make suitable phrase.ಯಾರು ಅಚುಕಟ್ಟು ಪ್ರದೇಶದಲ್ಲಿ, ಆ ಸೊಸೈಟಿ ವ್ಯಾಪ್ತಿಯಲ್ಲಿ ಬರತಕ್ಕಂಥಾವರು ಇದ್ದಾರೋ ಆ ರೈತ ಆ ಸೊಸೈಟಿಯಲ್ಲಿ ಸದಸ್ಯನಾಗುವುದಕ್ಕೆ ಹಕ್ಕು ಪಡೆಯುತ್ತಾನೆ. He gets natural right. ರೂಲ್ಸ್‌ನಲ್ಲಿ ಅದನ್ನು ಸ್ಪೆಸಿಫಿಕ್ ಆಗಿ ಮಾಡುತ್ತೇನೆ. It is there in our Co-operative Act. But what I will do, I will specifically say, right to be a member in that society in that particular area of operation.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಎಸ್.ಸಿ/ಎಸ್.ಟಿ. ಮೆಂಬರ್ಸ್‌ಗೆ ಸರ್ಕಾರವೇ ಆ ಅಮೌಂಟನ್ನು ಕೊಟ್ಟು ಮೆಂಬರ್‌ಷಿಪ್ ಮಾಡಿಸಿಕೊಳ್ಳಬೇಕು ಎನ್ನುವುದನ್ನು ತಂದಿದ್ದರು. ಒಂದು ವರ್ಷ ಕಳೆದರೂ ಇಲ್ಲಿಯವರೆಗೆ ಒಂದು ರೂಪಾಯಿ ಕೂಡ ರಿಲೀಸ್ ಮಾಡಿಲ್ಲ. ತಾವು ಏನು ಸಲಹೆ ಕೊಡುತ್ತಿದ್ದೀರಿ ಅದನ್ನು ನಾವು ಒಪ್ಪತಕ್ಕಂಥಾದ್ದು. ಒಂದು ವೇಳೆ ನೀವು ಈ ರೂಲ್ಸನ್ನು ತರುವುದಾದರೆ, ಆ ಅಚ್ಚುಕಟ್ಟು ನಾಲಾ ಬೇಸ್ಡ್ ಸೊಸೈಟಿಗಳು ಎಂದು ಹೇಳಿದಿರಿ, ಅದರ ಜೊತೆಗೆ ಜ್ಯೂರಿಡಿಕ್ಷನಲ್ ಬೆನಿಫಿಷಿಯರೀಸ್ ಯಾರು ಇದ್ದಾರೆ invariably everybody will become a member. ಎಸ್‌ಸಿ/ಎಸ್‌ಟಿಗಳಿಗೆ ಸರ್ಕಾರವೇ ನೇರವಾಗಿ ಸದಸ್ಯತ್ವ ಕೊಟ್ಟು ಎಲ್ಲರನ್ನು ಸದಸ್ಯರನ್ನಾಗಿ ಮಾಡಿ ಷೇರ್ ಕೊಡತಕ್ಕಂಥಾದ್ದನ್ನು ರೂಲ್ಸ್‌ನಲ್ಲಿ ತರುತ್ತೇವೆ ಎನ್ನತಕ್ಕಂಥ ಕಮಿಟ್‌ಮೆಂಟ್ ಮಾಡಿದರೆ ಬಹುಶಃ ನಾವು ಏನೂ ಅದರ ಬಗ್ಗೆ ವಿರೋಧ ಮಾಡುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಾನು ಈ ಕಾವೇರಿ ಪ್ರಾಧಿಕಾರದ ವಿಷಯವಾಗಿ ಹೇಳುತ್ತೇನೆ. ನಮ್ಮ ಅಧಿಕಾರಿಗಳು ಆ ಭಾಗದಲ್ಲಿ ಆಗತಕ್ಕಂಥ ಈ ಪೈಪೋಟಿಯ ಹಿನ್ನೆಲೆಯಲ್ಲಿ ಕಾವೇರಿ ಕಾಡಾ ಒಂದು ನಿರ್ಣಯ ತೆಗೆದುಕೊಂಡಿತು. ಅದೇನೆಂದರೆ - "ಈ ಪ್ರದೇಶ ಯಾವ ಗ್ರಾಮಕ್ಕೆ ಬರುತ್ತದೋ ಆ ಗ್ರಾಮ ಸಭೆಯಲ್ಲಿ ಈ ಚೀಫ್ ಪ್ರಮೋಟರ್ ಹೆಸರನ್ನು ಆಯ್ಕೆ ಮಾಡಬೇಕು". ಅದನ್ನು ಮಲಪ್ರಭಾ ಕಾಡಾ, ಕೃಷ್ಣ ಕಾಡಾದಲ್ಲಿ ಮಾಡಿದ್ದಾರೆಂದು ಹೇಳುವುದಿಲ್ಲ. ಅಲ್ಲಿ ಈ ಪದ್ಧತಿಯನ್ನು ನಾವು ಅಳವಡಿಸಿಲ್ಲ. ಆದರೆ ಇಲ್ಲಿ ಮಾತ್ರ ಗ್ರಾಮ ಸಭೆಯಲ್ಲಿ ಚೀಫ್ ಪ್ರಮೋಟರನ್ನು ಆಯ್ಕೆ ಮಾಡತಕ್ಕಂಥ ನಿಯಮವನ್ನು ಮಾಡಿದರೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದರ ಜೊತೆಗೆ ಇನ್ನು ಬರತಕ್ಕಂಥ ದಿನಗಳಲ್ಲಿ ರಿಜಿಸ್ಟರ್ ಮಾಡುವಂಥ ಸಂದರ್ಭದಲ್ಲಿ ಮಲಪ್ರಭಾ, ಘಟಪ್ರಭಾ ಕಾಡಾ, ಕೃಷ್ಣಾ ಕಾಡಾ, ಭದ್ರ ಕಾಡಾ ಹೀಗೆ ಎಲ್ಲಾ ಕಡೆ ಆ ಗ್ರಾಮ ಸಭೆಯಲ್ಲಿಯೇ ಚೀಫ್ ಪ್ರಮೋಟರನ್ನು ಆಯ್ಕೆ ಮಾಡುವಂತೆ ಅವರು ಮುತುವರ್ಜಿ ವಹಿಸಬೇಕು, ನಮ್ಮ ಆಫೀಸರ್ ಪ್ರೆಸೆನ್ಸ್‌ನೊಳಗೆ ಈ ರೀತಿಯಾಗಿರತಕ್ಕಂಥ ಚೀಫ್ ಪ್ರಮೋಟರ್ ಆಯ್ಕೆ ಆಗುವ ಹಾಗೆ ಸರ್ಕಾರ ನಿಗಾ ವಹಿಸುತ್ತದೆ ಎಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯಉಪಾಧ್ಯಕ್ಷರೆ, ಗ್ರಾಮಸಭೆಯಲ್ಲಿಯೇ ಚೀಫ್ ಪ್ರಮೋಟರನ್ನು ಆಯ್ಕೆ ಮಾಡಲಾಗುವುದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಗ್ರಾಮಸಭೆಯನ್ನು ಪ್ರಾರಂಭಿಸಿದ ಮೂಲ ಉದ್ದೇಶ ಏನು ಇದೆ ಅದು ನಿಜವಾಗಿಯೂ ಎಲ್ಲೂ ಪ್ರಾಕ್ಟಿಕಲ್ ಆಗಿ ಆಗುತ್ತಿಲ್ಲ. ಈ ಸಹಕಾರಿ ಸಂಘಕ್ಕೆ ಮುಖ್ಯವಾಗಿ ಚೀಫ್-ಪ್ರಮೋಟರನ್ನು ಆಯ್ಕೆ ಮಾಡುವಂಥದ್ದರ ಬಗ್ಗೆ ತಾವು ಈಗ ಹೇಳಿದಿರಿ, ಆದರೆ ಅಲ್ಲಿ ಗ್ರಾಮಸಭೆ ನಡೆಯುವುದಿಲ್ಲ, ಯಾರ ಅಧಿಕಾರಿಗಳೂ ಮುತುವರ್ಜಿ ವಹಿಸುವುದಿಲ್ಲ. ಇದು ಪ್ರಾಕ್ಟಿಕಲಿ ಆಗುತ್ತಿಲ್ಲ. ಇಲ್ಲಿ ಕೂಡ ಆಗುವೆಂಥಾದ್ದು ಸಹ ಅದೇ ಆಗಿದೆ. ಗ್ರಾಮ ಸಭೆಯಲ್ಲಿ ನಡೆದಂತೆ ಒಂದು ರೆಕಾರ್ಡ್ ಮಾಡಿಕೊಂಡು ಅದನ್ನು ಸಬ್‌ಮಿಟ್ ಮಾಡುತ್ತಾರೆ ಅಷ್ಟೆ. ಇಲ್ಲಿ ಏನೂ ಆಗುವುದಿಲ್ಲ. ನಾನು ಬಹಳಷ್ಟು ಗ್ರಾಮಸಭೆಗಳನ್ನು ನೋಡಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಅಚ್ಚುಕಟ್ಟು ಪ್ರದೇಶದ ರೈತರಿಗೆಲ್ಲ, ಇಂಥ ಸ್ಥಳದಲ್ಲಿ ಗ್ರಾಮಸಭೆ ನಡೆಸುತ್ತೇವೆಂದು ಸಂಬಂಧಪಟ್ಟ ಅಧಿಕಾರಿಗಳೇ ನೋಟೀಸ್ ಕೊಟ್ಟುಬಿಡಲಿ. ಎಷ್ಟು ಜನರು ಅಲ್ಲಿ ಸೇರುತ್ತಾರೋ ಅವರುಗಳೇ ಚೀಫ್ ಪ್ರಮೋಟರನ್ನು ಆಯ್ಕೆ ಮಾಡಿಕೊಳ್ಳಲಿ. ಅಲ್ಲಿಯೇ ಸೇರಿರತಕ್ಕಂಥ ಯಾರನ್ನೋ ಎಳೆದುಕೊಂಡು ಹೋಗಿ ಕೂರಿಸಿಕೊಂಡು ಚೀಫ್ ಪ್ರಮೋಟರನ್ನು ಆಯ್ಕೆ ಮಾಡುವಂಥಾದ್ದು ನಡೆಯುತ್ತಿದೆ.

5.40 ಪಿ.ಎಂ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮೊದಲು ಯಾವ ರೀತಿ ಇತ್ತು ಎಂದರೆ ಚೀಫ್-ಪ್ರಮೋಟರ್ ಯಾರು ಆಗಿದ್ದಾರೋ ಅವರೇ ಫಸ್ಟ್ ಚೇರ್‌ಮನ್ ಆಗಿರುತ್ತಿದ್ದ. ಆದರೆ ನಮ್ಮ ಈ ಕಾನೂನಿನಲ್ಲಿ, ಬೈಲಾದಲ್ಲಿ ಆ ರೀತಿ ಇಲ್ಲ. ಚೀಫ್ ಪ್ರಮೋಟರ್ ನಾನಿರಬಹುದು, ಆದರೆ ಆ ಅಚ್ಚುಕಟ್ಟು ಪ್ರದೇಶದೊಳಗೆ ಏನು ಸದಸ್ಯರು ಸೇರುತ್ತಾರೆ ಅವರು ಕಮಿಟಿ ಚೇರ್‌ಮನ್‌ನ್ನು ಆರಿಸಬೇಕೆಂದು

ಈಗ ಇರುವುದರಿಂದ if I become the Chief Promoter, I cannot control the society for ever. I am only a member just to claim my chairmanship ಅಷ್ಟೆ. ಆ ಚೇರ್‌ಮನ್ ಆಗುವುದು ಅಥವಾ ಬಿಡುವುದು ಸಹಿತ ಅವನಿಗೆ ಹಕ್ಕು ಪ್ರಾಪ್ತಿ ಆಗುವುದಿಲ್ಲ, ಮೊದಲು ಆ ರೀತಿಯಾಗಿರತಕ್ಕಂಥ ಕಾನೂನು ಇತ್ತು ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಭಾರಿ ನೀರಾವರಿ ಸಚಿವರು ಹೇಳುವ ಕಾನೂನನ್ನು ನಾನು ಸಹಕಾರಿ ಸಚಿವನಾಗಿದ್ದಾಗ ಸಹಕಾರಿ ಕಾಯಿದೆಯಲ್ಲಿ ತಂದಿದ್ದೇನೆ. ಮೊದಲು ಚುನಾವಣೆ ಆಗುತ್ತಲೇ ಇರಲಿಲ್ಲ. ಸರ್ಕಾರದಿಂದ ನಾಮಿನೇಟ್ ಮಾಡುತ್ತಿದ್ದರು. ನಾನು ಸಹಕಾರ ಸಚಿವನಾಗಿ ಅಧಿಕಾರ ವಹಿಸಿಕೊಂಡ ಮೇಲೆ ಚುನಾವಣೆ ಮಾಡಬೇಕು, ಫಸ್ಟ್ ಬೋರ್ಡ್ ಕೂಡ ರೂಲ್ಸ್ ಪ್ರಕಾರ ಚುನಾವಣೆ ಆಗಬೇಕೆಂದು ಮಾಡಿದೆ. ಆಗ ಇವರ ಕಡೆಯವರೇ ನಾಮಿನೇಟ್ ಮಾಡಬೇಕೆಂದು ಬಹಳಷ್ಟು ಗಲಾಟೆ ಮಾಡಿ ಕೋರ್ಟಿಗೆ ಕೇಸ್ ಹಾಕಿದರು. ಈಗ ಅದು ಕೋರ್ಟಿನಲ್ಲಿ ಕೇಸ್ ನಡೆಯುತ್ತಿದೆ. ಎಷ್ಟೇ ಗಲಾಟೆ ಮಾಡಿದರೂ ನಾನು ನಾಮಿನೇಟ್ ಮಾಡಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಆ ಚೀಫ್ ಪ್ರಮೋಟರ್ ಅವನಿಗೆ ಎಷ್ಟು ಬೇಕೋ ಅಷ್ಟು ಸದಸ್ಯರನ್ನು ನೇಮಕ ಮಾಡಿಕೊಳ್ಳುತ್ತಾನೆ. ಜನರಲ್ ಬಾಡಿಯಲ್ಲಿ ಅವನೇ ಆಯ್ಕೆಯಾಗಿ ಬರುವಂತೆ ನೋಡಿಕೊಳ್ಳುತ್ತಾನೆ.

ಶ್ರೀ ಎಸ್.ಜಿ. ನಂಜಯ್ಯನಮಠ್ : ಮಾನ್ಯ ಉಪಾಧ್ಯಕ್ಷರೆ, ಗ್ರಾಮಸಭೆಯಲ್ಲಿ ಜಾಹಿರಾತು ಮುಖಾಂತರ ಪ್ರಕಟ ಮಾಡಿಯೇ ನಾವು ಅಲ್ಲಿ ಚೀಫ್ ಪ್ರಮೋಟರನ್ನು ಆರಿಸುತ್ತೇವೆಯೇ ಹೊರತಾಗಿ ಬೇರೆ ಎಲ್ಲಿಯೋ ಕುಳಿತುಕೊಂಡು ಆರಿಸಿರತಕ್ಕಂಥಾದ್ದು ಇಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಶ್ರೀ ನಂಜಯ್ಯನಮಠ್ ಅವರು ಕಳುಹಿಸಿಕೊಟ್ಟಿರತಕ್ಕಂಥ ಸ್ಲಿಪ್‌ನ್ನು ಸನ್ಮಾನ್ಯ ಸಿಂಧ್ಯಾ ಅವರಿಗೆ ಕಳುಹಿಸಿಕೊಡುತ್ತೇನೆ. ಅವರು ಕೃಷ್ಣ ಮೇಲ್ದಂಡೆ ಯೋಜನೆ ವ್ಯಾಪ್ತಿಯೊಳಗೆ 112 ನೀರು ಬಳಕೆದಾರರ ಸಂಘಗಳನ್ನು ಏನು ಸ್ಥಾಪನೆ ಮಾಡಿಸಿದ್ದಾರೆ ಅದರಲ್ಲಿ ಎಷ್ಟು ಮಂದಿ ಕಾಂಗ್ರೆಸ್‌ನವರು ಇದ್ದಾರೆ, ಜನತಾದಳದವರು ಎಷ್ಟು ಮಂದಿ ಇದ್ದಾರೆ, ನಮಗೆ ನಿಮಗೆ ಸಂಬಂಧ ಇಲ್ಲದಿರುವವರು ಎಷ್ಟೆಷ್ಟು ಮಂದಿ ಇದ್ದಾರೆ ಎನ್ನುವ ಪಟ್ಟಿ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಅವರು ಈಗಾಗಲೇ ರಾಜ್ಯದಲ್ಲೆಲ್ಲ ಸರ್ವೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಯಾವ ಯಾವ ಸೊಸೈಟಿಗಳಲ್ಲಿ ಯಾವ ಯಾವ ಪಾರ್ಟಿಯವರು ಇದ್ದಾರೆ, ಅದರಲ್ಲಿ ಅಧ್ಯಕ್ಷರು ಯಾವ ಪಾರ್ಟಿಯವರು ಇದ್ದಾರೆ ಎನ್ನುವ ಬಗ್ಗೆ ಸರ್ವೆ ಮಾಡಿಸಿ ಮಾಹಿತಿ ತರಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಕೆಲಸ ಅವರಿಂದ ನಡೆಯುತ್ತಿದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಬೈರೇಗೌಡರು ತಮ್ಮ ದೀರ್ಘವಾದ ಭಾಷಣದಲ್ಲಿ ಕೃಷಿ ಬಗ್ಗೆ ಹೆಚ್ಚು ಮಾತನಾಡಿದರು. ನಾವು ನೀರಾವರಿ ಸುಧಾರಣೆಗೆ ಏನು ಕಾರ್ಯಕ್ರಮ ತಂದಿದ್ದೇವೆ ಆ ವಿಷಯದ ಮೇಲೆ ಸಾಕಷ್ಟು ಚರ್ಚೆ ಮಾಡಬೇಕಾಗುತ್ತದೆ. ನೀವು ಏನು

ಮಾತನಾಡಿದಿರಿ ಅದರ ಬಗ್ಗೆ ಶ್ರೀ ವೈ.ಕೆ. ರಾಮಯ್ಯ ಅವರು ಉತ್ತರ ಕೊಟ್ಟರು, ಆ ಸಂದರ್ಭದಲ್ಲಿ ನೀವು ಸದನದಲ್ಲಿ ಇರಲಿಲ್ಲ. ಬಹುಶಃ ನೀವು ಮಾಡಿರತಕ್ಕಂಥ ಟೀಕಾತ್ಮಕವಾದಂಥ ಭಾಷಣವನ್ನು ಅವರು ಕೇಳಿ ನಿಮಗೆ ಉತ್ತರ ಕೊಡಬೇಕೆಂದು ಅದೇ ಕ್ಷಣದಲ್ಲಿ ಅವರಿಗೆ ಛಲ ಬಂದಿರಬಹುದು. ಅವರು ನಮ್ಮ ಸಂಘದ ಉದ್ದೇಶವನ್ನು ಪ್ರಸ್ತಾಪ ಮಾಡಿ ಮಾನ್ಯ ಬೈರೇಗೌಡರು ಮಾತನಾಡುತ್ತಾ ಏನು ಆಗಬೇಕು ಎಂದು ಹೇಳಿದರೋ ಅದು ಆಗಬೇಕೆಂದರೆ ಈ ಕಾನೂನಿನ ಮೂಲಕ ನಾವು ಸಂಘಗಳಿಗೆ ಕೊಟ್ಟಿರತಕ್ಕಂಥ ಕರ್ತವ್ಯಗಳು ಏನಿವೆ ಅವುಗಳನ್ನು ಸರಿಯಾಗಿ ನಿಭಾಯಿಸತಕ್ಕಂಥಾದ್ದು ಆಗಬೇಕು. ಸರಿಯಾದ ಜವಾಬ್ದಾರಿಯಿಂದ ಅವರು ನಿಭಾಯಿಸಿದರೆ ಮಾತ್ರ ನಾವು ಅಪೇಕ್ಷೆ ಪಟ್ಟಹಾಗೆ ಬೆಳವಣಿಗೆ, ಅಭಿವೃದ್ಧಿ ಆಗುತ್ತದೆ ಎನ್ನುವ ಮಾತನ್ನು ಶ್ರೀ ರಾಮಯ್ಯ ಅವರು ಹೇಳಿದರು. ಡ್ರಿಪ್ ಇರಿಗೇಷನ್ ಆಗಬೇಕು, ಸ್ಪಿಂಕ್ಲರ್ ಇರಿಗೇಷನ್ ಆಗಬೇಕು ಎಂದು ತಾವು ಏನು ಚಿಂತನೆ ಮಾಡುತ್ತಿದ್ದೀರಿ ಅದು ಒಳ್ಳೆಯದು. ನಾವು ನೀರನ್ನು ಎಷ್ಟು ದುರ್ಬಳಕೆ ಮಾಡುತ್ತೇವೆಂದರೆ 10 ಕ್ಯೂಬಿಕ್ ಮೀಟರ್‌ನಷ್ಟು ನೀರು ಬೇಕಾಗುವ ಕಡೆಗೆ 100 ಕ್ಯೂಬಿಕ್ ಮೀಟರ್‌ನಷ್ಟು ನೀರನ್ನು ಉಪಯೋಗ ಮಾಡಿಬಿಡುತ್ತೇವೆ. ಕೇವಲ ನೀರನ್ನು ಅನಾವಶ್ಯಕವಾಗಿ ಹಾಳು ಮಾಡುವುದು ಮಾತ್ರವಲ್ಲ, ಆ ನೀರನ್ನು ಹೆಚ್ಚಿಗೆ ಬಳಕೆ ಮಾಡುವುದರ ಮೂಲಕ ಆ ಭೂಮಿ ಸಹ ನಿರುಪಯೋಗ ಆಗತಕ್ಕಂಥ, ಜವಳು ಭೂಮಿ ಆಗಿರತಕ್ಕಂಥಾದ್ದನ್ನು ನೋಡಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 50 ಸಾವಿರ ಎಕರೆ ಪ್ರದೇಶ ಚೌಳು ಭೂಮಿಯಾಗಿ, ಸವಕಳು ಭೂಮಿಯಾಗಿ ಇವತ್ತು ಏನೂ ಬೆಳೆಯದಿರತಕ್ಕಂಥ ಪರಿಸ್ಥಿತಿ ಬಂದಿದೆ. ಅದನ್ನು ನಾವು ಸವದತ್ತಿ, ನರಗುಂದ ತಾಲ್ಲೂಕುಗಳಲ್ಲಿ ನೋಡಬಹುದು. ತುಂಗಭದ್ರಾ ಅಚ್ಚುಕಟ್ಟು ಪ್ರದೇಶಗಳಲ್ಲಿ ನೋಡಬಹುದು, ಆ ರೀತಿಯಾಗಿರತಕ್ಕಂಥ ಒಂದು ಅನುಭವದ ಹಿನ್ನೆಲೆಯೊಳಗೆ ನೀರನ್ನು ಸರಿಯಾಗಿ ಉಪಯೋಗ ಮಾಡತಕ್ಕಂಥಾದ್ದಕ್ಕೆ ಶಿಕ್ಷಣ, ತರಬೇತಿ, ಹೊಸ ಹೊಸ ತಂತ್ರಜ್ಞಾನ ಯಾವ ರೀತಿ ಬೇಕು ಎನ್ನುವುದರ ಕಡೆಗೆ ನಮ್ಮ ಗಮನ ಹೆಚ್ಚಾಗಿದೆ. ಈಗ ಇರತಕ್ಕಂಥ ನೀರಿನಲ್ಲಿಯೇ ನಾವು ಇನ್ನೂ ಮೂರು ಪಟ್ಟು ಕ್ಷೇತ್ರಗಳಲ್ಲಿ ಬೆಳೆ ಬೆಳಸಬಹುದು. ಆದರೆ ಹೊಸ ಹೊಸ ತಂತ್ರಜ್ಞಾನವನ್ನು ಉಪಯೋಗ ಮಾಡಬೇಕು. ಫ್ಲೋ ಇರಿಗೇಷನ್ ಬದಲಾಗಿ ಅದನ್ನು ಸ್ಪಿಂಕ್ಲರ್ ಇರಿಗೇಷನ್‌ಗೆ ಶಿಫ್ಟ್ ಮಾಡುವುದಾದರೆ ನಾವು ಈಗ ಎಷ್ಟು ಪ್ರದೇಶದಲ್ಲಿ ಬೆಳೆಯುತ್ತಿದ್ದೇವೆಯೋ ಅದರ ಮೂರು ನಾಲ್ಕು ಪಟ್ಟು ಹೆಚ್ಚಿಗೆ ಪ್ರದೇಶದಲ್ಲಿ ಸಹಜವಾಗಿ ಬೆಳೆ ಬೆಳೆಯಬಹುದು. ಆ ರೀತಿಯಾಗಿರತಕ್ಕಂಥ ಚಿಂತನೆ ನಮ್ಮ ರೈತರಲ್ಲಿ ಬರಬೇಕು ಮತ್ತು ಸರ್ಕಾರ ಕೂಡ ಆ ದಿಶೆಯಲ್ಲಿ ಹೆಜ್ಜೆಯನ್ನು ಹಾಕುತ್ತದೆ. ಇಲ್ಲಿಯವರೆಗೆ ನೀರಾವರಿಯಲ್ಲಿ ಏನು ಪದ್ಧತಿ ಇತ್ತೆಂದರೆ, ಎಲ್ಲಿ ನೀರು ಹರಿದು ಹೋಗುತ್ತದೋ ಅಲ್ಲಿಗೆ ಮಾತ್ರ ನೀರು ಕೊಡುವುದರ ಬಗ್ಗೆ ನೀರಾವರಿ ಇಲಾಖೆಯ ಆದ್ಯತೆ ಇತ್ತು. ಎಲ್ಲ ರಾಜಕೀಯ ಒತ್ತಡ ಇದೆಯೋ ಅಲ್ಲಿ ಲಿಫ್ಟ್ ಇರಿಗೇಷನ್ ಮುಖಾಂತರ ನೀರನ್ನು ಕೊಡುತ್ತಿದ್ದರು. ಆ ಲಿಫ್ಟ್ ಇರಿಗೇಷನ್ ಎಷ್ಟು ಸಫಲವಾಗಿ ನಡೆದಿದೆ, ಎಷ್ಟು ಕಡೆ ಸಫಲವಾಗಿಲ್ಲ ಎನ್ನುವುದು ಮಾನ್ಯ ಬೈರೇಗೌಡರಿಗೆ ಸಹಿತ ಗೊತ್ತಿದೆ. ಇವತ್ತು for the first time in the history of Karnataka. ನಾವು ನೀರಾವರಿಯನ್ನು ಬರಪೀಡಿತ ಪ್ರದೇಶಕ್ಕೆ ತೆಗೆದುಕೊಂಡು ಹೋಗಬೇಕು, ಮುಂಡರಗಿ, ಕೊಪ್ಪಳದಂಥ ತಾಲ್ಲೂಕುಗಳಿಗೆ ತೆಗೆದುಕೊಂಡು ಹೋಗಬೇಕು ಎನ್ನುವಂಥ ಚಿಂತನೆಯನ್ನು ಪ್ರಾರಂಭ ಮಾಡಿದ್ದೇವೆ. ಬರಪೀಡಿತ ಪ್ರದೇಶ, ಮಳೆ

ಆಧಾರಿತ ಪ್ರದೇಶಕ್ಕೆ ನೀರಾವರಿಯನ್ನು ತೆಗೆದುಕೊಂಡು ಹೋಗುವುದಕ್ಕೆ ತಂತ್ರಜ್ಞಾನದ ಬಳಕೆ ಏನು ಮಾಡಿಕೊಳ್ಳಬೇಕೋ ಅದಕ್ಕೆ ಆದ್ಯತೆ ಕೊಡಬೇಕೆಂದು ನಾವು ಒಂದು ತೀರ್ಮಾನ ಅಥವಾ ನಿರ್ಣಯ ಮಾಡಿದ್ದೇವೆ. ಆ ನಿರ್ಣಯದಂತೆ ನಮ್ಮ ಎಲ್ಲಾ ಕನಸು ನನಸಾಗಬೇಕಾದರೆ ಬೆಟರ್ ಇಕ್ವಿಪ್‌ಮೆಂಟ್ಸ್, ಮೆಷಿನರಿ ಬೇಕು. ಆ ಮೆಷಿನರಿ ಈ ಸಹಕಾರಿ ಸಂಘಗಳು ಆಗುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಇನ್ನು ಅಪೆಕ್ಸ್ ಇನ್ಸಿಟ್ಯೂಷನ್ ವಿಚಾರಕ್ಕೆ ಶ್ರೀ ಎಸ್.ಎಸ್. ಪಾಟೀಲರು ಮತ್ತು ಶ್ರೀ ಕೆ. ಶ್ರೀನಿವಾಸಗೌಡರು ಹೆಚ್ಚು ಒತ್ತು ಕೊಟ್ಟು ಮಾತನಾಡಿದರು. ಆ ಅಪೆಕ್ಸ್ ಇನ್ಸಿಟ್ಯೂಷನ್ಸ್‌ಗೆ ಮಂತ್ರಿ ಅಧ್ಯಕ್ಷರಾಗಿದ್ದಾರೆ. ನಮ್ಮ ಸಣ್ಣ ನೀರಾವರಿ ಇಲಾಖೆಯ ಮಂತ್ರಿಗಳು ಉಪಾಧ್ಯಕ್ಷರಾಗಿದ್ದಾರೆ. ಮಂತ್ರಿ ಇದರ ಅಧ್ಯಕ್ಷರಾಗಿರಬೇಕು ಎನ್ನುವ ಆಸೆಯಿಂದ ನಾವು ಆ ಅಧಿಕಾರವನ್ನು ಹೊಂದಿದ್ದಲ್ಲ. ಆ ಹುದ್ದೆ ಯಾರದೂ ಪರ್ಮನೆಂಟ್ ಅಲ್ಲ. ಶೃಂಗ ಮಟ್ಟದ ಸಂಸ್ಥೆಗೆ ಅಂದರೆ ಈ ಅಪೆಕ್ಸ್ ಇನ್ಸಿಟ್ಯೂಷನ್‌ಗೆ ಮಂತ್ರಿಯನ್ನು ಪದನಿಮಿತ್ತ ಅಧ್ಯಕ್ಷರನ್ನಾಗಿ ನಾವು ಏಕೆ ಮಾಡಿದ್ದೇವೆಂದರೆ ಈ ಒಂದು ಫೆಡರೇಷನ್ ಪಾಲಿಸಿ ಮೇಕಿಂಗ್ ಫೆಡರೇಷನ್ ಆಗಿರುತ್ತದೆ. ತಮಗೆ ಗೊತ್ತಿರುವ ಹಾಗೆ ನಮ್ಮ ಸಹಕಾರ ಕ್ಷೇತ್ರದೊಳಗೆ co-operative Federation is supposed to advise the government, supposed to sit with the government and make policies. ಆ ಫೆಡರೇಷನ್‌ನ ಅಧ್ಯಕ್ಷರು ಮಂತ್ರಿಗಳಿಗೆ ನೇರವಾಗಿ ಹೇಳದೇ ಇರತಕ್ಕಂಥ ವಾತಾವರಣ ಇವತ್ತು ಇರುವುದನ್ನು ನಾವು ಈಗಿನ ವ್ಯವಸ್ಥೆಯಲ್ಲಿ ನೋಡುತ್ತಿದ್ದೇವೆ. ಇದು ನಮ್ಮ ನಿಮ್ಮ ಅನುಭವಕ್ಕೆ ಬಂದಿದೆ. ಆದ್ದರಿಂದ ಈ ಒಂದು ಪಾಲಿಸಿ ಮೇಕಿಂಗ್‌ನೊಳಗೆ ಅದರ ಮುಖ್ಯಸ್ಥರಾಗಿ ಮಂತ್ರಿಗಳು ಇರುತ್ತಾರೆ. ಇದರ ಬಗ್ಗೆ ಎರಡು ವರ್ಷ ಕಾದು ನೋಡೋಣ. After two years if you all feel that the Minister's presence or leadership in that federation is not necessary then we will review that. I assure this House that after two years I will sit with all our leaders and we will review the position. If the feeling of all of us is same, I don't mind reconsidering that chairmanship to be changed to democratically elected person.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಭಾರಿ ನೀರಾವರಿ ಸಚಿವರು ಇರುವವರೆಗೆ ಪರವಾಗಿಲ್ಲ. ಏಕೆಂದರೆ ಸಹಕಾರ ಕ್ಷೇತ್ರದಲ್ಲಿ, ಆ ಸಂಸ್ಥೆಯಲ್ಲಿ ನಂಬಿಕೆ ಇರುವಂಥ ಜನ ನೀವು. ನಾಳೆ ಬೆಳಿಗ್ಗೆ ಇದರ ಮೇಲೆ ವಿರೋಧ ಇರುವವರು ಇರಬಹುದು, ವಿರೋಧ ಎಂದರೆ ಅದರ ಮೇಲೆ ನಂಬಿಕೆ ಇಲ್ಲದಿರುವವರು, ಆಗ ಆ ಅಪೆಕ್ಸ್ ಬಾಡಿಯ ಪರಿಸ್ಥಿತಿ ಏನು ಎನ್ನುವುದೇ ನಮ್ಮೆಲ್ಲರ ಚಿಂತನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಏನೇ ಹೇಳಲಿ, ಆದರೆ ಆ ಸಹಕಾರಿ ತತ್ವದ ಆ ಮೂಲ ಆ್ಯಕ್ಟ್‌ಗೆ ವಿರೋಧವಾದಂಥ ವ್ಯವಸ್ಥೆ ಅದು. ಅದು ಇರಬಾರದು. ಶೃಂಗಸಭೆಯನ್ನು ಬೇಕಾದರೆ ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ಮಾಡಿಕೊಳ್ಳಲಿ. ಆದರೆ ಸಹಕಾರಿ ಕಾಯಿದೆ ಏನು ಇದೆಯಲ್ಲಾ ಇದಕ್ಕೆ ವಿರೋಧವಾಗಿ 59 ರ ರಿಜಿಸ್ಟ್ರೇಷನ್ ಈ ಕಾಯಿದೆಯಲ್ಲಿ ಇಲ್ಲ.

ಇದರಲ್ಲಿ ಇದೆಯೋ ಹೇಗೆ ಅದನ್ನು ಹೇಳಬೇಕು. ಈ ಕಾಯಿದೆ ಪ್ರಕಾರ ಯಾರೋ ಒಬ್ಬರನ್ನು ಶಾಶ್ವತವಾದ ಅಧ್ಯಕ್ಷರನ್ನಾಗಿ ಮಾಡಲಿಕ್ಕೆ ಬರುತ್ತದೋ ಹೇಗೆ? ಇದಕ್ಕೆ ವಿರೋಧವಾಗಿ ಮತ್ತೊಂದು ಕಾಯಿದೆ ಮಾಡಲಿಕ್ಕೆ ಹೊರಟಿದ್ದೀರಿ. ಈ ಕಾಯಿದೆಯಲ್ಲಿ ರಚನೆ ಮಾಡುತ್ತಿದ್ದೀರಲ್ಲಾ ಇದು ತಪ್ಪು ಎಂದು ನಾನು ಹೇಳಿದೆ. ಅದನ್ನೇ ನೀವು ಮಾಡುವುದಾದರೆ, ಬೇಕಾದರೆ ಸೊಸೈಟೀಸ್ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ಮಾಡಿಕೊಂಡು ಮಂತ್ರಿಗಳು ಶಾಶ್ವತವಾಗಿ ಅಧ್ಯಕ್ಷರ ಹುದ್ದೆಯಲ್ಲಿ ಇರಲಿ, ಬೇಡ ಎಂದು ನಾನು ಹೇಳುವುದಿಲ್ಲ. ಈ ಕಾಯಿದೆಗೆ ಅಪಚಾರ ಮಾಡಬೇಡಿರಿ ಎನ್ನುವುದೇ ನನ್ನ ವಾದ. ಇದನ್ನು ತಾವು ಒಪ್ಪುತ್ತೀರಾ ಇಲ್ಲವೇ ಎನ್ನುವುದನ್ನು ಹೇಳಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಶ್ರೀ ಎಸ್.ಎಸ್. ಪಾಟೀಲರು ಹೇಳಿರುವ ತಾಂತ್ರಿಕ ಕಾರಣದ ವಿಚಾರದ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಈಗ ಕೆಲವು ಕಾಲ ಅದರ ಅವಶ್ಯಕತೆ ಏಕೆ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಈಗ ಎನ್‌ಸಿಡಿಸಿ ತೆಗೆದುಕೊಳ್ಳೋಣ. ಅದು ಕಾರ್ಪೊರೇಷನ್ ಇರಬಹುದು. But the whole objective is development of the Corporation. Marketing Board, it is not a corporation. But Minister is the Chairman because policy decisions are taken there. ಕೃಷಿ ಇಲಾಖೆಯ ಸಚಿವರು ಅಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸದೇ ಇದ್ದಿದ್ದರೆ ಆ ಸಂಸ್ಥೆಗೆ ಯಾವುದೇ ಅಂತಸ್ತು ಇರುತ್ತಿರಲಿಲ್ಲ, ಅಲ್ಲಿ ಆಗತಕ್ಕಂಥ ಯಾವುದೇ ನಿರ್ಣಯದ ಪರಿಣಾಮ ಸರ್ಕಾರದ ಮೇಲೆ ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅದರ ಜೊತೆಗೆ ಮಧ್ಯಪ್ರದೇಶದಲ್ಲಿಯೂ ಸಹಿತ ಶೃಂಗ ಸಂಸ್ಥೆಗೆ ಅಲ್ಲಿ ಮಂತ್ರಿಗಳಿದ್ದಾರೆ. ಮ್ಯಾಂಕಾಸ್ ಎನ್ನುವ ಒಂದು ಸಂಸ್ಥೆ ಇದೆ, ಅದಕ್ಕೆ ಜಿಲ್ಲಾಧಿಕಾರಿಗಳು ಮೊದಲಿನಿಂದಲೂ ಛೇರ್ಮನ್‌ರಾಗಿದ್ದಾರೆ, ಕೋರ್ಟ್ ತೀರ್ಮಾನ ಏನಾಯಿತು ಎನ್ನುವುದು ಮಾನ್ಯ ಎಸ್.ಎಸ್. ಪಾಟೀಲ್‌ರವರಿಗೆ ಗೊತ್ತಿದೆ. ನಾನು ನಿಮ್ಮ ಸಲಹೆಯನ್ನು ಒಪ್ಪುತ್ತೇನೆ. Deputy Commissioner was made the Chairman and recently even the court decision has said it. If you all feel,if the whole House feels that there should not be a permanent President, ಡೆಮಾಕ್ರೆಟಿಕ್ ಪ್ರೆಸಿಡೆಂಟ್ ಇಲ್ಲದಂತಾಗಿತ್ತು. ಈಗ ನಾವು ಅಧ್ಯಕ್ಷರು, ಉಪಾಧ್ಯಕ್ಷರು ಮಾಡಿದ್ದೇವೆ. ನಾವು ಬಹಳ ಸಂಸ್ಥೆಗಳಲ್ಲಿ ಇವತ್ತು ನೋಡುತ್ತಿದ್ದೇವೆ. ಪ್ರೆಸಿಡೆಂಟ್, ಛೇರ್ಮನ್ ಹಾಗೂ ಎಂ.ಡಿ. ಸ್ಥಾನ ಇರುತ್ತಿತ್ತು. ಕೆಲವು ಕಡೆ ಜನರಲ್ ಬಾಡಿಯನ್ನು ಪ್ರಿಸೈಡ್ ಮಾಡತಕ್ಕಂಥವನು ಅಷ್ಟಕ್ಕೆ ಅವನ ಕೆಲಸ ಮುಗಿಯುತ್ತಿತ್ತು. ಕೆಲವು ಕಡೆ ದಿನದಿಂದ ದಿನಕ್ಕೆ ಆಡಳಿತವನ್ನು ನೋಡಿಕೊಳ್ಳಲು ಛೇರ್ಮನ್ ಇರುತ್ತಿದ್ದನ್ನು, ಬೋರ್ಡಿನಲ್ಲಿ ಪ್ರಿಸೈಡ್ ಮಾಡತಕ್ಕವನು ಅಧ್ಯಕ್ಷನಾಗಿ ಇರುತ್ತಿದ್ದನು. There it is a working President and a President to preside over the boards.ಆ ರೀತಿಯಲ್ಲಿ ನಾನು ತಮ್ಮ ಸಲಹೆಯ ಹಿನ್ನೆಲೆಯೊಳಗೆ ವೈಸ್ ಪ್ರೆಸಿಡೆಂಟ್ ಎನ್ನುವದರ ಬದಲಾಗಿ ವರ್ಕಿಂಗ್ ಪ್ರೆಸಿಡೆಂಟ್ ಎಂದು ಮಾಡುವುದಕ್ಕೆ ಸಾಧ್ಯವಿದೆಯೋ ಹೇಗೆ ಎನ್ನುವುದರ ಬಗ್ಗೆ ಚಿಂತನೆ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ನನಗೆ ಒಂದು ಅಸಮಾಧಾನ ಏನಾಯಿತೆಂದರೆ, ಈ ಬೈಲಾ ಪ್ರಕಾರ ಸಾಕಷ್ಟು ಹೊಸತನವನ್ನು ನಾವು ತೋರಿಸುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಸಾಮಾಜಿಕ ನ್ಯಾಯ ಈ ಕಾನೂನಿನ ಮುಖಾಂತರ,

ನಮ್ಮ ಬೈಲಾ ಮುಖಾಂತರ, ಕೋರ್ಟ್ ನಿಯಮಗಳ ಮುಖಾಂತರ ನಾವು ಕೊಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ಇದರಿಂದ ತಮಗೂ ಸಂತೋಷವಾಗಬಹುದು, ಸಾಕಷ್ಟು ಸಮಯದಲ್ಲಿ ತಾವು ಹಿಂದುಳಿದ ವರ್ಗದವರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತ ಮಾಡುತ್ತಿರುತ್ತೀರಿ. ಪ್ರಥಮಬಾರಿಗೆ ಸಹಕಾರ ಸಂಸ್ಥೆಗಳಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತರಿಗೆ ನಿರ್ದೇಶಕರ ಸ್ಥಾನವನ್ನು ಇಲ್ಲಿ ಮೀಸಲಾಗಿ ಇಟ್ಟಿದ್ದೇವೆ. ಪರಿಶಿಷ್ಟ ಜಾತಿಯವರಿಗೆ ಒಂದು ಸ್ಥಾನವನ್ನು ಮೀಸಲಾಗಿ ಇಡಲಾಗಿದೆ, ಮಹಿಳೆಗೆ ಸ್ಥಾನವನ್ನು ಮೀಸಲಾಗಿ ಇಡಲಾಗಿದೆ. ಮಾನ್ಯ ಬೈರೇಗೌಡರು ಟೈಲೆಂಡರ್ಸ್ ಬಗ್ಗೆ ತಮ್ಮ ಅನುಕಂಪವನ್ನು ವ್ಯಕ್ತಮಾಡಿದರು. ನಾನು ತಮಗೆ ಒಂದು ಭರವಸೆಯನ್ನು ಕೊಡುತ್ತೇನೆ. 8 ಸ್ಥಾನಗಳನ್ನು ನಾವು ಆಯ್ಕೆ ಮಾಡಬೇಕಾಗಿದೆ, ಒಂದು ಹಿಂದುಳಿದ ವರ್ಗದವರಿಗೆ, ಒಂದು ಪರಿಶಿಷ್ಟ ಜನಾಂಗದವರಿಗೆ, ಒಂದು ಸ್ಥಾನವನ್ನು ರೈತ ಮಹಿಳೆಗೆ ಅದರ ಜೊತೆಗೆ ಒಂದು ಸ್ಥಾನವನ್ನು ಟೇಲೆಂಡರ್ ಫಾರ್ಮರ್ಸ್‌ಗೆ ಒಂದು ನಿರ್ದೇಶಕರ ಸ್ಥಾನವನ್ನು ಮೀಸಲಿಡತಕ್ಕಂಥ ನಮ್ಮ ಕೋರ್ಟ್ ನಿಯಮಗಳಲ್ಲಿ ಬದಲಾವಣೆಯನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ತಮಗೆ ಕೊಡುತ್ತೇನೆ. ಈ ನಿಯಮಗಳಿರುವ ಈ ಮಸೂದೆಯನ್ನು ತಾವು ಒಪ್ಪಿದರೆ ಇದರ ಮೂಲಕ ರಾಜ್ಯದಲ್ಲಿರುವ ನೀರಾವರಿಯ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಜೊತೆಗೆ ನಮ್ಮ ನೀರಾವರಿಯ ಒಟ್ಟು ವ್ಯವಸ್ಥೆ ಸಂಪೂರ್ಣವಾಗಿ ಬದಲಾವಣೆಯಾಗಿ ತಾವು ಈಗಾಗಲೇ ಹೇಳಿದಂತೆ ಹಾಗೂ ನನಗೆ ಒಬ್ಬ ನನ್ನ ಸ್ನೇಹಿತರು ಹೇಳಿದಂತೆ, ಚೈನಾದವರ ಮಾಡೆಲ್ ನೀವು ಏಕೆ ನೋಡಬಾರದು? ಚೈನಾದವರ ಮಾದರಿ ಬೇಡ, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ನನಗೆ ಹೇಳಿದರು, ನಿಮ್ಮ ಪಕ್ಷದ ಶಾಸಕರನ್ನು ಕೇಳಿ, ಮಂತ್ರಿಗಳನ್ನು ಕೇಳಲು ಹೇಳಿದರು. ಆದರೆ ನಾನು ಅವರನ್ನು ಅಷ್ಟೇ ಮಾತ್ರ ಕೇಳುವುದಿಲ್ಲ. ನಾನು ತಮ್ಮನ್ನು ಈ ಸದನದ ಶಾಸಕರನ್ನು ಹಾಗೂ ಮೇಲ್ಮನೆಯಲ್ಲಿರತಕ್ಕಂಥ ಶಾಸಕರುಗಳ ಜೊತೆಗೆ ಗ್ರಾಮದಲ್ಲಿರತಕ್ಕಂಥ ರೈತರನ್ನು ಸಹಕಾರ ಸಂಘದ ಮುಖಂಡರನ್ನು ಎಲ್ಲರೂ ಕೂಡಿಕೊಂಡು ಈ ಒಂದು ಕೆಲಸದಲ್ಲಿ ಕೈ ಜೋಡಿಸಿದರೆ, ಚೈನಾದೇಶದ ಮಾದರಿಯನ್ನು ಮರೆಸತಕ್ಕಂಥ ಹಾಗೂ ಚೈನಾದವರು ನಮ್ಮ ಮಾದರಿಯನ್ನು ನೋಡುವಂಥ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡುವುದಕ್ಕೆ ನಮಗೆ ಸಾಧ್ಯವಿದೆ. ಆ ವಿಷಯದಲ್ಲಿ ತಮ್ಮೆಲ್ಲರ ಸಹಕಾರವನ್ನು ಈ ಸಂದರ್ಭದಲ್ಲಿ ಕೇಳಿ, ಈ ಬಿಲನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಾನು ಕೆಲವೊಂದು ಸಂಶಯಗಳನ್ನು ವ್ಯಕ್ತಪಡಿಸಿದ್ದೇನೆ. ಆ ಎರಡು ಸಹಕಾರ ಸಂಘಗಳು ಮುಂದೆ ಬಂದಾಗ, ಮಾನ್ಯ ಸಚಿವರು ಯಾರು ರಿಜಿಸ್ಟ್ರೇಷನ್ ಮಾಡಲು ಮೊದಲು ಕೊಟ್ಟಿರುತ್ತಾರೆ, ಯಾರ ಮೆಂಬರ್‌ಶಿಪ್ ಜಾಸ್ತಿ ಇರುತ್ತದೆ ಅವರಿಗೆ ಆದ್ಯತೆ ಮೇಲೆ ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ನಿನ್ನೆ ಮಾತನಾಡುವಾಗ, ಮಾನ್ಯ ಸಚಿವರಿಗೆ ನಿರ್ದಿಷ್ಟವಾಗಿ ಕೆಲವೊಂದು ಸೊಸೈಟಿಗಳ ಹೆಸರುಗಳನ್ನು ಕೊಟ್ಟಿರುತ್ತೇನೆ. ಇದರಲ್ಲಿ ರಿಜಿಸ್ಟ್ರೇಶನ್ ಮಾಡುವುದರಲ್ಲಿ ಸರಿಯಾಗಿ ಇಂಪ್ಲಿಮೆಂಟ್ ಆಗಿಲ್ಲವೆಂದು ಹೇಳಿದ್ದೇನೆ. ತಾವು ಅಂತಹವುಗಳಿಗೆ ಏನು ಮಾಡುತ್ತೀರಿ? ಕೆಲವರು ರಾಜಕೀಯ ಬಲಾಢ್ಯರು ಇರುತ್ತಾರೆ, ನಮ್ಮ ಮಾನ್ಯ ಚಿಕ್ಕನಗೌಡರು ಹೇಳಿದಂತೆ, ಅವರು ತಾಲ್ಲೂಕಿನಲ್ಲಿ ಕೆಲವರು ಏನು ಮಾಡಿದ್ದಾರೆಂದರೆ........

ಶ್ರೀ ಹೆಚ್.ಕೆ. ಪಾಟೀಲ್ : ಯಾವ ಗ್ರಾಮದಲ್ಲಿ ಆಗಿರುತ್ತವೆ, ಯಾವ ಗ್ರಾಮದಲ್ಲಿ ಇನ್ನು ಯಾವುದು ಮಾಡಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಬಂದಿರುವ ಬಗ್ಗೆ, ತಮಗೆ ಹೆಸರುಗಳನ್ನು ಬೇಕಾದರೆ ಕೊಡುತ್ತೇನೆ. ನಾನು ಮೊದಲಿಗೆ ಸಂಶಯವನ್ನು ವ್ಯಕ್ತಪಡಿಸಿದ್ದೇನೆ. ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದರ ಸಲುವಾಗಿ ಈ ಸಹಕಾರ ಸಂಘಗಳ ದುರುಪಯೋಗವನ್ನು ತೆಗೆದುಕೊಳ್ಳುತ್ತಾರೆ. ನವಲಗುಂದ ತಾಲ್ಲೂಕಿನ ಕೆಲವು ಉದಾಹರಣೆಗಳ ಸಮೇತ ತಮಗೆ ಹೇಳಿರುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಏಕೆಂದರೆ ನಾನು ಏನು ಮಾಡುತ್ತೇನೆ ಎನ್ನುವುದರ ಬಗ್ಗೆ ತಮಗೆ ಹೇಳಿ ಬಿಡುತ್ತೇನೆ. ತಾವು ನಿರ್ದಿಷ್ಟವಾದ ಎರಡು ಉದಾಹರಣೆಗಳನ್ನು ಕೊಟ್ಟಿರುತ್ತೀರಿ. ಕಾಡಾ ಅಡ್ಮಿನಿಸ್ಟ್ರೇಟರನ್ನು ಈ ಸದನ ಮುಗಿಯುವುದರೊಳಗೆ ಬರಮಾಡಿಕೊಂಡು, ತಮ್ಮನ್ನು ಕರೆಯಿಸಿಕೊಂಡು, ಯಾರು ಮೊದಲು ಅರ್ಜಿಯನ್ನು ಕೊಟ್ಟಿದ್ದಾರೆ, ಏಕೆ ಮೊದಲು ಅರ್ಜಿ ಕೊಟ್ಟವರ ಸಹಕಾರ ಸಂಘವನ್ನು ರಿಜಿಸ್ಟರ್ ಮಾಡಲಿಲ್ಲ, ಆದರಲ್ಲಿ ತಪ್ಪಾಗಿದ್ದರೆ, ಅದಕ್ಕೆ ಯಾವ ರೀತಿಯಾದ ನ್ಯಾಯವನ್ನು ಒದಗಿಸಬೇಕು ಎಂಬುದರ ಬಗ್ಗೆ ನಿಮ್ಮ ಜೊತೆಗೆ ಕುಳಿತುಕೊಂಡು ಅವರ ಜೊತೆಯಲ್ಲಿ ಚರ್ಚೆಯನ್ನು ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಇದನ್ನು ಕೋ-ಅಪರೇಟಿವ್ ಆ್ಯಕ್ಟ್ ಪ್ರಕಾರ ಇಟ್ಟುಕೊಂಡಿರುತ್ತೀರಾ? ಕೋ-ಅಪರೇಟಿವ್ ಆ್ಯಕ್ಟ್ ಏನಿದೆ, ಅದು ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಇದ್ದಂತೆ. ಕೆಎಂಎಫ್ ಆಗಿರಲಿ, ಎಜ್ಯುಕೇಶನ್ನ ಸೊಸೈಟಿಗಳು ಇರಲಿ, ವಿವಿಧ ರೀತಿಯ ಕೋ-ಆಪರೇಟಿವ್ ಸೊಸೈಟಿಗಳು ಆದರೂ ಸಹ, ಎಲ್ಲಾ ಸೊಸೈಟಿಗಳು ಪೇರೆಂಟ್ ಕೋ-ಆಪರೇಟಿವ್ ಆ್ಯಕ್ಟ್ ಪ್ರಕಾರ ರಚನೆಯಾಗಬೇಕು. ಕೆಲವು ಸಲ ಅರ್ಬನ್ ಲ್ಯಾಂಡ್ ವಿಚಾರದಲ್ಲಿಯಾಗಲಿ, ಅಥವಾ ರೂರಲ್ ಲ್ಯಾಂಡ್ ವಿಚಾರದಲ್ಲಿಯಾಗಲಿ, ಯಾವುದೇ ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿದರು, ಈ ಪೇರೆಂಟ್ಆ್ಯಕ್ಟ್‌ನ ಪ್ರಕಾರ ಮಾಡಬೇಕಾದದ್ದು ಕಾನೂನಿನ ಅಡಿಯಲ್ಲಿದೆ. ತಾವು ಎಂಸಿಡಿಸಿ ಒಂದು ಉದಾಹರಣೆಯನ್ನು ಕೊಟ್ಟಿರುತ್ತೀರಿ. ಅದರಲ್ಲಿ ಕೃಷಿ ಸಚಿವರು ಅಧ್ಯಕ್ಷರಾಗಿರುತ್ತಾರೆಂದು ಹೇಳಿರುತ್ತೀರಿ. ಮಾನ್ಯ ಕೆ. ಶ್ರೀನಿವಾಸಗೌಡರು ಹೇಳಿದಂತೆ, ಅದು ಕಾರ್ಪೊರೇಷನ್‌ಗೆ ಸಂಬಂದಪಟ್ಟದ್ದಾಗಿದೆ. ಕಾರ್ಪೊರೇಷನ್ ಕಂಪನಿ ಆ್ಯಕ್ಟ್ ಪ್ರಕಾರ ರಿಜಿಸ್ಟರ್ ಮಾಡಿದಾಗ, ಯಾರನ್ನು ಬೇಕಾದರೂ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನಾಗಿ ಮಾಡಿಕೊಳ್ಳಬಹುದು. ಇದನ್ನು ಫೆಡರೇಶನ್ ಎಂದು ಕರೆದ ಮೇಲೆ ಎಷ್ಟು ಸಾವಿರ ಕೋ-ಆಪರೇಟಿವ್ ಸೊಸೈಟಿಗಳಾದರೂ ಸಹ, ಜಿಲ್ಲಾಮಟ್ಟದಲ್ಲಾದರೆ ಜಿಲ್ಲಾಮಟ್ಟದ ಸೊಸೈಟಿ, ರಾಜ್ಯಮಟ್ಟದಲ್ಲಿ ಫೆಡರೇಶನ್ ಎಂದು ಮಾಡಿ ಅಲ್ಲಿಂದ ಆಯ್ಕೆಯಾಗಿ ಬಂದವರು ಅಧ್ಯಕ್ಷರಾಗುವುದು ಈ ಆ್ಯಕ್ಟ್‌ನ ಪ್ರಕಾರ ಸೂಕ್ತವಾಗಿರುತ್ತದೆ. ತಾವು ಇದನ್ನು ಫೆಡರೇಶನ್ ಎಂದು ಕರೆದು ಕಂಪನಿ ಆ್ಯಕ್ಟ್ ಪ್ರಕಾರ ಇದರಲ್ಲಿ ಮಂತ್ರಿಗಳನ್ನು ಸೇರಿಸಿಕೊಳ್ಳುತ್ತೇವೆಂದು ತಾವು ಹೇಳುತ್ತೀರಿ, ಅದು ಕಾನೂನು ಬಾಹಿರವಾಗುವುದಿಲ್ಲವೇ?

SRI H.K. PATIL : You please see Sec. 62 (e). That will empower that will serve the purpose of this small deviation from the co-operative norms.

SRI B. SOMASHEKAR : Small deviation also cannot be effected when the Parent Act is there. ನೀವು ಆ ಪೇರೆಂಟ್ ಆಕ್ಟ್‌ನ ಕೆಳಗಡೆ ಇದನ್ನು ರಚನೆ ಮಾಡಬೇಕೇ ಹೊರತು, ಈ ಒಂದು ಸಣ್ಣ ಬಿಲ್‌ನಲ್ಲಿ ರಚನೆ ಮಾಡಿಕೊಳ್ಳಲು ಬರುವುದಿಲ್ಲ, ತಾವು ಬೇಕಾದರೆ ಸರ್ಕಾರದಲ್ಲಿ ಸಲಹಾ ಬಾಡಿ ಎಂದು ಇಟ್ಟುಕೊಳ್ಳಿ. ಆದರೆ ಫೆಡರೇಶನ್ ಎಂದು ಕರೆದು ಮಂತ್ರಿಗಳು ಅಥವಾ ರಾಜ್ಯಮಂತ್ರಿಗಳು ಇದನ್ನು ಇಟ್ಟುಕೊಳ್ಳಲು ಬರುವುದಿಲ್ಲ. ಇದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ಎರಡನೆಯದಾಗಿ ತಾವು ಹೇಳಿದಂತೆ ಸೈಂಟಿಫಿಕ್ಕಾಗಿ ನೀರನ್ನು ಉಪಯೋಗಿಸಿಕೊಳ್ಳುವುದು ಅದು ಒಳ್ಳೆಯ ಉದ್ದೇಶ. ಪ್ರಬಲವಾಗಿರತಕ್ಕಂಥ ಕೆಲವು ರೈತರು ಅನಧಿಕೃತವಾಗಿ ಏನು ನೀರನ್ನು ಪಡೆದುಕೊಳ್ಳುತ್ತಿದ್ದಾರೆ, ಪಂಪ್‌ಸೆಟ್ ಹಾಕಿ, ಮೋಟರ್ ಹಾಕಿರುತ್ತಾರೆ, ತಾವು ಅದನ್ನು ರದ್ದು ಮಾಡುವುದಕ್ಕೆ ಏನಾದರೂ ಅವಕಾಶವನ್ನು ಇದರಲ್ಲಿ ಮಾಡಿಕೊಂಡಿರುತ್ತೀರಾ? ಕೆರೆಗಳ ನೀರಿನ ಡಿಸ್ಟ್ರಿಬ್ಯೂಟರ್ಸ್‌ನಲ್ಲಿ ಪ್ರಬಲವಾದ ರೈತರು ಟೇಲ್ ಎಂಡರ್ಸ್‌ಗಳಿಗೆ ನೀರು ಹೋಗದಂತೆ ನೋಡಿಕೊಳ್ಳುತ್ತಾರೆ. ಪ್ರಬಲವಾದ ರೈತರು ಅನಧಿಕೃತವಾಗಿ ಪಂಪ್‌ಸೆಟ್ ಹಾಕಿಕೊಳ್ಳುತ್ತಾರೆ, ತಾವು ಆ ನೀರನ್ನು ತೆಗೆದುಕೊಂಡು ಟೇಲೆಂಡರ್‌ಗಳಿಗೆ ನೀರನ್ನು ಬಿಡುವುದಿಲ್ಲ. ತಾವು ಇದರ ಬಗ್ಗೆ ಏನು ಚಿಂತನೆಯನ್ನು ಮಾಡಿರುತ್ತೀರಿ? ಎಲ್ಲಾ ಫಲಾನುಭವಿಗಳನ್ನು ಸದಸ್ಯರನ್ನಾಗಿ ಮಾಡುವುದು, ಎಲ್ಲಾ ಎಸ್‌ಸಿ/ಎಸ್‌ಟಿ ಯವರನ್ನು ಸರ್ಕಾರವೇ ಸದಸ್ಯರನ್ನಾಗಿ ಮಾಡಿಕೊಳ್ಳುವುದು ಈ ಎರಡು-ಮೂರು ಅಂಶಗಳ ಬಗ್ಗೆ ತಾವು ಕ್ಲಾರಿಫಿಕೇಶನ್ ಕೊಡಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ತಾವು ಈಗ ಪ್ರಸ್ತಾಪ ಮಾಡಿದಂತೆ, ಎಸ್‌ಸಿ/ಎಸ್‌ಟಿ ಯವರನ್ನು ಮೆಂಬರ್ ಮಾಡಿಕೊಳ್ಳುವುದಕ್ಕೆ ಸರ್ಕಾರ ಏನು ಹಣಕಾಸನ್ನು ಒದಗಿಸಬೇಕು, ಆ ಹಣಕಾಸಿನ ಸಹಾಯವನ್ನು ಸರ್ಕಾರ ಒದಗಿಸುತ್ತದೆ, ಅವರ ಶೇರ್‌ನ್ನು ಸರ್ಕಾರ ಕೊಡುವುದಕ್ಕೆ ಮುಂದೆ ಬರುತ್ತದೆ ಎನ್ನುವ ಬಗ್ಗೆ ನಾನು ತಮಗೆ ಭರವಸೆಯನ್ನು ಕೊಡುತ್ತೇನೆ. ಎರಡನೆಯದಾಗಿ ಕೆಲವರು ಅನಧಿಕೃತ ಪಂಪ್‌ಸೆಟ್‌ಗಳನ್ನು ಮುಖ್ಯ ಕಾಲುವೆಯ ಮೇಲೆ ಹಾಕಿಕೊಂಡಿದ್ದಾರೆ. ಇನ್ನು ಕೆಲವರು ವಿತರಣಾ ನಾಲೆಯ ಮೇಲೆಯೇ ಹಾಕಿಕೊಂಡಿದ್ದಾರೆ, ಈ ರೀತಿ ಯಾರು ಅನಧಿಕೃತವಾಗಿ ಪಂಪ್‌ಸೆಟ್ ಹಾಕಿಕೊಂಡು ನೀರನ್ನು ಬಳಸುತ್ತಾರೆ ಇವನ್ನೆಲ್ಲಾ ನಾವು ತೆಗೆದು ಹಾಕುತ್ತೇವೆ. ಇನ್ನು ಮುಂದೆ ಈ ಸಮಸ್ಯೆ ಬರಬಾರದು ಎಂದು ನೋಡಿ ನಿಗಾ ವಹಿಸುವ ಉದ್ದೇಶದಿಂದಲೇ ಈ ಸಹಕಾರಿ ಸಂಸ್ಥೆಗಳು ಸಂಪೂರ್ಣವಾದ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಮೊನ್ನೆ ಇದರ ಮೇಲೆ ನಡೆದಂಥ ಚರ್ಚೆಯಲ್ಲಿ, ಎಲ್ಲಾ ಜವಾಬ್ದಾರಿಯನ್ನು ರೈತರ ಮೇಲೆ ಹಾಕುತ್ತೀರಿ, ಅಲ್ಲೆಲ್ಲಾ ವಿತರಣಾ ನಾಲೆ, ಸಿ.ಡಿ.ಗಳು ಎಲ್ಲಾ ಕೆಟ್ಟು ಹೋಗಿವೆ, ಫೀಲ್ಡ್ ಚಾನೆಲ್ ಇಲ್ಲ, ಅಲ್ಲಿ ಯಾವ ಸಿಸ್ಟಂ ಸರಿಯಿಲ್ಲ ಎನ್ನುವ ಟೀಕೆಗಳು ಬಂದವು. ಈ ವಿಚಾರವಾಗಿ ನಾನು ಏನು ಮಾಡುತ್ತೇನೆಂದರೆ, ತಾವು ಬೇಕಾದರೆ ಇದಕ್ಕೆ ಸಲಹೆ ಕೊಡಬಹುದು. ಈಗಿರುವ ವ್ಯವಸ್ಥೆಯಲ್ಲಿ ಹಾಗೂ ಈಗಿರುವ ಮೂಲ ಸೌಲಭ್ಯದಲ್ಲಿ, ನೀರಾವರಿ ಇಲಾಖೆ, ಕಾಡ, ಈ ಸಂಸ್ಥೆಯ ಪ್ರತಿನಿಧಿ, ಈ ಮೂರು ಜನ ಜಂಟಿಯಾಗಿ ಈಗೇನು ರಿಪೇರಿಯಾಗಬೇಕಾಗಿದೆ ಆ ಕೆಲಸವನ್ನು ಇನ್ಸ್‌ಪೆಕ್ಷನ್ ಮಾಡಬೇಕು, ಡ್ಯಾಮೇಜ್ ಆಗಿರುವ ಬಗ್ಗೆ ಇನ್ಸ್‌ಪೆಕ್ಷನ್ ಮಾಡಬೇಕು, ನಂತರ ಇವರು ಕೊಡುವ ವರದಿಯ ಮೇಲೆ ನಾವು ರಿಪೇರಿ ಕೆಲಸ

ತೆಗೆದುಕೊಳ್ಳುತ್ತೇವೆ. And that repair work will supervised by these joint committees. ಇದಾದ ನಂತರ once it is repaired, it will be handed over to these societies or distributory federation. ಫೆಡರೇಶನ್ ಮಾಡುವುದರ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ, ಈ ಒಂದು ವಿಷಯದಲ್ಲಿ ಪರ್ಟಿಕ್ಯುಲರ್ ಕ್ಲಾಸ್ 62(ಇ) ದಲ್ಲಿ ನಾವೇನು ಪ್ರೊವೈಡ್ ಮಾಡಿದ್ದೇವೆ ಅದರ ಪ್ರಕಾರ ಈ ವ್ಯವಸ್ಥೆಯನ್ನು ಮಾಡಬಹುದು, ಇದು ನಮ್ಮ ಕಾನೂನಿನ ಅಭಿಪ್ರಾಯವಾಗಿರುವುದರಿಂದ ನಾವು ಅದರ ಪ್ರಕಾರ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸಚಿವರು, ನಮ್ಮ ಸ್ನೇಹಿತರಾದ ಸೋಮಶೇಖರ್‌ರವರು ಕೇಳಿದ ಪ್ರಶ್ನೆಗೆ 'ಮಾಡಬಹುದು' ಎಂದು ಬಹುಶಃ ತಮ್ಮ ಮನಸ್ಸಿನ ವಿರುದ್ಧವಾಗಿ ಹೇಳಿರಬಹುದು. ಏಕೆಂದರೆ, ಅದರಲ್ಲಿ ಮಾಡಿರುವುದರಿಂದ ಮಾಡಲೇಬೇಕಾಗುತ್ತದೆ ಎಂದು ಹೇಳುವುದು ಅಲ್ಲಿ ಕುಳಿತಿರುವವರು ಸಹಜವಾಗ ಹೇಳಲೇಬೇಕಾಗುತ್ತದೆ. ಆದರೆ, ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳವುದೇನೆಂದರೆ, ಮಂತ್ರಿಯೇ ಛೇರ್‌ಮನ್ ಆಗಬೇಕು ಎನ್ನುವುದಿದ್ದರೆ ಅದನ್ನು ಕೋ-ಆಪರೇಟಿವ್ ಮೇಲೆ ರಿಜಿಸ್ಟ್ರೇಷನ್ ಮಾಡಬೇಡಿ. ಈ ಸಹಕಾರಿ ತತ್ವವನ್ನು ಉಳಿಸಬೇಕು ಎನ್ನುವುದು ನಿಮ್ಮ ತಲೆಯಲ್ಲಿ ಇದ್ದರೆ ಈ ಕೆಲಸ ಮಾಡಬೇಡಿ. ನೀವು ಬೇಕಾದರೆ ಎನ್.ಸಿ.ಡಿ.ಸಿ. ಮಾಡಿಕೊಂಡ ಹಾಗೆ ಮಾಡಿಕೊಳ್ಳಿ. ಕಾರ್ಪೊರೇಷನ್ ಮಾಡಿಕೊಂಡು ಅದರ ಮೇಲೆ ನಿಮ್ಮ ಹಿಡಿತ ಇಟ್ಟುಕೊಂಡು ಅಲ್ಲಿ ನೀವು ಹೇಗೆ ಬೇಕೊ ಹಾಗೆ ಮಾಡಿಕೊಳ್ಳಿ, ಇದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ತಾವು ಮಾತನಾಡುವಾಗ ವರ್ಕಿಂಗ್ ಪ್ರೆಸಿಡೆಂಟ್ ಮಾಡುತ್ತೇನೆ, ನೋಡೋಣ ಎನ್ನತಕ್ಕಂಥ ಮಾತನ್ನು ಹೇಳಿದಿರಿ, ತಾವು ಈಗ ಅರ್ಬನ್ ಬ್ಯಾಂಕ್ ಫೆಡರೇಷನ್‌ನಿನ ಅಧ್ಯಕ್ಷರು ಆಗಿದ್ದೀರಿ, ಸಹಕಾರಿ ಸಚಿವರನ್ನು ಅಲ್ಲಿಗೆ ಅಧ್ಯಕ್ಷರನ್ನಾಗಿ ಮಾಡಬಹುದಾಗಿತ್ತಲ್ಲವೇ? ನೀವು ಅಲ್ಲಿ ಏಕೆ ಮಾಡಲಿಲ್ಲ? ಅದೇ ಮಾದರಿಯಲ್ಲಿ ಇಲ್ಲಿ ಮಾಡಿ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಈ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ತಾವು ಮಾಡಬಾರದು. ತಾವು ಈಗ ಮಾಡಿರುವುದು ಸರಿಯೆ, ಅದೇ ರೀತಿಯಲ್ಲಿ ಇಲ್ಲಿ ಕೂಡ ಚುನಾಯಿತ ಪ್ರತಿನಿಧಿಯನ್ನು ಪ್ರೆಸಿಡೆಂಟ್ ಮಾಡಿ, ತಾವು ಬೇಕಾದರೆ ವರ್ಕಿಂಗ್ ಪ್ರೆಸಿಡೆಂಟನ್ನು ಎಕ್ಸ್-ಅಫಿಸಿಯೋ ಆಗಿ ಮಿನಿಸ್ಟರನ್ನು ಬೇಕಾದರೆ ಡೈರಕ್ಟರನ್ನಾಗಿ ಮಾಡಿಕೊಳ್ಳಿ. ಈ ರೀತಿ ಮಾಡಿದರೂ ಕೂಡ ತಪ್ಪಾಗುತ್ತದೆ. ಕಾಯಿದೆ ಬದ್ಧವಾಗಿ ಹೇಳಬೇಕಾದರೆ ಇದು ಕೂಡ ತಪ್ಪಾಗುತ್ತದೆ. ಇದರ ಜೊತೆಗೆ ತಾವು ಮಾತನಾಡುತ್ತಾ, ಈಗಾಗಲೇ ಒಂದು ಸುತ್ತೋಲೆ ಹೊರಡಿಸಿದೆ, ಯಾರು ಮೊದಲು ಬಂದು ಅರ್ಜಿ ಕೊಡುತ್ತಾರೆ ಅವರದು ಮಾಡಿ ಎಂದು ಹೇಳಿದೆ ಎಂದು ಹೇಳಿದಿರಿ, ಇದೂ ಕೂಡ ತಪ್ಪು, ನೀವು ಈ ರೀತಿ ಮಾಡುವುದರ ಬದಲಾಗಿ ಎಲ್ಲರಿಗೂ ನೋಟೀಸ್ ಕೊಡಿ, ಆ ದಿನ ಎಷ್ಟು ಜನ ಅಲ್ಲಿಗೆ ಬರುತ್ತಾರೆ ಅದನ್ನು ನೋಡಿಕೊಂಡು ನಂತರ ಮಾಡಿದರೆ ಚೆನ್ನಾಗಿರುತ್ತಿತ್ತು. ಪರಂತು ಅಲ್ಲಿ ಆ ರೀತಿ ನಡೆದಿಲ್ಲ. ಆದ್ದರಿಂದ ಈ ರೀತಿಯಾಗಿ ಅಲ್ಲಿ ನಡೆದಿದ್ದವು ಎಂದರೆ ಆ ಸಂಘಗಳ ರಿಜಿಸ್ಟ್ರೇಶನ್ ರದ್ದುಪಡಿಸಿ ಪುನಃ ನಾನು ಹೇಳಿದ ರೀತಿಯಲ್ಲಿ ಕರೆದು ಈ ರೀತಿ ಮಾಡುತ್ತೀರಾ? ದುರ್ದೈವದಿಂದಾಗಿ ಇದನ್ನು ನಿಮಗೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅಲ್ಲಿ ರಾಜಕೀಯ ಬರುತ್ತದೆ, ನಿಮ್ಮ ಮನಸ್ಸು ಇದ್ದರೂ ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ನಿಮ್ಮ ಕೈಯಲ್ಲಿ

ಈ ಕೆಲಸ ಆಗುವುದಿಲ್ಲ. ಏಕೆಂದರೆ, ನಿಮಗೂ ಎಲ್ಲಾ ಕಡೆಯಿಂದ ಒತ್ತಡ ಬರುತ್ತದೆ, ಈ ವಿಚಾರ ಕೂಡ ನಮಗೆ ಗೊತ್ತಿದೆ.

ಶ್ರೀ ಕೆ. ಷಡಕ್ಷರಿ : ತಾವು ಕೂಡ ಸಹಕಾರಿ ಸಚಿವರು ಇದ್ದಾಗ ಇದೇ ಅನುಭವ ತಮಗೆ ಆಗಿತ್ತು ಅಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ : ಇದು ಸರಿಯಾಗಿ ಆಗದಿದ್ರೆ ಇದನ್ನು ರದ್ದು ಮಾಡಿ ಮತ್ತೊಂದನ್ನು ತರೋಣವೆಂದು ನೀವು ಎಲ್ಲಾ ಶಾಸಕರು ಒಪ್ಪಿಕೊಳ್ಳಿರಿ. ಈ ಮಾತನ್ನು ನೀವು ಹೇಳುವುದಕ್ಕೆ ಆಗುವುದಿಲ್ಲ. ನಾನು ಆ ರೀತಿ ಮಾಡಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನೀವು ಮಾಡಿಲ್ಲವೆಂದು ಹೇಳಿದಿರಿ, ಗದಗ್‌ನಲ್ಲಿ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಯೂನಿಯನ್ ಮಾಡಿದಿರಿ, ಮಾನ್ಯ ಯಾವಗಲ್ ಹಾಗೂ ನಾನು ಕೂಡ ಕೋ-ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಇದ್ದೇವೆ. ನಮಗೆ ಗೊತ್ತಾಗದ ರೀತಿಯಲ್ಲಿ ಇದನ್ನು ಮಾಡಿದರಲ್ಲಾ ಇದು ಹೇಗೆ? ನೀವು ದಯಮಾಡಿ ಮಾಡಿಲ್ಲವೆಂದು ಹೇಳಬೇಡಿ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಈಗ ಸ್ಪಷ್ಟವಾಗಿ ಹೇಳುತ್ತೇನೆ, ನಾನು ಇದನ್ನು ಮಾಡಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನೀವು ಮಾಡಿಲ್ಲ ಎಂದರೆ ನಿಮ್ಮ ಮಗ ಮಾಡಿದ್ದಾನೆ.

ಶ್ರೀ ಎಸ್.ಎಸ್. ಪಾಟೀಲ್ : ನಾವು ಇಲ್ಲಿ ಚುನಾವಣೆಯನ್ನು ಮಾಡಿದ್ದೇವೆ, ಹಾಗೆಯೇ ರಿಜಿಸ್ಟ್ರೇಷನ್ ಮಾಡಿ ನಾಮಿನೇಷನ್ ಮಾಡಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನಾನು ನಾಮಿನೇಷನ್ ಬಗ್ಗೆ ಹೇಳಲಿಲ್ಲ, ರಿಜಿಸ್ಟ್ರೇಷನ್ ಟೈಮ್‌ನಲ್ಲಿ ನಾನು ಒಬ್ಬ ಶಾಸಕ ಹಾಗೂ ಸಹಕಾರಿ ಮನೋಭಾವವುಳ್ಳವನು, ಅದೇ ರೀತಿಯಲ್ಲಿ ಮಾನ್ಯ ಯಾವಗಲ್‌ರವರು ಕೂಡ ಶಾಸಕರು ಹಾಗೂ ಉತ್ತಮ ಸಹಕಾರಿ ಮನೋಭಾವವುಳ್ಳವರು ಆಗಿದ್ದರೂ, ನಮ್ಮನ್ನು ಯಾರು ಇವರು ಆಹ್ವಾನ ಮಾಡಿಲ್ಲ, ರಿಜಿಸ್ಟ್ರೇಷನ್‌ನಲ್ಲಿ ಇನ್‌ವಾಲ್ವ್ ಆಗುವ ಹಾಗೆ ನೀವು ಮಾಡಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ನಾನು ಸ್ಪಷ್ಟವಾಗಿ ಹೇಳುತ್ತೇನೆ ನಾನು ಇದನ್ನು ಮಾಡಿಲ್ಲ.

(ಗೊಂದಲ)

ಶ್ರೀ ಎಸ್.ಎಸ್ ಬೋಸರಾಜು : ನಮ್ಮ ರಾಯಚೂರು ಜಿಲ್ಲೆಯಲ್ಲಿ ಇಂಥವು ನೂರಾರು ಆಗಿದೆ. ಉದಾಹರಣೆ ಬೇಕಾದರೆ ನಾನು ಹೇಳುತ್ತೇನೆ. ತಮ್ಮ ಕಾಲದಲ್ಲಿ ಆಗಿವೆ.

(ಗೊಂದಲ)

ಶ್ರೀ ಕೆ. ಷಡಕ್ಷರಿ : ಆ ಕಡೆ ಇದ್ದಾಗ ಎಲ್ಲಾ ಮಾಡಿ ಈ ಕಡೆ ಬಂದು ಏನು ಮಾಡಿಲ್ಲವೆಂದು ಹೇಳುತ್ತೀರಾ?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಆ ಬೈಲಾದಲ್ಲಿ ಬೋರ್ಡ್‌ನವರಿಗೆ ಅಧಿಕಾರ ಕೊಟ್ಟಿದ್ದೆವು. ಮೆಂಬರ್ ಮಾಡಿಕೊಳ್ಳಬಹುದು ಅಥವಾ ಬಿಡಬಹುದು ಎಂದು ಇತ್ತು. ಇದನ್ನು ನೀವು ತೆಗೆಯುತ್ತೀರಾ? ದಯಮಾಡಿ ಇದನ್ನು ತೆಗೆಯಿರಿ. ನೀವು ಮೇಲೆ ಬೈಲಾದಲ್ಲಿ ಮೆಂಬರ್ ಮಾಡಿಕೊಳ್ಳುವ ಅಧಿಕಾರ ಅವರಿಗೆ ಕೊಟ್ಟಿದ್ದೀರಿ, ಬೇಕಾದರೆ ಅದನ್ನು ಓದಿ ಎಂದರೆ ಓದುತ್ತೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ನಾನು ಆ ರೀತಿ ಮಾಡಿದ್ದಕ್ಕೆ ನೀವು ಎಲ್ಲರೂ ಪುನಃ ಬಂದಿರುವುದು. ಈ ರೀತಿ ನಿಮಗೆ ಮೆಜಾರಿಟಿ ಇದೆ, ನಾವು ಮಾಡಿಕೊಂಡು ಹೋಗುತ್ತೇವೆ ಎಂದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಪಾಟೀಲರೆ, ನೀವು ಮಾತನಾಡುವಾಗ ಈಗಾಗಲೇ ಎಲ್ಲಾ ಪ್ರಸ್ತಾಪ ಮಾಡಿದಿರಿ, ಪುನಃ ಪುನಃ ಇದನ್ನೇ ಏಕೆ ಹೇಳುತ್ತೀರಿ? ಮುಗಿಸಿ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಇದನ್ನು ರದ್ದು ಮಾಡುತ್ತೀರೋ ಅಥವಾ ಬಿಡುತ್ತೀರೋ ಅದು ಬೇರೆ ವಿಚಾರ. ಇದು ಆಗದೇ ಇದ್ದರೆ ಎರಡೆರಡು ಪ್ರಸ್ತಾವನೆಗಳು ಏನು ಇವೆ ಇವು ಅದೇ ಏರಿಯಾಕ್ಕೆ ಬಂದಿವೆ, ಒಂದನ್ನು ನೀವು ರಿಜಿಸ್ಟ್ರೇಷನ್ ಮಾಡಿದಿರಿ, ಇನ್ನೊಂದನ್ನು ಕನಿಷ್ಟಪಕ್ಷ ಮೆಂಬರರನ್ನಾಗಿಸಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಪಾಟೀಲರು ಈಗೇನು ಹೇಳಿದರು, ಅವರನ್ನು ಮೆಂಬರ್ಸ್ ಮಾಡುವುದಷ್ಟೇ ಅಲ್ಲ ಇದರ ಜೊತೆಗೆ ಅಚ್ಚುಕಟ್ಟು ಪ್ರದೇಶದಲ್ಲಿರುವ ರೈತರನ್ನು ಮೆಂಬರ್ಸ್ ಮಾಡಸದೇ ಹೋದರೆ ಇದನ್ನು ಮಾಡಿಸುವ ಜವಾಬ್ದಾರಿ ಸರ್ಕಾರವೇ ವಹಿಸಿಕೊಳ್ಳುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಚುನಾಯಿತ ಪ್ರತಿನಿಧಿಯನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರೋ ಇಲ್ಲವೊ ಅದನ್ನು ಮೊದಲು ಹೇಳಿ. ಇದನ್ನು ಒಪ್ಪುತ್ತಿರೋ ಇಲ್ಲವೋ?

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ನೀವು ರೈತರನ್ನು ಕೇಳಿ ಈ ಬಗ್ಗೆ ಮಾತನಾಡಿ. ಇದು ತಪ್ಪು ಎಂದರೆ ನಾನು ಒಪ್ಪುತ್ತೇನೆ. ಆದರೆ ಬೆಂಗಳೂರಿನಲ್ಲಿ ಕುಳಿತು ಈ ಬಗ್ಗೆ ಮಾತನಾಡಿದರೆ ನಾನು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ನೀವೇನು ರಿಜಿಸ್ಟ್ರೇಷನ್ ಆಗಬೇಕು, 500 ರಿಂದ 700 ಆಗಬೇಕು, ಸಿ.ಎ.ರವರಿಂದ ಆಡಿಟ್ ಆಗಬೇಕು ಎಂದು ತಾವು ಹೇಳುತ್ತೀರಿ, ಬಹುಶಃ ನಿಮಗೆ ಗೊತ್ತಿರಲಿಕ್ಕಿಲ್ಲ ಇದರಲ್ಲಿ ನಾವು 12 ವರ್ಷ ಕಳೆದಿದ್ದೇವೆ.

6.10 ಪಿ.ಎಂ.

ಮೊದಲೇ ರಿಜಿಸ್ಟರ್ಡ್ ಸೊಸೈಟಿ ಆಗಬೇಕೆಂದು ಅಡಿಷನಲ್ ಚೀಫ್ ಸೆಕ್ರೇಟರಿಯವರ ನೇತೃತ್ವದಲ್ಲಿ ಸ್ಟಡಿ ಮಾಡುವುದಕ್ಕೆ ಒಂದು ಎನ್‌ಕ್ವಯರಿ ಕಮಿಟಿ ಮಾಡಲಾಗಿತ್ತು. ಇವರು ಹತ್ತಾರು ಕಡೆ ಹೋಗಿ ಒಂದು ಸೊಸೈಟಿ ಮಾಡಬೇಕೆಂದು ಹೇಳಿದರು. ಆದರೆ ಇದನ್ನು ಮತ್ತೆ ಪರಿಶೀಲನೆ ಮಾಡಬೇಕೆಂದು ಮತ್ತೊಂದು ಕಮಿಟಿ ರಚನೆ ಆಯಿತು. ಈ ರೀತಿಯಾಗಿ 12 ವರ್ಷ ಕಳೆದು ಹೋಗಿದೆ. ಇದರ ವ್ಯಾಪ್ತಿ ಎಷ್ಟು ಇರಬೇಕೆಂಬುದರ ಬಗ್ಗೆ ವೈಜ್ಞಾನಿಕವಾಗಿ ಚರ್ಚೆ ಮಾಡಿ ಹ್ಯಾಂಡಿ ಯುನಿಟ್ ಮಾಡುವುದಕ್ಕಾಗಿ ಈಗ 500 ಹೆಕ್ಟೇರ್‌ಗಳನ್ನು ತೆಗೆದುಕೊಂಡಿದ್ದೇವೆ. ನಮ್ಮ ಅನುಭವ ಇಲ್ಲಿಗೆ ಮುಗಿದು ಹೋಗುವುದಿಲ್ಲ. ಹಾಗೆಯೇ ಬದಲಾವಣೆ ಮಾಡುವುದಕ್ಕೆ ಆಗದೇ ಇರತಕ್ಕಂಥ ಭಗವದ್ಗೀತೆ ಅಥವಾ ಬೈಬಲ್ ಏನು ಅಲ್ಲ. ಅಕಸ್ಮಾತ್ ಎರಡು ವರ್ಷಗಳ ನಂತರ ಇದು ಸರಿಯಲ್ಲವೆಂದು ನೀವು ಹೇಳಿದ ಪಕ್ಷದಲ್ಲಿ 500 ಹೆಕ್ಟೇರ್ ಇರತಕ್ಕಂಥಾದನ್ನು 700 ಹೆಕ್ಟೇರ್ ಮಾಡೋಣ. ಅಥವಾ 500 ಹೆಕ್ಟೇರ್ ಇರುವುದನ್ನು ಬೇಕಾದರೆ 400 ಹೆಕ್ಟೇರ್ ಮಾಡೋಣ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"2000ದ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಉಪಾಧ್ಯಕ್ಷರು : "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀಘ ಶೀಷಿಕೆ ಪ್ರ ಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 2000 ದ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

``2000 ದ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 2000ದ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 1.4.2000 ಕ್ಕೆ ಮುಂಚೆ ಕನ್ನಡೇತರ ಚಲನಚಿತ್ರಗಳಿಗೆ ಮನೋರಂಜನಾ ತೆರಿಗೆಯನ್ನು 70 ಪರ್ಸೆಂಟ್‌ನಷ್ಟು ವಿಧಿಸಲಾಗಿತ್ತು. ಆದರೆ ನಮ್ಮ ಬಜೆಟ್ ನಂತರ ಮನೋರಂಜನಾ ತೆರಿಗೆಯನ್ನು 100 ಪರ್ಸೆಂಟ್‌ಗೆ ಏರಿಸತಕ್ಕಂಥ ಸಂದರ್ಭದಲ್ಲಿ ಅನೇಕ ಚಲನಚಿತ್ರ ಮಂದಿರಗಳ ಮಾಲೀಕರು ಮತ್ತು ಪ್ರೇಕ್ಷಕ ವರ್ಗದವರು ಹಾಗೂ ಜನಪ್ರತಿನಿಧಿಗಳು ಸೇರಿ ಮನೋರಂಜನಾ ತೆರಿಗೆಯನ್ನು ಏರಿಕೆ ಮಾಡಿರುವಂಥದ್ದು ಜಾಸ್ತಿಯಾಗಿದೆ. ಆದ್ದರಿಂದ ಇದನ್ನು ಕಡಿಮೆ ಮಾಡಿಕೊಡಬೇಕೆಂಬ ಪ್ರಸ್ತಾವನೆಯ ಹಿನ್ನಲೆಯಲ್ಲಿ 100 ಪರ್ಸೆಂಟ್‌ಗೆ ಏರಿಸಿದಂಥ ತೆರಿಗೆಯನ್ನು ಈಗ 80 ಪರ್ಸೆಂಟ್‌ಗೆ ಇಳಿಸುವ ದೃಷ್ಟಿಯಿಂದ ಹಾಗೆಯೇ